ಸಂಪುಟ: 04 ಸಂಚಿಕೆ: 120 ಪುಟಗಳು: 08 ಶನಿವಾರ 13 ಜುಲೈ 2024

www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

**ಮುಂಜಾನೆ ಮಾತು**

ಯುವಜನರ ಕರ್ತವ್ಯವೆಂದರೆ ಅವರು ತಮ್ಮ, ತಮ್ಮ ಕುಟುಂಬ, ಸಮಾಜ ಮತ್ತು ರಾಷ್ಟ್ರದ ವಿಚಾರದಲ್ಲಿ ಹೊಣೆಗಾರರಾಗಿರುವುದು

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ಚಾಮುಂಡಿ ಬೆಟ್ಟದಲ್ಲಿ ಮೊದಲ ಆಷಾಢ ಶುಕ್ರವಾರ ಸಂಭ್ರಮ

• ಉದಯವಾಹಿನಿ, ಮೈಸೂರು

ಚಾಮುಂಡಿ ಬೆಟ್ಟದಲ್ಲಿ ಮೊದಲ ಆಷಾಢ ಶುಕ್ರವಾರದ ಹಿನ್ನೆಲೆಯಲ್ಲಿ ನಾಡಿನ ಅಧಿದೇವತೆ ಚಾಮುಂಡೇಶ್ವರಿಗೆ ವಿಶೇಷ ಲಕ್ಷ್ಮೀ ಅಲಂಕಾರ ಮಾಡಲಾಗಿದೆ.

ಮೊದಲನೇ ಆಷಾಢ ಶುಕ್ರವಾರ ಪ್ರಯುಕ್ತ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭಕ್ತ ಸಾಗರವೇ ಹರಿದು ಬಂದಿತ್ತು. ಮುಂಜಾನೆಯಿಂದಲೇ ಶ್ರೀ ಚಾಮುಂಡೇಶ್ವರಿ ತಾಯಿಗೆ ಅಭಿಷೇಕ, ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ನಾಡಿನ ಮೂಲೆ ಮೂಲೆಗಳಿಂದ ಸಹಸ್ರಾರು ಭಕ್ತರು ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ್ದರು. ಧರ್ಮ ದರ್ಶನ,100 ರೂ, ಹಾಗೂ 300 ರೂಪಾಯಿಗಳ ವಿಶೇಷ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಭಕ್ತಾದಿಗಳಿಗೆ ಕುಡಿಯುವ ನೀರು, ಉಪಾಹಾರ, ಪ್ರಸಾದ ವಿತರಣೆ, ವಾಹನಗಳ ನಿಲುಗಡೆ, ಶೌಚಾಲಯ ಸೇರಿದಂತೆ ಎಲ್ಲಾ ಮೂಲಭೂತ ಸೌಕರ್ಯಗಳನ್ನ ಜಿಲ್ಲಾಡಳಿತದಿಂದ ಒದಗಿಸಲಾಗಿತ್ತು. ಸರತಿ ಸಾಲಿನಲ್ಲಿ ದರ್ಶನಕ್ಕೆ ಹೋಗುವ ಭಕ್ತರಿಗೆ ನೆರಳಿನ ವ್ಯವಸ್ಥೆ ಮಾಡಲಾಗುತ್ತಿದ್ದು, ನೂಕುನುಗ್ಗಲು ಉಂಟಾಗಬಾರದು ಎಂದು ಬ್ಯಾರಿಕೇಡ್ ವ್ಯವಸ್ಥೆ. ಸಿಸಿಟಿವಿ ಅಳವಡಿಕೆ, ಅಶ್ವದಳ ಪೊಲೀಸ್ ಸಿಬ್ಬಂದಿ, ದೇವಸ್ಥಾನ ಸುತ್ತ ಪೊಲೀಸ್ ಬಿಗಿಬಂದೋಬಸ್ತ್ ಮಾಡಲಾಗಿದೆ.

## ಜೂ.25 ನ್ನು 'ಸಂವಿಧಾನ ಹತ್ಯಾ' ದಿನವನ್ನಾಗಿ ಘೋಷಿಸಿದ ಸರ್ಕಾರ

• ಉದಯವಾಹಿನಿ, ಬೆಂಗಳೂರು

ಮಾಜಿ ಪ್ರಧಾನಿ ಇಂದಿರಾಗಾಂಧಿಯವರು 1975 ರಲ್ಲಿ ದೇಶದ ಮೇಲೆ ತುರ್ತು ಪರಿಸ್ಥಿತಿಯನ್ನು ಹೇರಿದ್ದನ್ನು ವಿರೋಧಿಸಿ ಕೇಂದ್ರ ಸರ್ಕಾರ ಜೂನ್ 25ನ್ನು 'ಸಂವಿಧಾನ ಹತ್ಯಾ' ದಿನವನ್ನಾಗಿ ಘೋಷಿಸಿದೆ. ಅಂದು ಈ ಕರಾಳ ದಿನವನ್ನು ನೆನೆದು ಇಂತಹ ದಿನಗಳು ಮತ್ತೆ ಮರುಕಳಿಸದಿರಲಿ ಎಂದು ಪ್ರಾರ್ಥಿಸಲಾಗುತ್ತದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಈ ಕುರಿತಂತೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿದ್ದು, ಜೂನ್ 25, 1975 ರಲ್ಲಿ ಅಂದಿನ ಪ್ರಧಾನಿ ಇಂದಿರಾಗಾಂಧಿಯವರು ತಮ್ಮ ಸರ್ವಾಧಿಕಾರತ್ವವನ್ನು ಪ್ರದರ್ಶಿಸಿದ್ದರು. ಈ ಮೂಲಕ ಮಾಧ್ಯಮ ಸೇರಿದಂತೆ ಎಲ್ಲಾರ ಧ್ವನಿ ಅಡಗಿಸಿದ್ದರು. ಇಂತಹ ಕರಾಳ ದಿನವನ್ನು ಈಗ ಸಂವಿಧಾನ ಹತ್ಯಾ ದಿನವನ್ನಾಗಿ ಆಚರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದಿದ್ದಾರೆ. ಪ್ರತಿ ವರ್ಷ ಜೂನ್ 25ರಂದು ತುರ್ತು ಪರಿಸ್ಥಿತಿ ವಿರೋಧಿಸಿ ಹೋರಾಟ ಮಾಡಿದ ಮಹನೀಯರನ್ನು ಸ್ಮರಿಸುವುದರ ಜೊತೆಗೆ ತುರ್ತು ಪರಿಸ್ಥಿತಿ ಕಾರಣಕ್ಕೆ ಉದ್ಭವಿಸಿದ ಸಮಸ್ಯೆಗಳನ್ನು ಸಹ ನೆನೆಯಲಾಗುತ್ತದೆ.

## ವಿಧಾನಸೌಧದ ಸುತ್ತ 2 ಕಿ.ಮೀ ವ್ಯಾಪ್ತಿಯಲ್ಲಿ 'ನಿಷೇಧಾಜ್ಞೆ' ಜಾರಿ

• ಉದಯವಾಹಿನಿ, ಬೆಂಗಳೂರು

ಜುಲೈ 15 ರಿಂದ ವಿಧಾನಮಂಡಲ ಅಧಿವೇಶನ ನಡೆಯಲಿದ್ದು, ಈ ಹಿನ್ನೆಲೆ ವಿಧಾನಸೌಧದ ಸುತ್ತಾಮುತ್ತ 2 ಕಿಮೀ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ (ಸೆಕ್ಷನ್ 144) ಜಾರಿಗೊಳಿಸಲಾಗಿದೆ. ಪ್ರತಿದಿನ ಬೆಳಗ್ಗೆ 6 ರಿಂದ ರಾತ್ರಿ 12 ಗಂಟೆವರೆಗೆ ನಿಷೇಧಾಜ್ಞೆ ಜಾರಿಯಲ್ಲಿರಲಿದ್ದು, ಈ ಅವಧಿಯಲ್ಲಿ ಐದಕ್ಕಿಂತ ಹೆಚ್ಚು ಮಂದಿ ಗುಂಪು ಸೇರುವುದು, ಮೆರವಣಿಗೆ ಮತ್ತು ಸಭೆ ಸೇರುವುದು, ಸ್ಫೋಟಕ ಸಿಡಿಸುವುದು, ಪ್ರತಿಕೃತಿ ದಹನ, ಘೋಷಣೆಗಳನ್ನು ಕೂಗುವುದು, ಶಸ್ತ್ರಾಸ್ತ್ರ ಹಾಗೂ ಮಾರಕಾಸ್ತ್ರಗಳನ್ನು ಒಯ್ಯುವುದನ್ನು ನಿಷೇಧಿಸಲಾಗಿದೆ ಎಂದೂ ಆದೇಶದಲ್ಲಿ ತಿಳಿಸಿದ್ದಾರೆ. 6ನೇ ವಿಧಾನಸಭೆಯ 4ನೇ ಮುಂಗಾರು ಅಧಿವೇಶನ ಜುಲೈ 15 ರಿಂದ 26ರವರೆಗೆ ನಡೆಯಲಿದೆ ಎಂದು ಸ್ಪೀಕರ್ ಯು ಟಿ ಖಾದರ್ ತಿಳಿಸಿದರು. ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜುಲೈ 15 ರಿಂದ ಒಟ್ಟು 9 ದಿನಗಳ ಕಾಲ ಅಧಿವೇಶನ ನಡೆಯಲಿದೆ. ಅಧಿವೇಶನದಲ್ಲಿ ಸರ್ಕಾರದಿಂದ ಸ್ವೀಕರಿಸಲಾಗುವ ವಿಧೇಯಕಗಳನ್ನ ಪರ್ಯಾಲೋಚನೆಗೆ ಹಾಗೂ ಅಂಗೀಕಾರಕ್ಕೆ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು.

## ಮೊದಲು ಬಂದವರಿಗೆ ಬಹುಮಾನ ಸ್ಪೀಕರ್ ಖಾದರ್ ಘೋಷಣೆ

• ಉದಯವಾಹಿನಿ, ಬೆಂಗಳೂರು

6ನೇ ವಿಧಾನಸಭೆಯ 4ನೇ ಮುಂಗಾರು ಅಧಿವೇಶನ ಜುಲೈ 15 ರಿಂದ 26ರವರೆಗೆ ನಡೆಯಲಿದೆ ಎಂದು ಸ್ಪೀಕರ್ ಯು ಟಿ ಖಾದರ್ ತಿಳಿಸಿದರು. ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜುಲೈ 15 ರಿಂದ ಒಟ್ಟು 9 ದಿನಗಳ ಕಾಲ ಅಧಿವೇಶನ ನಡೆಯಲಿದೆ. ಅಧಿವೇಶನದಲ್ಲಿ ಸರ್ಕಾರದಿಂದ ಸ್ವೀಕರಿಸಲಾಗುವ ವಿಧೇಯಕಗಳನ್ನ ಪರ್ಯಾಲೋಚನೆಗೆ ಹಾಗೂ ಅಂಗೀಕಾರಕ್ಕೆ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು. ಸಭೆಗೆ ಬೇಗ ಹಾಜರಾಗುವ ಶಾಸಕರಿಗೆ ಟೀ ಕಪ್ ನೀಡಲಾಗುವುದು. ಕಳೆದ ಭಾರೀ ನೀಡಿದ ಅವಕಾಶ ಈ ಭಾರಿಯೂ ನೀಡುತ್ತೇವೆ. ಇಡೀ ದಿನ ಇರುವ ಸದಸ್ಯರುಗಳಿಗೆ ವಿಶೇಷ ಅವಕಾಶ ನೀಡಲಾಗುತ್ತದೆ ಎಂದರು.

# ಮುಡಾ: ಅಲುಗಾಡುತ್ತಿದೆ ಸರ್ಕಾರದ ಬುಡಾ



■ ಸಿಎಂ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ ■ ಬಿವೈವಿ ಸೇರಿ ಹಲವರು ವಶಕ್ಕೆ ■ ಬಿಜೆಪಿ ಪ್ರತಿಭಟನೆ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರ ಧರಣಿ

**ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸಿ ಮೈಸೂರಿನಲ್ಲಿ ನಡೆಯಲಿರುವ ಪ್ರತಿಭಟನೆಗೆ ತೆರಳಲು ಮುಂದಾಗಿದ್ದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಸೇರಿದಂತೆ ಹಲವು ಬಿಜೆಪಿ ನಾಯಕರನ್ನು ಪೊಲೀಸರು ಬೆಂಗಳೂರಿನಲ್ಲಿ ವಶಕ್ಕೆ ಪಡೆದು ಮೈಸೂರು ಚಲೋಗೆ ಅವಕಾಶ ಮಾಡಿಕೊಡಲಿಲ್ಲ. ಬೆಂಗಳೂರು-ಮೈಸೂರು ರಸ್ತೆಯ ನೈಸ್ ರಸ್ತೆ ಜಂಕ್ಷನ್‌ನಿಂದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಸೇರಿದಂತೆ ಹಲವು ನಾಯಕರು ಕಾರುಗಳಲ್ಲಿ ಮೈಸೂರಿಗೆ ತೆರಳಲು ನಿರ್ಧರಿಸಿದ್ದರು. ನೈಸ್ ರಸ್ತೆಯ ಜಂಕ್ಷನ್‌ನಲ್ಲಿ ನೂರಾರು ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡಿದ್ದರು. ಹಾಗೆಯೇ ರಸ್ತೆತಡೆ ಸಹ ನಡೆಸಿದ್ದರು. ಆಗ ಪೊಲೀಸರು ವಿಜಯೇಂದ್ರ ಸೇರಿದಂತೆ ಕಾರ್ಯಕರ್ತರು, ಮುಖಂಡರನ್ನು ವಶಕ್ಕೆ ಪಡೆದು ಬಸ್‌ಗೆ ಹತ್ತಿಸಿ ಕರೆದೊಯ್ದು, ಬಿಜೆಪಿ ನಾಯಕರ ಮೈಸೂರು ಚಲೋವನ್ನು ತಡೆದರು.**

**ಕಮಲ ಪಟ್ಟು ಕೈಗೆ ಇಕ್ಕಟ್ಟು**







ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಡಿ ನಿವೇಶನ ಹಂಚಿಕೆಯಲ್ಲಿ ಯಾವುದೇ ಲೋಪವಾಗಿಲ್ಲ, ಬಿಜೆಪಿ ರಾಜಕೀಯ ಕಾರಣಕ್ಕೆ ಮೈಸೂರಿನಲ್ಲಿ ಪ್ರತಿಭಟನೆ ನಡೆಸುತ್ತಿದೆ. ಸರ್ಕಾರಕ್ಕೆ ಕೆಟ್ಟ ಹೆಸರು ತರಲು ನಾನಾ ರೀತಿಯ ಪ್ರಯತ್ನ ಮಾಡುತ್ತಿದ್ದಾರೆ. ದೇಶದಲ್ಲೇ ದೊಡ್ಡ ರಾಜ್ಯಗಳ ಪೈಕಿ ಅಧಿಕಾರದಲ್ಲಿರುವುದು ಕರ್ನಾಟಕದಲ್ಲಿ ಮಾತ್ರ. ಅದಕ್ಕಾಗಿ ಇಲ್ಲಿ ನಮನ್ನು ಕುಗ್ಗಿಸುವ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ಅವಕಾಶ ನೀಡುವುದಿಲ್ಲ. . ತಾವು ಹಿಂದುಳಿದ ವರ್ಗಕ್ಕೆ ಸೇರಿರುವುದರಿಂದ ಬಿಜೆಪಿ ಷಡ್ಯಂತರ ಮಾಡುತ್ತಿದೆ.

**-ಡಿ.ಕೆ.ಶಿವಕುಮಾರ್**
ಉಪಮುಖ್ಯಮಂತ್ರಿ



ಉಪ್ಪು ತಿಂದವರು ನೀರು ಕುಡಿಯಲೇ ಬೇಕು. ತಮ ಪಾಪದ ಕೊಡ ತುಂಬಿದೆ. ಪ್ರಾಯಶ್ಚಿತ ಕಾದಿದೆ.ಮುಖ್ಯಮಂತ್ರಿ ಸಿದ್ದರಾಮಯ್ಯನವರು 4,000 ಕೋಟಿ ಮೌಲ್ಯದ ಮುಡಾ ಭೂಹಗರಣದಲ್ಲಿ ಕಾನೂನಿನ ಕುಣಿಕೆ ಬಿಗಿಯಾಗುತ್ತಿದ್ದಂತೆ ತಮ ಎಂದಿನ ಶೈಲಿಯಲ್ಲಿ ಜಾತಿ ಹೆಸರಿನಲ್ಲಿ ರಕ್ಷಣೆ ಪಡೆಯುವ ಹತಾಶ ಪ್ರಯತ್ನ ಮಾಡುತ್ತಿದ್ದಾರೆ.

**-ಆರ್.ಅಶೋಕ್**
ವಿಧಾನಸಭೆಯ ಪ್ರತಿಪಕ್ಷದ ನಾಯಕ

• ಉದಯವಾಹಿನಿ, ಬೆಂಗಳೂರು

ಮೈಸೂರು ಚಲೋಗೆ ಅವಕಾಶ ಕೊಡದ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರ ಹಾಕಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು, ನಮ್ಮ ಮೈಸೂರು ಚಲೋ ತಡೆಯಬೇಡಿ. ರಾಜ್ಯದಲ್ಲಿ ಬೆಂಕಿ ಬೀಳುತ್ತದೆ ಎಂದು ಕಿಡಿಕಾರಿದರು. ಮೈಸೂರು ಚಲೋ ನಡೆಸುತ್ತಿರುವ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಬಂಧಿಸುವ ಪ್ರಯತ್ನ ಖಂಡನೀಯ. ಬಂಧನದ ಮೂಲಕ ರಾಜ್ಯಾದ್ಯಂತ ಬೆಂಕಿ ಹಚ್ಚಲು ನೀವೆ ಕಾರಣರಾಗುತ್ತೀರಿ ಎಂದು ಎಚ್ಚರಿಕೆ ನೀಡಿದರು. ಮುಡಾದಲ್ಲಿ ಸಾವಿರಾರು ಕೋಟಿ ರೂ. ಹಗರಣ ನಡೆದಿದೆ. ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಅವರ ಪತ್ನಿ ಸಹ ನಿವೇಶನ ಪಡೆದಿದ್ದಾರೆ. ಹಗರಣ ಬಯಲಾಗಿರುವುದರಿಂದ ಮುಖ್ಯಮಂತ್ರಿಗಳು ಆತಂಕಗೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದ ಅವರು, ಮುಡಾ ಹಗರಣದ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿಗಳು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಈ ಸರ್ಕಾರದ ಪಾಪದ ಕೊಡ ತುಂಬಿದೆ. ರಾಜ್ಯ ಸರ್ಕಾರ ಕಾಂಗ್ರೆಸ್ ಹೈಕಮಾಂಡ್‌ನ ಎಟಿಎಂ ಆಗಿದೆ ಎಂದು ವಾಗ್ದಾಳಿ ನಡೆಸಿದ ಅವರು, ಮಾಜಿ ಸಚಿವ ನಾಗೇಂದ್ರ, ಇಡಿ ಬಂಧನಕ್ಕೆ ಒಳಗಾಗಿದ್ದಾರೆ. ದಲಿತರ ಹಣವನ್ನು ಈ ಸರ್ಕಾರ ಲೂಟಿ ಮಾಡಿದೆ ಎಂದು ಆಕ್ರೋಶ ಹೊರ ಹಾಕಿದರು.ಮೈಸೂರಿನಲ್ಲಿ ಮುಡಾ ಕಚೇರಿ ಮುಂದೆ ಭ್ರಷ್ಟ ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಭಟನೆ ಮಾಡಲು ಬಿಜೆಪಿ ನಿರ್ಧರಿಸಿತ್ತು. ಆದರೆ ಪೊಲೀಸರು ಮುಖ್ಯಮಂತ್ರಿಗಳ ಆದೇಶದ ಮೇಲೆ ಪ್ರತಿಭಟನೆ ಹತ್ತಿಕ್ಕುವ ಕೆಲಸ ಮಾಡಿದ್ದಾರೆ ಎಂದು ಕಿಡಿಕಾರಿದರು.

**ಸಿಬಿಐಗೆ ಕೊಡಿ :** ಈ ಸರ್ಕಾರ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದೆ. ಮುಖ್ಯಮಂತ್ರಿಗಳು ಪ್ರಾಮಾಣಿಕರಾಗಿದ್ದರೆ, ಮುಡಾದಲ್ಲಿ ಭ್ರಷ್ಟಾಚಾರ ಆಗಿಲ್ಲ ಎಂದಾದರೆ ಸಿಬಿಐ ತನಿಖೆಗೆ ಕೊಡಲಿ ಎಂದು ಸವಾಲ ಹಾಕಿದರು.ಯಾವುದೇ ಕ್ಷಣದಲ್ಲಿ ಸರ್ಕಾರ ಬೀಳಬಹುದು, ಸಿದ್ಧರಾಮಯ್ಯ ಸರ್ಕಾರ ದಬ್ಬಾಳಿಕೆ ಮಾಡುತ್ತಿದೆ. ತೊಘಲಕ್ ದರ್ಬಾರ್ ನಡೆಸುತ್ತಿದೆ ಎಂದು ಹರಿಹಾಯ್ದರು.ಬಿಜೆಪಿ ಕಾರ್ಯಕರ್ತರು ಬಂಧನಕ್ಕೆ ಹೆದರುವುದಿಲ್ಲ, ಹೋರಾಟ ಹತ್ತಿಕ್ಕುವುದು ಅಕ್ಷಮ್ಯ ಅಪರಾಧ ಎಂದು ಅವರು ಕಿಡಿಕಾರಿದರು.

**ಮೈಸೂರಿಗೆ ತೆರಳಿ ಅಶೋಕ್ ಪ್ರತಿಭಟನೆ**

ಪೊಲೀಸರು ಮೈಸೂರಿಗೆ ತೆರಳುತ್ತಿದ್ದ ಬಿಜೆಪಿ ಮುಖಂಡರನ್ನು ಬಂಧಿಸುವ ಮಾಹಿತಿ ಅರಿತ ಪ್ರತಿಪಕ್ಷ ನಾಯಕ ಆರ್. ಅಶೋಕ್ ಹಾಗೂ ಮಾಜಿ ಸಚಿವ ಡಾ. ಸಿ.ಎನ್ ಅಶ್ವತ್ಥನಾರಾಯಣ ಅವರು ಪೊಲೀಸರ ಕಣ್ತಪ್ಪಿಸಿ ಗೂಡ್ಸ್ ಟೆಂಪೋದಲ್ಲಿ ಮೈಸೂರಿಗೆ ತೆರಳಿ ಮೈಸೂರಿನಲ್ಲಿ ಮುಡಾ ಮುಂದೆ ನಡೆದ ಪ್ರತಿಭಟನೆಯಲ್ಲಿ ಭಾಗಿಯಾದರು. ಇವರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು. ಬೆಂಗಳೂರಿನಿಂದ ಮೈಸೂರಿಗೆ ಬರುತ್ತಿದ್ದ ಬಿಜೆಪಿ ನಾಯಕರನ್ನು ಪೊಲೀಸರು ಬೆಂಗಳೂರಿನಲ್ಲೇ ಬಂಧಿಸಿದರೂ ಮೈಸೂರಿಗ ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ಮುಡಾ ಮುಂದೆ ಪ್ರತಿಭಟನೆ ನಡೆಸಿದರು. ಪ್ರತಿಭಟನೆ ನಡೆಸಿದ ಅವರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

**ಬಿಜೆಪಿ ಪ್ರತಿಭಟನೆಗೆ ಕರೆದರೆ ಹೋಗುವೆ**

ಮುಡಾ ಹಗರಣ ವಿರುದ್ಧ ಬಿಜೆಪಿ ಪ್ರತಿಭಟನೆ ವಿಚಾರಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿ, ಪ್ರತಿಭಟನೆ ವಿಚಾರ ನನ್ನ ಗಮನಕ್ಕೆ ಬಂದಿಲ್ಲ. ನಾನು ನಿನ್ನೆ ರಾತ್ರಿ ಮೈಸೂರಿಗೆ ಬಂದಿದ್ದೇನೆ. ಮುಡಾ ಹಗರಣ ಸಿಬಿಐಗೆ ವಹಿಸುವಂತೆ ಜೆಡಿಎಸ್ ಒತ್ತಾಯಿಸಿದೆ. ಪ್ರತಿಭಟನೆಗೆ ಕರೆದರೆ ಹೋಗುತ್ತೇನೆ ಎಂದು ತಿಳಿಸಿದರು. ಜುಲೈ 15ರಿಂದ ಅಧಿವೇಶನ ಪ್ರಾರಂಭ ಆಗುತ್ತದೆ. ಅಲ್ಲಿ ನಮ್ಮ ಹೋರಾಟ ಮಂದುವರಿಯುತ್ತದೆ. ನಮ್ಮ ಹೋರಾಟ ಹೇಗಿರುತ್ತದೆ ಎಂಬುದನ್ನು ಕಾದು ನೋಡಿ. ನಾನಾಗಲಿ, ಮಂಜೇಗೌಡರಾಗಲಿ, ಸಿಎಂ ಆಗಲಿ ಯಾರು ತಪ್ಪು ಮಾಡಿದ್ದರು ತಪ್ಪೇ. ಮುಡಾ ಹಗರಣ ವಿರುದ್ಧ ನಮ್ಮ ಹೋರಾಟ ಇದ್ದೆ ಇರುತ್ತೆ ಎಂದು ಸ್ಪಷ್ಟಪಡಿಸಿದರು.

**ಮುಡಾ ಕಚೇರಿ ಮುಂದೆ ಹೈಡ್ರಾಮಾ**


ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ-ಮುಡಾದಲ್ಲಿ ನಡೆದಿರುವ ಅಕ್ರಮ ಖಂಡಿಸಿ ವಿಪಕ್ಷ ಬಿಜೆಪಿ ಮೈಸೂರು ಚಲೋ ಪ್ರತಿಭಟನೆ ಹಮ್ಮಿಕೊಂಡಿದ್ದು, ಮುಡಾ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದೆ. ಮೈಸೂರು ಮೂಡಾ ಕಚೇರಿ ಮುಂದೆ ಬಿಜೆಪಿ ಪ್ರತಿಭಟನೆ ನಡೆಸಿದ್ದು, ಬಿಜೆಪಿ ಪ್ರತಿಭಟನೆ ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಮುಡಾ ಕಚೇರಿ ಮುಂಭಾಗ ಹೈಡ್ರಾಮವೇ ಶುರುವಾಗಿದೆ. ಪ್ರತಿಭಟನೆ ವೇಳೆ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿಲ್ಲ. ಪೊಲೀಸರ ಕ್ರಮಕ್ಕೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪ್ರಶ್ನೆ ಮಾಡಿದ್ದಾರೆ.

**ಕಚೇರಿ ಮುಂದೆ ನಾಟಕೀಯ ಪ್ರಸಂಗ**

ಮೈಸೂರು ಕಮಿಷನರೇಟ್ ಪೊಲೀಸರ ವಿರುದ್ಧ ಕಿಡಿಕಾರಿದ ಎಂ.ಲಕ್ಷ್ಮಣ್, ನಮ್ಮನ್ನು ಬಂಧಿಸಿ, ನಮ್ಮನ್ನು ಬಂಧಿಸದೇ ಇನ್‌ಸಲ್ಟ್ ಮಾಡುತ್ತಿದ್ದೀರಾ ಎಂದು ಪ್ರಶ್ನಿಸಿದ್ದಾರೆ. ನಿಮ್ಮ ಕಮಿಷ್ನರ್ ಎಲ್ಲಿ ಎಂದು ಡಿಸಿಪಿ ಜಾಹ್ನವಿ ಅವರಿಗೆ ಆವಾಜ್ ಹಾಕಿದ್ದಾರೆ. ಮುಡಾ ಕಚೇರಿ ಮುಂದೆ ನಾಟಕೀಯ ಪ್ರಸಂಗ ನಡೆದಿದ್ದು, ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರಿಗೆ ಪ್ರತಿಭಟನೆ ಕೈಬಿಡುವಂತೆ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ ಮನವಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಿಲ್ಲಿಸಿದ್ದಾರೆ.

## ಪೋಕ್ಸೋ ಕೇಸಲ್ಲಿ ಬಿಎಸ್‌ವೈಗೆ ಮತ್ತೆ ರಿಲೀಫ್

• ಉದಯವಾಹಿನಿ, ಬೆಂಗಳೂರು



ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪಗೆ ಈಗಾಗಲೇ ಖುದ್ದು ಹಾಜರಾತಿಗೆ ವಿನಾಯ್ತಿ ನೀಡಲಾಗಿತ್ತು. ಈಗ ಮತ್ತೆ ಹೈಕೋರ್ಟ್ ಖುದ್ದು ಹಾಜರಾತಿಯಿಂದ ಬಿಎಸ್ ವೈಗೆ ವಿನಾಯ್ತಿ ನೀಡಿ ಮಧ್ಯಂತರ ಆದೇಶ ಹೊರಡಿಸಿದೆ.ಈ ಕುರಿತಂತೆ ಇಂದು ಹೈಕೋರ್ಟ್ ನ ಏಕಸದಸ್ಯ ಪೀಠವು ವಿಚಾರಣೆ ನಡೆಸಿತು.

ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ವಿರುದ್ಧದ ಪೋಕ್ಸೋ ಕೇಸ್ ಪ್ರಕರಣದ ವಿಚಾರಣೆಯನ್ನು ಜುಲೈ.26ಕ್ಕೆ ನಿಗದಿ ಪಡಿಸಿದೆ.ಈ ಹಿನ್ನಲೆಯಲ್ಲಿ ಜುಲೈ.25ರವರೆಗೆ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಸೇರಿದಂತೆ ಇತರೆ ಆರೋಪಿಗಳಿಗೆ ಖುದ್ದು ಹಾಜರಾತಿಯಿಂದ ವಿನಾಯ್ತಿ ನೀಡಿ ಮಧ್ಯಂತರ ಆದೇಶವನ್ನು ನೀಡಿದೆ.

ಇನ್ನೂ ಬಿಎಸ್ ಯಡಿಯೂರಪ್ಪ ಸೇರಿದಂತೆ ಇತರೆ ಆರೋಪಿಗಳ ಬದಲಿಗೆ ವಕೀಲರು ಹಾಜರಾಗಿ ವಿನಾಯ್ತಿ ಕೋರಲು ಅವಕಾಶ ಮಾಡಿ ಕೊಟ್ಟಿದೆ. ಜುಲೈ.25ರವರೆಗೆ ಬಿಎಸ್ ಯಡಿಯೂರಪ್ಪಗೆ ಖುದ್ದು ಹಾಜರಾತಿಯಿಂದ ವಿನಾಯ್ತಿ ನೀಡಿದೆ.


ಅಂದಹಾಗೇ ಜುಲೈ.15ರಂದು ಖುದ್ದು ವಿಚಾರಣೆಗೆ ಹಾಜರಾಗುವಂತೆ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪಗೆ ಬೆಂಗಳೂರಿನ 1ನೇ ತ್ವರಿತ ನ್ಯಾಯಾಲಯವು ಸಮನ್ಸ್ ಜಾರಿಗೊಳಿಸಿತ್ತು. ಈ ಸಮನ್ಸ್ ಪ್ರಶ್ನಿಸಿ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಲಾಗಿತ್ತು. ಹೈಕೋರ್ಟ್ ಖುದ್ದು ವಿಚಾರಣೆಯ ಹಾಜರಾತಿಗೆ ವಿನಾಯ್ತಿ ನೀಡಿ ಆದೇಶಿಸಿತ್ತು. ಈಗ ಮತ್ತೆ ಇದನ್ನು ವಿಸ್ತರಣೆ ಮಾಡಿ ಆದೇಶಿಸಿದೆ.

## ಸಂವಿಧಾನದಲ್ಲಿ ವಿಪಕ್ಷಗಳಿಗೆ ಹೋರಾಟದ ಹಕ್ಕಿಲ್ಲವೆ?

• ಉದಯವಾಹಿನಿ, ಬೆಂಗಳೂರು

ಪೊಲೀಸರನ್ನು ಬಳಸಿಕೊಂಡು ವಿಪಕ್ಷ ನಾಯಕರು ಪ್ರತಿಭಟನೆ ಮಾಡಲು ಮೈಸೂರಿಗೆ ಹೋಗುವುದನ್ನು ತಡೆಯುತ್ತಿದ್ದೀರಲ್ಲ, ಕರ್ನಾಟಕದಲ್ಲಿ ಏನು ಅಘೋಷಿತ ತುರ್ತು ಪರಿಸ್ಥಿತಿ ಇದೆಯೇ. ತಮ್ಮ ಆತ್ಮಸಾಕ್ಷಿ ಶುದ್ಧವಾಗಿದ್ದರೆ, ತಾವು ಹೇಳಿಕೊಳ್ಳುವಂತೆ ತಾವು ಪ್ರಾಮಾಣಿಕರಾದರೆ, ಮುಡಾ ಹಗರಣವನ್ನು ಸಿಬಿಐಗೆ ಒಪ್ಪಿಸಿ. ನಿಮ್ಮ ತಪ್ಪಿಲ್ಲವಾದರೆ ಸಿಬಿಐಗೆ ಕೊಡಲು ಸಿಎಂ ಸಿದ್ದರಾಮಯ್ಯಗೆ ಭಯವೇಕೆ

**-ಆರ್.ಅಶೋಕ್, ವಿಪಕ್ಷ ನಾಯಕ**



ಮುಡಾ ಅಕ್ರಮದ ವಿರುದ್ಧ ಹೋರಾಟಕ್ಕೆ ಬಿಜೆಪಿ ನಾಯಕರು, ಕಾರ್ಯಕರ್ತರು ಮೈಸೂರಿಗೆ ತೆರಳುವ ಮುನ್ನವೇ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ಕ್ರಮದ ವಿರುದ್ಧ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಅಲ್ಲದೆ, ಸಾಮಾಜಿಕ ಜಾಲತಾಣದ ತಮ್ಮ ಖಾತೆಯಲ್ಲಿ ಸರಣಿ ಪ್ರಶ್ನೆಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕೇಳುವ ಮೂಲಕ ಚುಚ್ಚಿದ್ದಾರೆ. ಪ್ರಜಾಸತ್ತಾತ್ಮಕ ಚಳವಳಿ ಹತ್ತಿಕ್ಕುವ ಪ್ರಯತ್ನ ಖಂಡಿಸಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರದರ್ಶಿಸುವ ಸಂವಿಧಾನದಲ್ಲಿ ವಿಪಕ್ಷಗಳಿಗೆ ಹೋರಾಟ ಮಾಡುವ ಹಕ್ಕಿಲ್ಲವೆ ಎಂದು ಕೇಳಿದ್ದಾರೆ. ಸ್ವಯಂಘೋಷಿತ ಸಂವಿಧಾನ ರಕ್ಷಕ ಸಿಎಂ ಸಿದ್ದರಾಮಯ್ಯ ಅವರೇ, ತಮ್ಮ ಸರ್ಕಾರದ ಬ್ರಹ್ಮಾಂಡ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡಲು ರಾಜ್ಯ ಬಿಜೆಪಿ ನಾಯಕರು ಮೈಸೂರಿಗೆ ಹೊರಟಿದ್ದರೆ, ಪೊಲೀಸರನ್ನು ಬಳಸಿಕೊಂಡು ನಮ್ಮನ್ನು ಮಾರ್ಗ ಮಧ್ಯದಲ್ಲೇ ತಡೆಯುವ ಮೂಲಕ ಸರ್ವಾಧಿಕಾರಿ ಧೋರಣೆ ಪ್ರದರ್ಶನ ಮಾಡುತ್ತಿದ್ದೀರಲ್ಲ,

ತಮ್ಮ ನಾಯಕ ರಾಹುಲ್ ಗಾಂಧಿಯವರು ಪ್ರದರ್ಶನ ಮಾಡುವ ಸಂವಿಧಾನದಲ್ಲಿ, ವಿಪಕ್ಷಗಳಿಗೆ ಹೋರಾಟ ಮಾಡುವ ಹಕ್ಕಿಲ್ಲವೇ ತಮ್ಮ ಪಕ್ಷ ಪ್ರತಿಪಾದಿಸುವ ಪ್ರಜಾಪ್ರಭತ್ವದಲ್ಲಿ ವಿರೋಧ ಪಕ್ಷಗಳು ಸರ್ಕಾರವನ್ನು ಪ್ರಶ್ನಿಸುವುದು ಅಪರಾಧವೇ ಎಂದು ಆರ್.ಅಶೋಕ್ ಕೇಳಿದ್ದಾರೆ.

# ವಾಲ್ಮೀಕಿ ಹಗರಣ: ಮಾಜಿ ಸಚಿವ ನಾಗೇಂದ್ರ ಇ.ಡಿ ವಶಕ್ಕೆ

## ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಬಂಧನ

• ಉದಯವಾಹಿನಿ, ಬೆಂಗಳೂರು

ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮಾಜಿ ಸಚಿವ ಬಿ ನಾಗೇಂದ್ರ ಅವರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ಮಾಡಿ ನಂತರ ಬಂಧಿಸಿದ್ದಾರೆ. ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮಾಜಿ ಸಚಿವ ಬಿ ನಾಗೇಂದ್ರ ಅವರನ್ನು ವಶಕ್ಕೆ ತೆಗೆದುಕೊಂಡಿತ್ತು. ನಾಗೇಂದ್ರ ಅವರನ್ನು ವಿಚಾರಣೆಗಾಗಿ ಇಡಿ ಅಧಿಕಾರಿಗಳ ತಂಡ ಅವರ ನಿವಾಸಕ್ಕೆ ಆಗಮಿಸಿ ನಂತರ ಕಚೇರಿಗೆ ಕರೆದೊಯ್ಯದಿದ್ದರು.

ಹಗರಣಕ್ಕೆ ಸಂಬಂಧಿಸಿದಂತೆ ಅವರ ವಿರುದ್ಧದ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ನಾಗೇಂದ್ರ, ಅವರು ಜೂನ್ 6 ರಂದು ರಾಜೀನಾಮೆ ಸಲ್ಲಿಸಿದರು. ನನ್ನ ಮನೆಯಿಂದ ಕರೆತರಲಾಗುತ್ತಿದೆ ನನಗೇನೂ ಗೊತ್ತಿಲ್ಲ ಎಂದು ಇಡಿ ಕಚೇರಿಗೆ ಕರೆದೊಯ್ಯುತ್ತಿದ್ದಂತೆ ನಾಗೇಂದ್ರ ಸುದ್ದಿಗಾರರಿಗೆ ತಿಳಿಸಿದ್ದಾರೆ. ಹಲವು ಸ್ಥಳಗಳಲ್ಲಿ ಇಡಿ ಕಳೆದ ಎರಡು ದಿನಗಳಿಂದ ಶೋಧ ನಡೆಸಿ ಪ್ರಸ್ತುತ ಶಾಕರನ್ನು ವಶಕ್ಕೆ ಪಡೆದಿರುವುದು ಸಂಚಲನ ಸೃಷ್ಟಿಸಿದೆ.

ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಮಹಾರಾಷ್ಟ್ರದ ಸುಮಾರು 20 ಸ್ಥಳಗಳಲ್ಲಿ ಮನಿ ಲಾಂಡರಿಂಗ್ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ದಾಖಲಿಸಿದ ಪ್ರಕರಣದ ಭಾಗವಾಗಿ ಇವರನ್ನು ವಶಕ್ಕೆ ಪಡಯಲಾಗಿದೆ ಎಂದು ಮೂಲಗಳು ತಿಳಿಸಿವೆ. ಇಲಾಖೆಯ ಅಧೀಕ್ಷಕ ಚಂದ್ರಶೇಖರನ್ ಕಳೆದ ಮೇ 26 ರಂದು ಆತಹತ್ಯೆ ಮಾಡಿಕೊಂಡ ನಂತರ 187 ಕೋಟಿ ಅವ್ಯವಹಾರ ಬೆಳಕಿಗೆ ಬಂದಿತ್ತು. ನಿಗಮಕ್ಕೆ ಸೇರಿದ 187 ಕೋಟಿ ರೂಗಳನ್ನು ಬ್ಯಾಂಕ್ ಖಾತೆಯಿಂದ ಅನಧಿಕೃತವಾಗಿ ಪ್ರಸಿದ್ಧ ಐಟಿ ಕಂಪನಿಗಳು ಮತ್ತು ಹೈದರಾಬಾದ್ ಮೂಲದ ಸಹಕಾರಿ ಬ್ಯಾಂಕ್‌ಗೆ ಸೇರಿದ ವಿವಿಧ ಖಾತೆಗಳಿಗೆ 88.62 ಕೋಟಿ ರೂಪಾಯಿಗಳನ್ನು ಅಕ್ರಮವಾಗಿ ವರ್ಗಾಯಿಸಲಾಗಿದೆ. ಅಮಾನತುಗೊಂಡಿರುವ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ ಜಿ ಪದನಾಭ್,ಪರಶುರಾಮ್ ಜಿ ದುರುಗಣ್ಣವರ್ ಮತ್ತು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕಿ ಸುಚಿಸಿತಾ ರಾವಲ್ ಅವರ ಹೆಸರನ್ನು ಟಿಪ್ಪಣಿಯಲ್ಲಿ ಹೆಸರಿಸಿದ್ದಾರೆ, ಆದರೆ ಸಚಿವರು ಹಣವನ್ನು ವರ್ಗಾಯಿಸಲು ಮೌಖಿಕ ಆದೇಶವನ್ನು ನೀಡಿದ್ದಾರೆ ಎಂದು ತಿಳಿಸಿದ್ದಾರೆ.

**ಏನಿದು ಹಗರಣ:** ಪರಿಶಿಷ್ಠ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಬಿ.ನಾಗೇಂದ್ರ ಅವರ ವಿರುದ್ಧ ನಿಗಮದ ಖಾತೆಯ 94 ಕೋಟಿ ಹಣವನ್ನು ಯೂನಿಯನ್ ಬ್ಯಾಂಕ್ ಶಾಖೆಯಲ್ಲಿ ಖಾತೆಯನ್ನು ತೆರೆಯಲು ಮಾಜಿ ಸಚಿವ ನಾಗೇಂದ್ರ ಅವರು ಒತ್ತಡ ಹೇರಿದ್ದರು ಎಂಬ ಆರೋಪ ಇದೆ. ಈಗಾಗಲೇ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಜೆ ಬಿ ಪದ್ಮನಾಭ ಅವರನ್ನು ಎಸ್‌ಐಟಿ ವಿಚಾರಣೆ ನಡೆಸುತ್ತಿದೆ. ಈ ವೇಳೆ ನಾಗೇಂದ್ರ ಅವರ ಸೂಚನೆಯಂತೆ ಅಕ್ರಮ ನಡೆದಿದೆ ಎಂಬುವುದು ಪತ್ತೆಯಾಗಿದೆ. ನಾಗೇಂದ್ರ ಅವರ ಆಪ್ತ ಕಾರ್ಯದರ್ಶಿ ಆಗಿದ್ದ ದೇವೇಂದ್ರಪ್ಪ ಅವರ ಆಪ್ತ ನೆಟ್ಟಂಕಿ ನಾಗರಾಜ್ ಮತ್ತು ಅವರ ಸಂಬಂಧಿಕ ನಾಗೇಶ್ವರ್ ರಾವ್ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಚರ್ಚೆಯಲ್ಲಿ ಭಾಗಿಯಾಗಿದ್ದರು ಎಂಬ ಆರೋಪ ಇದೆ. ಬ್ಯಾಂಕ್‌ನಲ್ಲಿ ಹೊಸ ಖಾತೆ ತೆರೆಯುವಂತೆ ನಾಗೇಂದ್ರ ಸೂಚನೆ ನೀಡಿದ್ದರು ಎಂಬುವುದು ಆರೋಪವಾಗಿದೆ.

- **ಮಾಜಿ ಸಚಿವ ನಾಗೇಂದ್ರ ಅವರನ್ನು ಜಾರಿ ನಿರ್ದೇಶನಾಲಯ ವಶಕ್ಕೆ ಪಡೆದಿದೆ.**
- **94 ಕೋಟಿ ಹಣ ವಾಲ್ಮೀಕಿ ನಿಗಮದ ಖಾತೆಯಿಂದ ಬೇರೆ ಬ್ಯಾಂಕ್ ಖಾತೆಗಳಿಗೆ ವರ್ಗಾವಣೆ ಆಗಿದೆ ಎಂಬ ಆರೋಪ ಇದೆ.**
- **ಸಚಿವ ಸೂಚನೆಯ ಮೇರೆಗೆ ಹಣ ವರ್ಗಾವಣೆ ಆಗಿದೆ ಎಂಬ ಆರೋಪ ಇದಾಗಿದೆ.**



**ನಾಗೇಂದ್ರಗೆ ಪ್ರಶ್ನೆಗಳ ಸುರಿಮಳೆ**

ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿರುವ ನಾಗೇಂದ್ರ ಫ್ಲ್ಯಾಟ್‌ನಲ್ಲಿ ಮಾಜಿ ಸಚಿವರಿಗೆ ಹಗರಣಕ್ಕೆ ಸಂಬಂಧಿಸಿದಂತೆ ನೂರಾರು ಪ್ರಶ್ನೆಗಳನ್ನು ಕೇಳಿದ್ದಾರೆ. ವಾಲ್ಮೀಕಿ ನಿಗಮದಿಂದ 187 ಕೋಟಿ ರೂ. ವರ್ಗಾವಣೆಯಾಗಿರುವುದು ನಿಮ್ಮ ಗಮನಕ್ಕೆ ಬಂದಿರಲಿಲ್ಲವೇ.. ನಿಮಗೆ ಅಧಿಕಾರಿಗಳು ಮಾಹಿತಿ ನೀಡಿರಲಿಲ್ಲವೇ.. ಆತ್ಮಹತ್ಯೆ ಮಾಡಿಕೊಂಡಿರುವ ಚಂದ್ರಶೇಖರ್ ಡೆತ್‌ನೋಟ್‌ನಲ್ಲಿ ನಿಮ್ಮ ಹೆಸರನ್ನು ಬರೆದಿಟ್ಟಿದ್ದರಲ್ಲ ಇದಕ್ಕೆ ಏನು ಹೇಳುತ್ತೀರಿ ನಿಮ್ಮ ಗಮನಕ್ಕೆ ಬಂದರೆ ಏಕೆ ದೂರು ನೀಡಲಿಲ್ಲ ಎಂದು ಅಧಿಕಾರಿಗಳು ಪ್ರಶ್ನೆಗಳನ್ನು ಇಟ್ಟಿದ್ದರು. ಆದರೆ ನಾಗೇಂದ್ರ ಇದ್ಯಾವುದಕ್ಕೂ ಸಮರ್ಪಕವಾದ ಉತ್ತರ ನೀಡದೇ ಹಾರಿಕೆಯ ಮಾತುಗಳನ್ನು ಹೇಳಿ ಸುಮ್ಮನಾಗಿದ್ದಾರೆಂದು ತಿಳಿದು ಬಂದಿದೆ.

**ಈ ದಿನದ ದರ** | ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹7,376/Gram24ct ₹6,760/Gram22ct | ಬೆಳ್ಳಿ: ₹95.60/Gram

# ಇಳುವರಿ ನಷ್ಟದ ಭಯದಲ್ಲಿ ರೈತಾಪಿ ವರ್ಗ: ಪರಿಹಾರಕ್ಕೆ ಆಗ್ರಹ

## • ರೋಗ ನಿಯಂತ್ರಣಕ್ಕೆ ಸೂಕ್ತ ಮಾಹಿತಿ ಹಾಗೂ ರಾಸಾಯನಿಕ ಔಷಧ ದೊರೆಯದ ಕಾರಣ ಫಸಲು ಇಳಿಮುಖ

**• ಉದಯವಾಹಿನಿ ಚಿಕ್ಕಬಳ್ಳಾಪುರ**

ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಅವಧಿ ಪೂರ್ವ ಮೆಕ್ಕೆಜೋಳದ ಸಣ್ಣಗಿಡಗಳಗೆ ದಾಳಿ ಮಾಡಿರುವ ಸೈನಿಕ ಹುಳುವಿನ ದಾಳಿಯಿಂದ ರೈತ ಕಂಗಾಲಾಗಿದ್ದು ರೋಗ ನಿಯಂತ್ರಣಕ್ಕೆ ಸೂಕ್ತ ಮಾಹಿತಿ ಹಾಗೂ ರಾಸಾಯನಿಕ ಔಷಧ ದೊರೆಯದ ಕಾರಣ ಫಸಲು ಇಳಿಮುಖವಾಗುವ ಬೀತಿ ಆವರಿಸಿದೆ.

ಚಿಕ್ಕಬಳ್ಳಾಪುರ ತಾಲ್ಲೂಕು ವ್ಯಾಪ್ತಿಯಲ್ಲಿ ಮುಂಗಾರಿನಲ್ಲಿ ಬಿತ್ತಿರುವ ಮೆಕ್ಕೆಜೋಳದ ಬೆಳೆಗೆ ಸೈನಿಕ ಹುಳು ಬಾಧೆ ಕಾಡುತ್ತಿದೆ. ತಾಲ್ಲೂಕಿನಲ್ಲಿ ನೂರಾರು ಹೆಕ್ಟರ್ ಪ್ರದೇಶದಲ್ಲಿ ಮೆಕ್ಕೆಜೋಳ ಬಿತ್ತನೆಯಾಗಿದ್ದು, ಉತ್ತಮ ಫಸಲು ಹಾಗೂ ಇಳುವರಿ ನಿರೀಕ್ಷೆಯಲ್ಲಿದ್ದ ರೈತರಿಗೆ ಸೈನಿಕ ಹುಳುವಿನ ಬಾಧೆ ಕಾಣಿಸಿಕೊಂಡಿದ್ದು ರೈತರು ಕಂಗಾಲಾಗಿದ್ದಾರೆ. ಜಿಲ್ಲೆಯಲ್ಲಿನ ರೈತರು ಈಗಾಗಲೇ ಮೇ ತಿಂಗಳಿನಲ್ಲೇ ಮೆಕ್ಕೆಜೋಳ ಬಿತ್ತನೆ ಮಾಡಿದ್ದು ಬೆಳೆಯು 1 ತಿಂಗಳು ರಿಂದ 45 ದಿನಗಳ ಹಂತದಲ್ಲಿದೆ. ತಾಲ್ಲೂಕಿನಲ್ಲಿ ಮೆಕ್ಕೆಜೋಳ ಬೆಳೆಗೆ ಸೈನಿಕ ಹುಳು ಬಾಧೆ ಕಂಡುಬಂದಿದೆ. ಈ ಕೀಟದಿಂದ ರೈತರು ಬೆಳೆ ರಕ್ಷಣೆ ಮಾಡಿಕೊಳ್ಳಲು ಹಾಗೂ ಕೀಟ ನಿರ್ವಹಣೆ ಕ್ರಮಗಳ ಬಗ್ಗೆ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೇಶವ ರೆಡ್ಡಿ ಅವರಲ್ಲಿ ರೈತರಲ್ಲಿ ಮನವಿ ಮಾಡಿದ್ದಾರೆ.

**ರೈತರಿಗೆ ಮಾಹಿತಿ ಕೊರತೆ**

**ಸೈನಿಕ ಹುಳು ನಿಯಂತ್ರಣಕ್ಕೆ ಔಷಧಿ ಪಡೆಯಲು ಪ್ರತಿನಿತ್ಯ ರೈತ ಸಂಪರ್ಕ ಕೇಂದ್ರಕ್ಕೆ ರೈತರು ಅಲೆದಾಡುತ್ತಿದ್ದಾರೆ. ಅಧಿಕಾರಿಗಳು ಸರಬರಾಜು ಮಾಡುವ ಭರವಸೆ ನೀಡುತ್ತಿದ್ದೂ, ಸಮಯ ಮೀರಿದ ನಂತರ ಕೊಟ್ಟರೆ ಪ್ರಯೋಜನ ಏನು ಎಂದು ಬೇಸರ ವ್ಯಕ್ತ ಪಡಿಸುತ್ತಿದ್ದಾರೆ. ಗ್ರಾಮೀಣ ಮತ್ತು ಗಡಿ ಭಾಗದ ರೈತರಿಗೆ ಮಾಹಿತಿ ಕೊರತೆ ಇದ್ದು ಕೃಷಿ ಇಲಾಖೆಯಿಂದ ಸೈನಿಕ ಹುಳು ನಿಯಂತ್ರಣ ಮಾಡಲು ಸಲಹೆ ಹಾಗೂ ಔಷದ ಬಗ್ಗೆ ಕರಪತ್ರ ಹಂಚುವಂತೆ ರೈತರು ಆಗ್ರಹಿಸಿದ್ದಾರೆ.**



ಉದಯವಾಹಿನಿ ಚಿತ್ರ

**ಮೆಕ್ಕೆಜೋಳ ಗಿಡದ ಸುಳಿಗೆ ಸೈನಿಕ ಹುಳು ಕತ್ತರಿ ಹಾಕುತ್ತಿರುವುದರಿಂದ ರೈತರು ಬೆಳೆ ನಾಶದ ಆತಂಕದಲ್ಲಿದ್ದಾರೆ. ರೈತರ ನೆರವಿಗೆ ಬರಬೇಕಿದ್ದ ಕೃಷಿ ಇಲಾಖೆ ಕೂಡ ಕೈಕಟ್ಟಿ ಕುಳಿತಿದೆ. ಎಲ್ಲಾ ರೈತ ಸಂಪರ್ಕ ಕೇಂದ್ರಗಳಿಗೆ ಔಷಧ ಸರಬರಾಜಾಗಬೇಕಿತ್ತು. ಆದರೆ ಈವರೆಗೂ ಔಷಧಿ ಸರಬರಾಜಾಗಿಲ್ಲ ಎಂದು ರೈತರು ಆತಂಕ ವ್ಯಕ್ತ ಪಡಿಸಿದ್ದಾರೆ.**

**ಸೈನಿಕ ಹುಳುವಿನ ದಾಳಿ**

ಈ ಕೀಟ ಪ್ರಮುಖವಾಗಿ ಮೆಕ್ಕೆಜೋಳದ ಪೀಡೆ ಯಾಗಿದೆ. ಇದರ ಜತೆಗೆ ಇತರೆ ಬೆಳೆಗಳಾದ ಭತ್ತ, ಜೋಳ ಸೇರಿದಂತೆ ಕೆಲ ತರಕಾರಿ ಬೆಳೆಗಳನ್ನು ಸಹ ಹಾನಿ ಮಾಡುತ್ತದೆ. ಮೋಡ ಕವಿದ ವಾತಾವರಣ, ಹೆಚ್ಚಿನ ಮಳೆ ಅಥವಾ ಹೆಚ್ಚಿನ ತೇವಾಂಶ ಮತ್ತು ಕಡಿಮೆ ಉಷ್ಣಾಂಶವಿದ್ದಲ್ಲಿ ಇದರ ಹಾವಳಿ ಹೆಚ್ಚಾಗುತ್ತದೆ. ಮೆಕ್ಕೆಜೋಳ ಬೆಳೆ 10ರಿಂದ 15 ದಿವಸವಿದ್ದಾಗ ಸೈನಿಕ ಹುಳುವಿನ ಬಾಧೆ ಕಾಣಿಸಿಕೊಳ್ಳುಲು ಆರಂಭಿಸುತ್ತದೆ. ಸೈನಿಕ ಹುಳುವಿನ ದಾಳಿಗೆ ತುತ್ತಾಗಿರುವ ರೈತರ ಜಮೀನಿಗೆ ಕೃಷಿ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ ಕೀಟ ಬಾಧೆ ಪರಿಶೀಲಿಸಿ ಸೂಕ್ತ ಔಷಧಿಗಳ ಸಿಂಪಡಣೆ ಮಾಡಲು ಮಾಹಿತಿ ನೀಡುವಂತೆ ಹಾಗೂ ಕೃಷಿ ಇಲಾಖೆಯಲ್ಲಿ ಕಡಿಮೆ ಬೆಲೆಗೆ ಈ ರೋಗಕ್ಕೆ ಸೂಕ್ತ ರಾಸಾಯನಿಕಗಳು ದೊರಯುವಂತೆ ಮಾಡಲಿ ಎಂದು ರೈತರು ಆಗ್ರಹಿಸಿದ್ದಾರೆ. 35 ರಿಂದ 40 ದಿನದ ಜೀವನ ಚಕ್ರದ ಈ ಪತಂಗ ಗಾಳಿಯ ಮೂಲಕ ಸಾವಿರ ಕಿ.ಮೀ. ಚಲಿಸಬಲ್ಲದು. 1,500 ಮೊಟ್ಟೆ ಇಡುವ ಈ ಕೀಟವನ್ನು ವೈಜ್ಞಾನಿಕ ಮತ್ತು ಸುರಕ್ಷಿತ ರೀತಿಯಲ್ಲಿ ನಿಯಂತ್ರಿಸಬೇಕು ಎಂಬುದು ಕೃಷಿ ಇಲಾಖೆಯ ಅಧಿಕಾರಿಗಳ ಅಭಿಪ್ರಾಯವಾಗಿದೆ.

ಮಾಗಿ ಉಳುಮೆ, ಬೇಗ ಬಿತ್ತನೆ, ಪರ್ಯಾಯ ಬೆಳೆ ಪದ್ಧತಿ ಹಾಗೂ ರಾಸಾಯನಿಕ ಸಿಂಪರಣೆ ಮೂಲಕ ಸೈನಿಕ ಹುಳುಗಳನ್ನು ನಿಯಂತ್ರಿಸಬಹುದು. ಈ ಹುಳು 20–25 ದಿನಗಳ ಜೀವನ ಚಕ್ರ ಹೊಂದಿದ್ದು, ಏಕ ಬೆಳೆಯಲ್ಲೇ ಇದರ ಮೂರು ಹಂತಗಳು (ಮೊಟ್ಟೆ, ಮರಿ ಹುಳು, ಪ್ರೌಢ ಚಿಟ್ಟೆ) ಕಾಣಿಸಿಕೊಂಡು ಎಲೆ, ಸುಳಿಗಳನ್ನು ತಿಂದು, ರಂಧ್ರಗಳನ್ನು ಮಾಡಿ ಹಿಕ್ಕೆಗಳನ್ನು ಎಲೆಯ ಮೇಲೆಯೇ ಬಿಡುತ್ತದೆ. ಹೊಲದಲ್ಲಿ ದೀಪಾಕರ್ಷಕ ಬಲೆ ಅಳವಡಿಸಿ ಪತಂಗಗಳನ್ನು ಆಕರ್ಷಿಸಿ, ನಾಶಪಡಿಸ ಬಹುದಾಗಿದೆ.

# ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿ: ಎಬಿವಿಪಿ ಕಾರ್ಯಕರ್ತರು ಪ್ರತಿಭಟನೆ

**• ಉದಯವಾಹಿನಿ ತುಮಕೂರು**

ಶಾಲಾ-ಕಾಲೇಜು ವಿದ್ಯಾರ್ಥಿಗಳ ವಿವಿಧ ಸಮಸ್ಯೆಗಳಿಗೆ ಸ್ಪಂದಿಸಿ ವಿದ್ಯಾರ್ಥಿಗಳಿಗೆ ಪೂರಕವಾದ ವಾತಾವರಣ ಸೃಷ್ಠಿಸುವಂತೆ ಆಗ್ರಹಿಸಿ ನಗರದ ಜಿಲ್ಲಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ಎಬಿವಿಪಿ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಜಮಾಯಿಸಿದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ನೂರಾರು ಕಾರ್ಯಕರ್ತರು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸಿದರು. ರಾಜ್ಯದಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹಾಸ್ಟೆಲ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡಬೇಕು, ಶಾಲಾ-ಕಾಲೇಜುಗಳು ಪ್ರಾರಂಭವಾದ ನಂತರ ವಿದ್ಯಾರ್ಥಿಗಳ ಹಾಸ್ಟೆಲ್ ಆಯ್ಕೆ ಪ್ರವೇಶಾತಿ ಪ್ರಕ್ರಿಯೆಯನ್ನು ವಿಳಂಬ ಮಾಡದೆ ಪ್ರವೇಶಾತಿ ನೀಡುವಂತಾಗಬೇಕು. ವಿದ್ಯಾರ್ಥಿಗಳ ಶಾಲಾ-ಕಾಲೇಜು ಸಮಯದಲ್ಲಿ ಬಸ್‌ಗಳ ಸಂಖ್ಯೆಯನ್ನು ಹೆಚ್ಚಳ ಮಾಡಬೇಕು ಎಂದು ಪ್ರತಿಭಟನಾನಿರತ ಎಬಿವಿಪಿ ಕಾರ್ಯಕರ್ತರು ಒತ್ತಾಯಿಸಿದರು. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಏಕರೂಪ ಶಿಕ್ಷಣ ವೇಳಾಪಟ್ಟಿಯನ್ನು ಸಮರ್ಪಕವಾಗಿ ಜಾರಿ ಮಾಡುವಂತೆ ಸೂಚಿಸಬೇಕು. ಬಸ್ ಪಾಸ್ ವಿತರಣೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ವೇಳಾಪಟ್ಟಿಗೆ ಅನುಗುಣವಾಗಿ ಅರ್ಜಿ ಸಲ್ಲಿಸಿದ ತಕ್ಷಣವೇ ವಿದ್ಯಾರ್ಥಿಗಳಿಗೆ ಸಿಗುವಂತಾಗಬೇಕು. ಹಾಸ್ಟೆಲ್‌ಗಳ ಮೂಲಭೂತ ಸೌಕರ್ಯಕ್ಕೆ ಆದ್ಯತೆ ನೀಡಬೇಕು ಹಾಗೂ ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿರುವ ಹಾಸ್ಟೆಲ್‌ಗಳಿಗೆ ಸ್ವಂತ ಕಟ್ಟಡವನ್ನು ನೀಡಬೇಕು. ಎಸ್ಸಿ-ಎಸ್ಟಿ ವರ್ಗದ ವಿದ್ಯಾರ್ಥಿಗಳಿಗೆ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನದಿಂದ ಹಲವಾರು ಸೌಲಭ್ಯಗಳನ್ನು ನೀಡಲಾಗುತ್ತದೆ. ಅನುದಾನವನ್ನು ಬೇರೆ ಕಡೆ ಬಳಕೆ ಮಾಡಿರುವ ಕುರಿತು ಸರ್ಕಾರ ಸ್ಪಷ್ಟತೆ ನೀಡಬೇಕು ಎಂದು ಆಗ್ರಹಿಸಿದರು.



ಉದಯವಾಹಿನಿ ಚಿತ್ರ

ವಿಶ್ವವಿದ್ಯಾಲಯಗಳ ಶೈಕ್ಷಣಿಕ ವೇಳಾಪಟ್ಟಿಯಲ್ಲಿ ಬಹಳಷ್ಟು ಬದಲಾವಣೆ ಇರುವುದರಿಂದ ವಿದ್ಯಾರ್ಥಿಗಳು ಸಾಕಷ್ಟು ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಸರ್ಕಾರ ಈ ಬಗ್ಗೆ ಗಮನಹರಿಸಿ ಬಡ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಬೇಕು ಎಂದು ಪ್ರತಿಭಟನಾಕಾರರು ಮನವಿ ಮಾಡಿದರು.

ನಂತರ ರಾಜ್ಯ ಸರ್ಕಾರದ ವಿದ್ಯಾರ್ಥಿ ವಿರೋಧಿ ನೀತಿ ಧೋರಣೆಯನ್ನು ಖಂಡಿಸಿ ಜಿಲ್ಲಾ ಉಸ್ತುವಾರಿ ಸಚಿವರ ಕಚೇರಿಗೆ ಮುತ್ತಿಗೆ ಹಾಕಲು ಎಬಿವಿಪಿ ಕಾರ್ಯಕರ್ತರು ಮುಂದಾದರು. ಆಗ ಸ್ಥಳದಲ್ಲೇ ಇದ್ದ ಪೊಲೀಸರು ಪ್ರತಿಭಟನಾಕಾರರು ವಶಕ್ಕೆ ಪಡೆದು ಬಳಿಕ ಬಿಡುಗಡೆ ಮಾಡಿದರು.

ಪ್ರತಿಭಟನೆಯಲ್ಲಿ ಎಬಿವಿಪಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸುನೀಲ್, ಜಿಲ್ಲಾ ಸಂಚಾಲಕ ಭರತ್, ಸಹ ಸಂಚಾಲಕ್ ಚಂದ್ರಮೌಳಿ, ಕಾರ್ಯಕರ್ತರಾದ ಗಣೇಶ್, ಗುರುಪ್ರಸಾದ್, ವಿಶ್ವಾಸ್, ವಿಭಿನ್ ಭಾರತ್, ಜೀವನ್, ಭುವನ್ ಮತ್ತಿತರರಿದ್ದರು.

# ಹಾಲು ಪ್ರೋತ್ಸಾಹಧನ ಕಡಿತಗೊಳಿಸಿ ರೈತರ ಬೆನ್ನಿಗೆ ಚೂರಿ



ಉದಯವಾಹಿನಿ ಚಿತ್ರ

**• ಉದಯವಾಹಿನಿ ಚಿಕ್ಕಬಳ್ಳಾಪುರ**

ಹಾಲು ಖರೀದಿ ದರ ಇಳಿಸಿರುವುದನ್ನು ತಕ್ಷಣ ವಾಪಸ್ ಕೊಡಬೇಕೆಂದು ಆಗ್ರಹಿಸಿ ಚಿಕ್ಕಬಳ್ಳಾಪುರ ನಗರ ಹೊರ ವಲಯದ ಜಿಲ್ಲಾಡಳಿತ ಭವನ ಎದುರು ಸಂಸದ ಡಾ. ಕೆ ಸುಧಾಕರ್ ನೇತೃತ್ವದಲ್ಲಿ ಬಿಜೆಪಿ ಜೆಡಿಎಸ್ ಮೈತ್ರಿ ವತಿಯಿಂದ ಒಂದು ದಿನದ ಮಟ್ಟಿಗೆ ಧರಣಿ ಸತ್ಯಾಗ್ರಹ ನಡೆಸಿದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಸಂಸದ ಡಾಟ್ ಕೆ ಸುಧಾಕರ್ ಅವರು ಮಾತನಾಡಿ, ಹಾಲಿನ ಖರೀದಿ ದರ 2 ರೂ. ಕಡಿತ, ಪ್ರೋತ್ಸಾಹಧನ ಬಾಕಿ, ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರತ್ಯೇಕ ಹಾಲು ಒಕ್ಕೂಟ ರದ್ದು ಸೇರಿದಂತೆ ಕಾಂಗ್ರೆಸ್ ಸರ್ಕಾರ ಅನುಸರಿಸುತ್ತಿರುವ ರೈತ ವಿರೋಧಿ ಧೋರಣೆಯಾಗಿದೆ ರೈತರಿಗೆ, ದಲಿತರಿಗೆ,ಹಿಂದುಳಿದ ವರ್ಗದ ಜನತೆಗೆ ಅನ್ಯಾಯ ಮಾಡಿರುವ ಲಜ್ಜೆಗೆಟ್ಟ ಕಾಂಗ್ರೆಸ್ ಸರ್ಕಾರಕ್ಕೆ ಒಳ್ಳೆಯದಾಗಲ್ಲ. ಚುನಾವಣೆ ಗೆಲ್ಲಲು ರೈತರ ಮತ ಪಡೆದ ಕಾಂಗ್ರೆಸ್ ಪಕ್ಷ, ಅಧಿಕಾರಕ್ಕೆ ಬಂದ ನಂತರ ರೈತರ ಹಾಲು ಪ್ರೋತ್ಸಾಹಧನವನ್ನು 2ರೂ. ಕಡಿತಗೊಳಿಸಿ ಬೆನ್ನಿಗೆ ಚೂರಿ ಹಾಕುವ ಕೆಲಸ ಮಾಡಿದೆ. ಸರ್ಕಾರ ಕೂಡಲೇ ಈ ಆದೇಶವನ್ನು ಹಿಂಪಡೆದು ಬದಲಿಗೆ ಪ್ರೋತ್ಸಾಹ ಧನವನ್ನ ಮೂರು ರೂಪಾಯಿ ಹೆಚ್ಚಿಸಬೇಕು ಎಂದ ಅವರು ಬೆಲೆ ಏರಿಕೆ ನಡುವೆ ಹೈನುಗಾರಿಕೆ ನಡೆಸುವುದು ಬಹಳ ಕಷ್ಟಕರವಾಗಿದ್ದು, ಆಹಾರ, ಮೇವಿಗಾಗಿ ಸಾವಿರಾರು ರೂಪಾಯಿ ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ ಎಂದು ಕಿಡಿ ಕಾರಿದರು.

ಸಂಸದರ ನೇತೃತ್ವದಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಭಾಗಿಯಾದ ಬಿಜೆಪಿ ಹಾಗೂ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ರೈತ ವಿರೋಧಿ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿದರು. ಹಾಲು ಖರೀದಿ ದರ ಇಳಿಸಿರುವುದನ್ನು ತಕ್ಷಣ ವಾಪಸ್ ಪಡೆಯಬೇಕೆಂದು ಆಗ್ರಹಿಸಿದರು.

# ಕಾರ್ಯಕ್ರಮ ನಿರೂಪಣೆಗೆ ಹೊಸ ತಿರುವು ನೀಡಿದ ಅಪರ್ಣಾ

**• ಉದಯವಾಹಿನಿ ತುಮಕೂರು**

ಕಿರುತೆರೆ, ಹಿರಿತೆರೆ ಮತ್ತು ಕಾರ್ಯಕ್ರಮ ನಿರೂಪಣೆಯಂತಹ ಮೂರು ಪ್ರಕಾರಗಳಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿ ಕಾರ್ಯಕ್ರಮ ನಿರೂಪಣೆಗೆ ಹೊಸ ತಿರುವನ್ನು ನೀಡಿದವರು ಅಪರ್ಣ. ಅವರ ಮರಣ ಕನ್ನಡ ಸಂಸ್ಕೃತಿಗೆ ತುಂಬಲಾರದ ನಷ್ಟವಾಗಿದೆ ಎಂದು ಜಿಲ್ಲಾ ಕ.ಸಾ.ಪ. ಅಧ್ಯಕ್ಷ ಕೆ.ಎಸ್. ಸಿದ್ಧಲಿಂಗಪ್ಪ ನುಡಿದರು.

ಅವರು ಜಿಲ್ಲಾ ಕ.ಸಾ.ಪ. ನಗರದ ಕನ್ನಡ ಭವನದಲ್ಲಿ ಏರ್ಪಡಿಸಿದ್ದ ಅಪರ್ಣಾರವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಮಾತನಾಡಿದರು. ಪಂಚನಹಳ್ಳಿ ಎಂಬ ಕುಗ್ರಾಮದಲ್ಲಿ ಜನಿಸಿದ ಅವರು ನಗರವಾಸಿಯಾಗಿ ಸ್ಫುಟವಾದ ಕನ್ನಡ ಬಳಕೆ, ಉಚ್ಚಾರಣೆಯಿಂದ ಖ್ಯಾತಿ ಪಡೆದು ಅತಿ ಗಣ್ಯರ ಕಾರ್ಯಕ್ರಮದಲ್ಲಿ ವೇದಿಕೆಯಲ್ಲಿ ಕಾರ್ಯಕ್ರಮ ನಿರೂಪಣೆ ಮಾಡಿದ್ದಲ್ಲದೆ ಕಿರುತೆರೆಯ ಮಜಾ ಟಾಕೀಸ್‌ನಂತಹ ಮನರಂಜನಾ ಕಾರ್ಯಕ್ರಮದಲ್ಲಿ ಜನಪ್ರಿಯತೆಯ ಉತ್ತುಂಗ ಶಿಖರವನ್ನೇರಿದರು. ಅಂತಿಮ ದಿನಗಳಲ್ಲಿ ಕ್ಯಾನ್ಸರ್ ವಿರುದ್ಧ ಹೋರಾಡಿದರೂ ಅದು ಫಲ ನೀಡದೆ ಅವರನ್ನು ಬಲಿ ತೆಗೆದುಕೊಂಡಿತು ಎಂದರು. ಕಾರ್ಯಕ್ರಮದಲ್ಲಿ ಹಾಜರಿದ್ದ ಕೆ.ಎಂ.ಎಫ್.ನ ನಿವೃತ್ತ ಜಂಟಿ ನಿರ್ದೇಶಕರಾದ ಪ್ರಸಾದ್‌ರವರು ಮಾತನಾಡಿ ಮಸಣದ ಹೂವು ಎಂಬ ಚಲನಚಿತ್ರದ ಮೂಲಕ ಸಿನಿಮಾರಂಗ ಪ್ರವೇಶಿಸಿದ ಅಪರ್ಣಾ ಅನೇಕ ಖ್ಯಾತ ನಿರ್ದೇಶಕರ ಚಿತ್ರಗಳಲ್ಲಿ ಪೋಷಕ ಪಾತ್ರಗಳನ್ನು ಮಾಡುವ ಮೂಲಕ ಚಲನಚಿತ್ರ ರಂಗಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು. ನಿವೃತ್ತ ಶಿಕ್ಷಕಿ ಮಂಜುಳಾರವರು ಮಾತನಾಡಿ ಖ್ಯಾತ ನಿರೂಪಕಿ ಆಗಿದ್ದ ಅಪರ್ಣಾರವರು ಸದಾ ನಗುಮುಖದಿಂದ ಇದ್ದು, ಟಿ.ಎನ್. ಸೀತಾರಾಂರವರ ಮುಕ್ತ ಧಾರಾವಾಹಿಯ ಪಾತ್ರವನ್ನಂತೂ ಮರೆಯಲಾಗದು ಎಂದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕ.ಸಾ.ಪ. ಕಾರ್ಯದರ್ಶಿ ಡಾ. ಡಿ.ಎನ್.ಯೋಗೀಶ್ವರಪ್ಪ, ಸಂಘಟನಾ ಕಾರ್ಯದರ್ಶಿ ಜಿ.ಹೆಚ್.ಮಹದೇವಪ್ಪ, ತಾಲ್ಲೂಕು ಕ.ಸಾ.ಪ. ಅಧ್ಯಕ್ಷ ಚಿಕ್ಕಬೆಳ್ಳಾವಿ ಶಿವಕುಮಾರ್, ನಟರಾಜು, ಕಾರ್ಯದರ್ಶಿ ಸಿಹಿಜೀವಿ ವೆಂಕಟೇಶ್, ಪ್ರೊ. ಶಶಿಕುಮಾರ್ ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

# ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಕರೆತರಲು ಅಧಿಕಾರಿಗಳಿಗೆ ಡಿಸಿ ಸೂಚನೆ

**• ಉದಯವಾಹಿನಿ ತುಮಕೂರು**

ಜಿಲ್ಲೆಯಲ್ಲಿ 6 ರಿಂದ 16 ವರ್ಷದೊಳಗಿನ ಪ್ರತಿ ಮಗುವಿಗೂ ಕಡ್ಡಾಯ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಮನೆ ಮನೆ ಸಮೀಕ್ಷೆ ಮಾಡುವ ಮೂಲಕ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆ ತರಲು ಕ್ರಮವಹಿಸಬೇಕೆಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ನ್ಯಾಯಾಲಯ ಸಭಾಂಗಣದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮುಖ್ಯವಾಹಿನಿಗೆ ತರುವ ಸಂಬಂಧ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು ಶಾಲೆ ಬಿಟ್ಟ 6 ರಿಂದ 16 ವರ್ಷದ ಯಾವುದೇ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಕ್ರಮ ಕೈಗೊಳ್ಳುವುದರ ಜೊತೆಗೆ ಮಕ್ಕಳು ಶಾಲೆಯನ್ನು ಬಿಡ ಲು ಕಾರಣವೇನೆಂಬುದನ್ನು ಪರಿಶೀಲಿಸಿ ವರದಿ ನೀಡಬೇಕೆಂದು ಸೂಚಿಸಿದರು. ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತ ರುವಲ್ಲಿ ಗ್ರಾಮೀಣ ಪ್ರದೇಶ ವ್ಯಾಪ್ತಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ನಗರ ಪ್ರದೇಶ ವ್ಯಾಪ್ತಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಶಿಕ್ಷಣ ಇಲಾಖೆಯ ಸಹಕಾರದಲ್ಲಿ ಕ್ರಮ ವಹಿಸಬೇಕು ಎಂದರಲ್ಲದೆ, ಮನೆ-ಮನೆ ಸಮೀಕ್ಷೆ ಕಾರ್ಯದಲ್ಲಿ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ರಾಜ್ಯದಲ್ಲಿ ಡೆಂಗ್ಯೂ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಶಾಲೆಯ ಆವರಣದಲ್ಲಿ ನೀರು ನಿಲ್ಲದಂತೆ ಸ್ವಚ್ಛಗೊಳಿಸಿ, ಗ್ರಾಮ ಪಂಚಾಯತಿ ಸಹಯೋಗದಲ್ಲಿ ಶಾಲೆಗಳ ಸುತ್ತ ಮುತ್ತ ವಾರಕ್ಕೆರಡು ಬಾರಿ ಧೂಮೀಕರಣ ಮಾಡುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ದಕ್ಷಿಣ ಶೈಕ್ಷಣಿಕ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ. ಮಂಜುನಾಥ್, ಉಪಯೋಜನಾ ಸಮನ್ವಯಾಧಿಕಾರಿ ಅನಂತಕುಮಾರ್, ಸಹಾಯಕ ಯೋಜನಾಧಿಕಾರಿ ತಾರಾಮಣಿ, ಎಲ್ಲಾ ತಾಲ್ಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು, ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಣಾಧಿಕಾರಿಗಳು ಮತ್ತಿತರರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

**ಶಾಲೆ ಬಿಟ್ಟ ಮಕ್ಕಳ ಮೇಲೆ ಹೆಚ್ಚು ನಿಗಾ ವಹಿಸುವ ಉದ್ದೇಶದಿಂದ ಶಾಲಾ ಶಿಕ್ಷಣ ಇಲಾಖೆಯು ಸಹಾಯವಾಣಿಯನ್ನು ತೆರೆದಿದ್ದು ಸಾರ್ವಜನಿಕರು ಅಂಗಡಿ-ಮುಂಗಟ್ಟು, ಬೀದಿ ಬದಿ, ಭಿಕ್ಷಾಟನೆಯಲ್ಲಿ ತೊಡಗಿರುವ ಹಾಗೂ ವಲಸೆ ಬಂದ, ಕಟ್ಟಡ ಕಾರ್ಮಿಕ ಮಕ್ಕಳು ಕಂಡುಬಂದಲ್ಲಿ ಸಹಾಯವಾಣಿ ಸಂಖ್ಯೆ 0816-2278444ಕ್ಕೆ ಕರೆ ಮಾಡುವ ಮೂಲಕ ಮಾಹಿತಿ ನೀಡಬೇಕು -ಡಿಸಿ**

# ವಿದ್ಯಾರ್ಥಿಗಳು ಅನ್ಯಾಯದ ವಿರುದ್ಧ ಪ್ರಶ್ನೆ ಮಾಡುವಂತವರಾಗಬೇಕು

**• ಉದಯವಾಹಿನಿ, ಶಿಡ್ಲಘಟ್ಟ**

ವಿದ್ಯಾರ್ಥಿ ಜೀವನದಲ್ಲಿ ಆಯ್ಕೆಗಳು ತಮ್ಮದೇ ಆಗಿರುತ್ತದೆ. ಆದರೆ ಅದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳುವುದು ನಿಮ್ಮ ಕೈಯಲ್ಲಿದೆ ಎಂದು ವಿಧಾನ ಪರಿಷತ್ ಸದಸ್ಯ ಡಿ.ಟಿ ಶ್ರೀನಿವಾಸ್ ಅಭಿಪ್ರಾಯ ಪಟ್ಟರು. ನಗರ ಹೊರವಲಯದ ಹಂಡಿಗನಾಳ ಗ್ರಾಮದ ಶ್ರೀ ಬಾಲಾಜಿ ಕನ್ವೆನ್ಷನ್ ಹಾಲ್‌ನಲ್ಲಿ ಎ.ಆರ್.ಎಂ.ಪಿಯು ಕಾಲೇಜು ವತಿಯಿಂದ ಹಮ್ಮಿಕೊಂಡಿದ್ದ ಶ್ರೇಯೊಸ್ತು-2024 ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿ ಜೀವನವೂ ನಿಮ್ಮ ಜೀವನದ ಅತ್ಯಮೂಲ್ಯ ಭಾಗವಾಗಿದೆ. ಇದು ಸ್ಪರ್ಧಾತ್ಮಕ ಯುಗವಾಗಿರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಬೇಕು. ಸತತ ಪ್ರಯತ್ನದಿಂದ ಮಾತ್ರ ನಿಮ್ಮ ಗುರಿಯನ್ನು ಈಡೇರಿಸಲು ಸಾದ್ಯ. ಪೋಷಕರು ಸಹ ತಮ್ಮ ಮಕ್ಕಳೊಂದಿಗೆ ಸ್ನೇಹಿತರಂತೆ ಇದ್ದು ಅವರಿಗೆ ಮಾರ್ಗದರ್ಶಕರಾಗಿರಬೇಕು ಎಂದರು.

ಅಹಿಂಸಾ ನಟ ಚೇತನ್ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಹೋರಾಟದ ಸಂಘರ್ಷದ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. ಸಮಾಜಕ್ಕೆ ಪ್ರತಿಯೊಬ್ಬರು ತಮ್ಮದೇ ಆದ ಕೊಡುಗೆ ನೀಡಬೇಕು. ಅನ್ಯಾಯದ ವಿರುದ್ಧ ಪ್ರಶ್ನೆ ಮಾಡುವಂತವರಾಗಬೇಕು. ಆಳುವ ವರ್ಗವೇ ಆಳುತ್ತಿರುವುದು ಅನ್ಯಾಯ ಇತಿಹಾಸ ಹಾಗೂ ಸಂವಿಧಾನವನ್ನು ಎಲ್ಲರೂ ತಿಳಿದುಕೊಳ್ಳಬೇಕು. ವಿದ್ಯಾರ್ಥಿಗಳು ವೈಜ್ಞಾನಿಕ ಮನಸ್ಥಿತಿಯನ್ನು ಬೆಳೆಸಿಕೊಂಡು ಸಮಾಜದ ಬಗ್ಗೆ ಅರಿವು ಇರಬೇಕು. ಸಮಾಜದ ಸಮಸ್ಯೆಗಳ ಕುರಿತು ಜಾಗೃತರಾಗಬೇಕು. ಸಮ ಸಮಾಜವನ್ನು ಪ್ರತಿಯೊಬ್ಬರು ನಿರ್ಮಿಸಬೇಕು. ಉತ್ತಮ ಆಲೋಚನಾ ಶಕ್ತಿಯನ್ನು ಬೆಳೆಸಿಕೊಂಡು, ಅಸಮಾನತೆಯನ್ನು ಹೋಗಲಾಡಿಸಬೇಕು, ವಿಷಕಾರಿ ಪುರುಷತ್ವದ ವಿರುದ್ಧ ಎಲ್ಲರೂ ಧ್ವನಿ ಎತ್ತಬೇಕಿದೆ ಎಂದು ತಿಳಿಸಿದರು.



ಉದಯವಾಹಿನಿ ಚಿತ್ರ

**ಇತಿಹಾಸ, ಸಂವಿಧಾನವನ್ನು ಎಲ್ಲರೂ ತಿಳಿದುಕೊಳ್ಳಬೇಕು**

ಕಾರ್ಯಕ್ರಮದಲ್ಲಿ ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಶಾಲಾ ಕಾಲೇಜು ವಿದ್ಯಾರ್ಥಿಗಳ ಹಾಡು,ನೃತ್ಯ, ಡೊಳ್ಳು ಕುಣಿತ,ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ದೇವರ ಮಳ್ಳೂರು ಮಹೇಶ್ ನೇತೃತ್ವದಲ್ಲಿ ಜಾನಪದ ಹಾಡುಗಳ ಗಾಯನ ಗಮನ ಸೆಳೆಯಿತು.

ಈ ಸಂದರ್ಭದಲ್ಲಿ ಇಸ್ರೋ ವಿಜ್ಞಾನಿ ಗುರಪ್ಪ,ಶಾರದಾ ವಿದ್ಯಾ ಸಂಸ್ಥೆ ಅಧ್ಯಕ್ಷ ಎ.ಆರ್ ಮುನಿರತ್ನಂ,ಉಚ್ಚನ್ಯಾಯಲಯ ವಕೀಲರು ಹರಿರಾಮ್,ಪ್ರಾಂಶುಪಾಲ ಡಾ.ಕೆ ಮೂರ್ತಿ ಸಾಮ್ರಾಟ್, ಕಾರ್ಯದರ್ಶಿ ಸುಮನ್,ದ್ಯಾವಪ್ಪ, ಗುತ್ತಿಗೆದಾರ ಟಿ.ಕೆ.ನಟರಾಜ್, ಶಾರದಾ ಸಂಸ್ಥೆಯ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಇದ್ದರು.

# ಅಂಗನವಾಡಿಯಲ್ಲಿ ಕುಕ್ಕರ್ ಸ್ಫೋಟ: 14 ಮಕ್ಕಳು ಪಾರು

**• ಉದಯವಾಹಿನಿ ತುಮಕೂರು**

ಅಂಗನವಾಡಿಯಲ್ಲಿ ಕುಕ್ಕರ್ ಸ್ಫೋಟಗೊಂಡ ಘಟನೆ ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಸಿ. ಯಡವನಹಳ್ಳಿಯಲ್ಲಿ ನಡೆದಿದೆ.



ಅಂಗನವಾಡಿಯಲ್ಲಿ ಅಡುಗೆ ಮಾಡುತ್ತಿದ್ದ ವೇಳೆ ಏಕಾಏಕಿ ಕುಕ್ಕರ್ ಸಿಡಿದಿದ್ದು, ಇಬ್ಬರು ಮಕ್ಕಳು ಗಾಯಗೊಂಡಿದ್ದಾರೆ. 14 ಮಕ್ಕಳು ಅಪಾಯ ದಿಂದ ಪಾರಾಗಿದ್ದಾರೆ. ಗಾಯಾಳು ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದೆ. ಸಿ.ಎಸ್. ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

# ಶಿವನ ಸಮುದ್ರದ ಭರಚುಕ್ಕಿ-ಗಗನಚುಕ್ಕಿಯಲ್ಲಿ ಜಲವೈಭವ

## • ಬೇಸಿಗೆಯಲ್ಲಿ ವೈಭವ ಕಳೆದುಕೊಂಡು ಮಂಕಾಗಿದ್ದ ಜಲಧಾರೆಗಳಲ್ಲಿ ನಿಧಾನವಾಗಿ ಜೀವಕಳೆ ಬರುತ್ತಿದೆ


**• ಉದಯವಾಹಿನಿ ಮೈಸೂರು**

ಈ ಬಾರಿಯ ರಣಬಿಸಿಲು ಜಲಪಾತಗಳನ್ನು ಹೆಬ್ಬಂಡೆಗಳ ಮೇಲೆಯೇ ಬತ್ತಿ ಹೋಗುವಂತೆ ಮಾಡಿತ್ತು. ಬೇಸಿಗೆಯಲ್ಲಿ ಜಲಪಾತಗಳನ್ನು ನೋಡಲು ಹೋದವರು ಕಗ್ಗಿನ ಹೆಬ್ಬಂಡೆಗಳಲ್ಲಿ ಲೀನವಾಗಿ ಹೋದ ಜಲಧಾರೆಗಳನ್ನು ನೋಡಿ ನಿರಾಸೆಯಿಂದ ಹಿಂತಿರುಗುತ್ತಿದ್ದರು. ಆದರೀಗ ಒಂದಿಷ್ಟು ಮಳೆ ಸುರಿದ ಕಾರಣ ಕಾವೇರಿ ನದಿಗೆ ಉಪನದಿಗಳು ಸೇರಿ ಹರಿಯುತ್ತಿರುವ ಕಾರಣ ಶಿವನಸಮುದ್ರದ ಭರಚುಕ್ಕಿ ಮತ್ತು ಗಗನಚುಕ್ಕಿಯಲ್ಲಿ ನಿಧಾನವಾಗಿ ಜಲವೈಭವ ಆರಂಭವಾಗಿದೆ.

ಒಂದೆಡೆ ಮಳೆ ಸುರಿಯುತ್ತಿದೆ.. ಮತ್ತೊಂದೆಡೆ ಜಲಾಶಯ ಭರ್ತಿಯಾಗದಿದ್ದರೂ ಕಬಿನಿ, ಕೆಆರ್ ಎಸ್ ಜಲಾಶಯದಿಂದ ಒಂದಷ್ಟು ನೀರು ಹರಿದು ಹೋಗುತ್ತಿದೆ. ಹೀಗಾಗಿ ಕಾವೇರಿ ನದಿಯಿಂದ ನಿರ್ಮಾಣವಾಗಿರುವ ಶಿವನಸಮುದ್ರದ ಭರಚುಕ್ಕಿ ಮತ್ತು ಗಗನಚುಕ್ಕಿಯ ಹೆಬ್ಬಂಡೆಗಳ ಮೇಲೆ ಜಲಧಾರೆ ಚಿತ್ತಾರ ಬಿಡಿಸಲು ಆರಂಭಿಸಿದ್ದು, ಸದ್ಯ ಹೆಚ್ಚು ನೀರಿಲ್ಲದ ಕಾರಣ ಮಿಂಚು ಸರಿದಂತೆ ಭಾಸವಾಗುತ್ತಿದೆ.

ಬೇಸಿಗೆಯಲ್ಲಿ ವೈಭವ ಕಳೆದುಕೊಂಡು ಮಂಕಾಗಿದ್ದ ಜಲಧಾರೆಗಳಲ್ಲಿ ನಿಧಾನವಾಗಿ ಜೀವಕಳೆ ಬರುತ್ತಿದೆ. ಈಗಾಗಲೇ ಮಲೆನಾಡಿನಲ್ಲಿ ಮುಂಗಾರು ಮಳೆ ಉತ್ತಮವಾಗಿ ಸುರಿದಿರುವುದರಿಂದ ಜಲಪಾತಗಳೆಲ್ಲವೂ ಮೈಕೈ ತುಂಬಿಕೊಂಡು ಧುಮ್ಮಿಕ್ಕುತ್ತಿವೆ. ಸದ್ಯಕ್ಕಿವು ಚೆಲುವೆಯರಂತೆ ಬಳುಕುತ್ತಾ ಬಾಗುತ್ತಾ ಬೀಗುತ್ತಾ ಥಕಥೈ ಎನ್ನುತ್ತಿವೆ. ಇದನ್ನು ನೋಡುವ ಸಲುವಾಗಿ ದೂರದಿಂದ ಪ್ರವಾಸಿಗರ ದಂಡು ಎಲ್ಲೆಂದರಲ್ಲಿ ಅಲೆಯುತ್ತಿದ್ದಾರೆ. ಪಶ್ಚಿಮ ಘಟ್ಟಗಳಲ್ಲಿ ಜಲಪಾತಗಳಿಗೆ ಕೊರತೆಯಿಲ್ಲ. ಆದರೆ ಮೈಸೂರು ಚಾಮರಾಜನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ನಿಸರ್ಗ ಪ್ರೇಮಿಗಳನ್ನು ಹೆಚ್ಚಾಗಿ ಸೆಳೆಯುವ ಜಲಪಾತವಿದ್ದರೆ ಅದು ಶಿವನಸಮುದ್ರದ ಭರಚುಕ್ಕಿ ಮತ್ತು ಗಗನಚುಕ್ಕಿ ಜಲಪಾತಗಳಾಗಿವೆ. ಈ ಜಲಪಾತಕ್ಕೆ ಜೀವಕಳೆ ಬರಬೇಕಾದರೆ, ಕೊಡಗಿನ ತಲಕಾವೇರಿಯಲ್ಲಿ ಹುಟ್ಟಿ ಹರಿಯುವ ಕಾವೇರಿ ನದಿ ಉಪ ನದಿಗಳೊಂದಿಗೆ ಸಂಗಮಗೊಂಡು ಕೆಆರ್ ಎಸ್ ತಲುಪಬೇಕು.. ಬಳಿಕ ತಿ.ನರಸೀಪುರ ಬಳಿ ಕಬಿನಿ ಇತರೆ ಉಪನದಿಗಳ ಸಂಗಮವಾಗಬೇಕು. ಆಗ ಕಾವೇರಿ ಇನ್ನಷ್ಟು ಮೈಕೈ ತುಂಬಿಕೊಂಡು ಹರಿಯಲಾರಂಭಿಸುತ್ತಾಳೆ. ಹೀಗೆ ಹರಿದು ಬರುವ ಕಾವೇರಿ ಬೆಟ್ಟಗುಡ್ಡ, ಕಾಡುಮೇಡುಗಳನ್ನೆಲ್ಲಾ ಕ್ರಮಿಸುತ್ತಾ ಶಿವನಸಮುದ್ರ ತಲುಪುತ್ತಿದ್ದಂತೆಯೇ ಗಗನದೆತ್ತರದಿಂದ ಧುಮುಕಿ ಗಗನಚುಕ್ಕಿಯಾಗಿ, ಬಳಿಕ ಭರದಿಂದ ಹರಿದು ಭರಚುಕ್ಕಿಯಾಗಿ ಗಮನಸೆಳೆಯುವುದು ವಿಶೇಷವಾಗಿದೆ. ಶಿವನಸಮುದ್ರದಲ್ಲಿರುವ ಎರಡು ಜಲಧಾರೆಗಳು ಕೆಲವೇ ಕೆಲವು ಕಿಲೋಮೀಟರ್ ದೂರದ ಅಂತರದಲ್ಲಿದ್ದರೂ ಇವು ಬೇರೆ, ಬೇರೆ ಜಿಲ್ಲೆಗಳಿಗೆ ಸೇರಿವೆ. ಭರಚುಕ್ಕಿ ಚಾಮರಾಜನಗರಕ್ಕೆ ಸೇರಿದರೆ, ಗಗನಚುಕ್ಕಿ ಮಂಡ್ಯ ಜಿಲ್ಲೆಗೆ ಸೇರಿದೆ.

ಈ ಜಲಧಾರೆಗಳು ನಯನಮನೋಹರವಾಗಿರುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಇಲ್ಲಿಗೆ ಬರುತ್ತಾರೆ. ಶಿವನಸಮುದ್ರಕ್ಕೆ ಬೆಂಗಳೂರಿನಿಂದ ಬರುವುದಾದರೆ ರಾಮನಗರ, ಚನ್ನಪಟ್ಟಣ, ಮದ್ದೂರು, ಮಳವಳ್ಳಿ ಮೂಲಕ ಹಾಗೂ ಮೈಸೂರಿನಿಂದ ಬನ್ನೂರು, ಮಳವಳ್ಳಿ ಅಥವಾ ಚಾಮರಾಜನಗರ, ಕೊಳ್ಳೆಗಾಲ ಮೂಲಕವೂ ಬರಬಹುದು. ಶಿವನಸಮುದ್ರಕ್ಕೆ ತೆರಳಿದರೆ ಸುತ್ತಮುತ್ತಲಿರುವ ತಲಕಾಡು, ಸೋಮನಾಥಪುರ ಮುಂತಾದ ಪ್ರವಾಸಿ ತಾಣಗಳಿಗೂ ಭೇಟಿ ನೀಡಿ ಬರಬಹುದಾಗಿದೆ.



ಉದಯವಾಹಿನಿ ಚಿತ್ರ

**ಹೆಬ್ಬಂಡೆಗಳ ಮೇಲೆ ಜಲಧಾರೆ ಚಿತ್ತಾರ**

**ಪ್ರವಾಸಿಗರಿಗೆ ಉಳಿದುಕೊಳ್ಳಲು ಯಾವುದೇ ಸೌಲಭ್ಯವಿಲ್ಲ**

**ಶಿವನಸಮುದ್ರದಲ್ಲಿ ಮಾರಮ್ಮನ ದೇವಾಲಯವಿದ್ದು ಕೋಳಿ, ಕುರಿಗಳನ್ನು ಬಲಿ ಕೊಡಲಾಗುತ್ತದೆ. ಇನ್ನು ಇಲ್ಲಿ ಐತಿಹಾಸಿಕ ದರ್ಗಾವೂ ಇದೆ. ದೂರದಿಂದ ತೆರಳುವ ಪ್ರವಾಸಿಗರಿಗೆ ಅಲ್ಲಿ ಉಳಿದುಕೊಳ್ಳಲು ಯಾವುದೇ ಸೌಲಭ್ಯವಿಲ್ಲ ಹಾಗಾಗಿ ಸಮೀಪದ ಪಟ್ಟಣಗಳಾದ ಕೊಳ್ಳೇಗಾಲ ಅಥವಾ ಮಳವಳ್ಳಿಗೆ ಹೋಗಬೇಕಾಗುತ್ತದೆ. ಸದ್ಯಕ್ಕೆ ಕಾವೇರಿಯಲ್ಲಿ ಹೆಚ್ಚು ನೀರಿಲ್ಲದ ಕಾರಣ ಶಿವನಸಮುದ್ರದಲ್ಲಿ ಆರ್ಭಟ ಹೆಚ್ಚಿಲ್ಲದಿದ್ದರೂ ಮುಂದಿನ ದಿನಗಳಲ್ಲಿ ಕೊಡಗಿನಲ್ಲಿ ಭಾರೀ ಮಳೆಯಾಗಿ ಕೆಆರ್‌ಎಸ್ ಜಲಾಶಯ ಭರ್ತಿಯಾದರೆ, ಇನ್ನೊಂದೆಡೆ ಕಬಿನಿಯೂ ಭರ್ತಿಯಾಗಿ ಹೆಚ್ಚುವರಿ ನೀರು ಹರಿದು ಬರಲಾಂಭಿಸಿದರೆ ಆಗ ಭರಚುಕ್ಕಿ ಮತ್ತು ಗಗನಚುಕ್ಕಿ ರೌದ್ರಾವತಾರ ತಾಳಲಿದ್ದು ಆಗ ಅದನ್ನು ನೋಡಲು ಎರಡು ಕಣ್ಣುಗಳು ಸಾಲದಾಗುತ್ತದೆ.**

**ಇಲ್ಲಿಗೆ ತೆರಳಲು ಹೆಚ್ಚಿನ ಬಸ್ ಸಂಪರ್ಕ ಇಲ್ಲದಿರುವುದರಿಂದ ಬಾಡಿಗೆ ಅಥವಾ ಸ್ವಂತ ವಾಹನಗಳಲ್ಲಿ ತೆರಳಬೇಕಾಗುತ್ತದೆ. ಶಿವನಸಮುದ್ರಕ್ಕೆ ತೆರಳುವ ಪ್ರವಾಸಿಗರು ಇಲ್ಲಿರುವ ಗಗನಚುಕ್ಕಿ ಮತ್ತು ಭರಚುಕ್ಕಿ ಜಲಧಾರೆಗಳನ್ನು ದೂರದಿಂದ ನೋಡಿ ಹಿಂತಿರುಗಿದರೆ ಕ್ಷೇಮ. ಅದು ಬಿಟ್ಟು ಜಲಧಾರೆಯ ಸೌಂದರ್ಯಕ್ಕೆ ಮನಸೋತು ಜಲಧಾರೆಯಲ್ಲಿ ಈಜುವ, ಸ್ನಾನ ಮಾಡುವ ಪ್ರಯತ್ನ ಮಾಡುವುದು ಒಳ್ಳೆಯದಲ್ಲ. ಏಕೆಂದರೆ ಇಲ್ಲಿ ಪ್ರಾಣಕಳೆದುಕೊಂಡವರ ದೊಡ್ಡಪಟ್ಟಿಯೇ ಇದೆ.**

# ಮಿನಿ ನ್ಯೂಸ್

## ಸರ್ವರೆಡ್ಡಿಹಳ್ಳಿ-ಬೂಡಿದ್ದಿಮಿಟ್ಟ ಗ್ರಾಮದಲ್ಲಿ ಬಗೆ ಹರಿಯದ ರಸ್ತೆ ವಿವಾದ

**• ಉದಯವಾಹಿನಿ ಚೇತಮಂಗಲ**

ರಾಮಸಾಗರ ಗ್ರಾಮ ಪಂಚಾಯಿತಿಯ ಸರ್ವರೆಡ್ಡಿಹಳ್ಳಿ-ಬೂಡಿದ್ದಿಮಿಟ್ಟ ಗ್ರಾಮದಲ್ಲಿ ಬಂಡಿ ದಾರಿಗಾಗಿ ರೈತ ಸಂಘ ಹಾಗೂ ದಲಿತ ಪರ ಸಂಘಟನೆಗಳು ತಹಶೀಲ್ದಾರ್‌ಗೆ ಪ್ರತ್ಯೇಕವಾದ ಮನವಿಗಳನ್ನು ಸಲ್ಲಿಸಿದ್ದು, ಕಂದಾಯ ಇಲಾಖೆ ಅಧಿಕಾರಿಗಳು ರಸ್ತೆ ಸ್ಥಳಕ್ಕೆ ಭೇಟಿ ನೀಡಿ ಬಂಡಿ ದಾರಿ ಗುರುತಿಸುವ ಮೂಲಕ ವಿವಾದಕ್ಕೆ ಅಂತ್ಯ ಹಾಡಬೇಕಿದೆ.



ಉದಯವಾಹಿನಿ ಚಿತ್ರ

ಸರ್ವರೆಡ್ಡಿಹಳ್ಳಿ ಗ್ರಾಮದ ಬಂಡಿದಾರಿಯ ವಿವಾದವು ಸುಮಾರು 1 ವರ್ಷ ದಿಂದ ರಸ್ತೆಯ ತೆರಿವಿಗಾಗಿ ಪ್ರಕ್ರಿಯೆ ನಡೆಯುತ್ತಿದೆ, ಅಂದರೆ ವರ್ಷವಾದರೂ ಸಹ ರಸ್ತೆ ಸಮಸ್ಯೆಗೆ ಮುಕ್ತಿ ದೊರೆಯದೆ ಮತ್ತಷ್ಟು ವಿವಾದಗಳು ಸೃಷ್ಟಿಯಾಗಿದೆ. ಬಂಡಿ ದಾರಿ ಇಲ್ಲದೆ ಹಲವು ರೈತರ ಜಮೀನುಗಳಿಗೆ ತೆರಳಲು ದಾರಿ ಇಲ್ಲದೆ ಮಾವಿನ ಹಣ್ಣು ಮತ್ತು ತೆಂಗಿನ ಕಾಯಿ ಮಾರ್ಗದಲ್ಲಿಯೇ ನಾಶವಾಗುತ್ತಿದೆ ಎಂದು ನೋದ ರೈತರು ನೋವು ತೋಡಿಕೊಂಡಿದ್ದಾರೆ. ಕಂದಾಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸೂಕ್ತ ದಾಖಲೆಗಳನ್ನು ಪರಿಶೀಲಿಸಿ ಬಂಡಿ ದಾರಿಯನ್ನು ಗುರುತಿಸಿ ರಸ್ತೆಯನ್ನು ಮಾಡಿಸಿ ಸುಮಾರು ವರ್ಷಗಳ ರೈತರ ಸಮಸ್ಯೆಗೆ ಮುಕ್ತಿ ನೀಡಬೇಕೆಂದು ಕೋರಿದ್ದಾರೆ.

## ಅಪ್ರಾಪ್ತೆಯನ್ನು ಗರ್ಭಿಣಿಯನ್ನಾಗಿಸಿದ ಆರೋಪದಲ್ಲಿ ಯುವಕನ ಬಂಧನ

**• ಉದಯವಾಹಿನಿ ಯಳಂದೂರು**

ಸಮೀಪದ ಗ್ರಾಮವೊಂದರಲ್ಲಿ ಅಪ್ರಾಪ್ತ ವಯಸ್ಕಳೊಬ್ಬಳು ಗರ್ಭಿಣಿಯಾಗಿದ್ದು, ಈ ಸಂಬಂಧ ಯುವಕನೊಬ್ಬನನ್ನು ಬಂಧಿಸಲಾಗಿದೆ. ಮನು (26) ಎಂಬಾತ ಬಂಧಿತ ಆರೋಪಿ. 17 ವರ್ಷದ ತರುಣಿಯನ್ನು ಬಿಳಿಗಿರಿರಂಗನ ಬೆಟ್ಟಕ್ಕೆ ಕರೆದೊಯ್ದು ಅಲ್ಲಿನ ಲಾಡ್ಜ್‌ನಲ್ಲಿ ತಂಗಿದ್ದ ಎನ್ನಲಾಗಿದೆ. ಅಲ್ಲದೆ ಈಕೆಯ ತಾಯಿ ಕೂಲಿ ಕೆಲಸಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಈಕೆಯ ಮನೆಗೆ ಬಂದು ಹೋಗುತ್ತಿದ್ದ ಎನ್ನಲಾಗಿದೆ. ಯುವತಿಗೆ ಹುಷಾರಿಲ್ಲದ ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲು ಕರೆದೊಯ್ದಿದ್ದ ಸಂದರ್ಭದಲ್ಲಿ 7 ತಿಂಗಳ ಗರ್ಭಿಣಿ ಎನ್ನುವುದು ತಿಳಿದು ಬಂದಿದೆ. ಈ ಸಂಬಂಧ ಯಳಂದೂರು ಪೊಲೀಸ್ ಠಾಣೆಯಲ್ಲಿ ಪೋಕ್ಸೋ ಪ್ರಕರಣದಡಿಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಈತನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

## ಮುಡಾ ಕಛೇರಿ ಎದುರು ಕಾಂಗ್ರೆಸ್-ಬಿಜೆಪಿ ಕಾರ್ಯಕರ್ತರ ಹೈಡ್ರಾಮಾ

**• ಉದಯವಾಹಿನಿ ಮೈಸೂರು**

ಮುಡಾ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಮುಡಾ ಕಚೇರಿ ಎದುರು ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸುವ ಮೂಲಕ ದೊಡ್ಡ ಹೈಡ್ರಾಮವೇ ನಡೆಯಿತು.

ಹೌದು ಮುಡಾ ಕಛೇರಿ ಎದುರು ಪ್ರತಿಭಟನೆ ನಡೆಸಿದ್ದಾರೆ. ಈ ವೇಳೆ ಪೊಲೀಸರು ಅವರನ್ನು ವಶಕ್ಕೆ ಪಡೆದಿದ್ದಾರೆ.

ಈ ಮಧ್ಯೆ, ಬಿಜೆಪಿ ಪ್ರತಿಭಟನೆಯನ್ನು ವಿರೋಧಿಸಿ ಕಾಂಗ್ರೆಸ್ ಕಾರ್ಯಕರ್ತರೂ ಕೂಡ ಪ್ರತಿಭಟನೆ ನಡೆಸಿದ್ದರು. ಆದರೆ, ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಲಿಲ್ಲ. ಈ ಹಿನ್ನಲೆ ನಮ್ಮನ್ನೂ ಬಂಧಿಸಿ ಎಂದು ಕೈ ಕಾರ್ಯಕರ್ತರು ಹೈಡ್ರಾಮ ಮಾಡಿದ್ದಾರೆ.

ಬಿಜೆಪಿ ಕಾರ್ಯಕರ್ತರಿಗೆ ಮುತ್ತಿಗೆ ಹಾಕುತ್ತೇವೆ ಎಂದು ಪಟ್ಟು ಹಿಡಿದಿದ್ದ ಕಾಂಗ್ರೆಸ್ ಕಾರ್ಯಕರ್ತರಿಗೆ ಮುತ್ತಿಗೆ ಹಾಕಲು ಬಿಡದಿದ್ದಾಗ ತಮ್ಮನ್ನೂ ಅರೆಸ್ಟ್ ಮಾಡುವಂತೆ ಪಟ್ಟು ಹಿಡಿದಿದ್ದರು. ಇದೇ ವೇಳೆ ಮೈಸೂರು ಕಮಿಷನರೇಟ್ ಪೊಲೀಸರ ವಿರುದ್ಧ ಕಾಂಗ್ರೆಸ್ ಮುಖಂಡರು ಆಕ್ರೋಶ ಹೊರಹಾಕಿ, ನಮ್ಮನ್ನೂ ಬಂಧಿಸಿ, ನಮ್ಮನ್ನು ಅರೆಸ್ಟ್ ಮಾಡದೆ ನೀವು ಅವಮಾನ ಮಾಡಿದ್ದೀರಿ, ನಿಮ್ಮ ಕಮಿಷನರ್ ಎಲ್ಲಿ ಎಂದು ಡಿಸಿಪಿ ಜಾಹ್ನವಿಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆವಾಜ್ ಹಾಕಿದ್ದಾರೆ. ಆದರೂ ಪೊಲೀಸರು ಬಂಧಿಸಲು ಮುಂದಾಗಿಲ್ಲ.

## ಬಿಜೆಪಿ ಕಾರ್ಯಕರ್ತರು ಪೊಲೀಸ್ ವಶಕ್ಕೆ

**• ಉದಯವಾಹಿನಿ ರಾಮನಗರ**



ಉದಯವಾಹಿನಿ ಚಿತ್ರ

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಹಗರಣಕ್ಕೆ ಸಂಬಂಧಿಸಿದಂತೆ, ಮೈಸೂರಿನಲ್ಲಿ ಶುಕ್ರವಾರ ಬಿಜೆಪಿ ಹಮ್ಮಿಕೊಂಡಿರುವ ಪ್ರತಿಭಟನೆಗೆ ತೆರಳುತ್ತಿದ್ದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ನಗರದಲ್ಲಿ ವಶಕ್ಕೆ ಪಡೆದರು. ಕಾರು ಸೇರಿದಂತೆ ವಿವಿಧ ವಾಹನಗಳಲ್ಲಿ ಮೈಸೂರಿಗೆ ತೆರಳುತ್ತಿದ್ದ ಮುಖಂಡರು ಹಾಗೂ ಕಾರ್ಯಕರ್ತರ ವಾಹನವನ್ನು, ಇಲ್ಲಿನ ಎಸ್.ಪಿ. ಕಚೇರಿ ವೃತ್ತದ ಬಳಿ ರಸ್ತೆಗೆ ಬ್ಯಾರಿಕೇಡ್ ಹಾಕಿ ಕಾಯುತ್ತಿದ್ದ ಪೊಲೀಸರ ತಂಡ ತಡೆಯಿತು. ವಾಹನದಲ್ಲಿದ್ದ ಮಹಿಳಾ ಮತ್ತು ಪುರುಷ ಕಾರ್ಯಕರ್ತರನ್ನು ಕೆಳಕ್ಕಿಳಿಸಿದ ಪೊಲೀಸರು ತಮ್ಮ ವಶಕ್ಕೆ ಪಡೆದರು. ನಂತರ, ಪೊಲೀಸ್ ವಾಹನ ಮತ್ತು ಕೆ.ಎಸ್.ಆರ್.ಟಿ.ಸಿ ಬಸ್ ನಲ್ಲಿ ಕರೆದೊಯ್ದರು.

## ಯೋಗ ಫೆಸ್ಟಿವಲ್‌ಗೆ ತ್ರಿನೇತ್ರ ಸ್ವಾಮೀಜಿ

**• ಉದಯವಾಹಿನಿ ಶ್ರೀರಂಗಪಟ್ಟಣ**



ಪಟ್ಟಣ ಸಮೀಪದ ಚಂದ್ರವನ ಆಶ್ರಮದ ಪೀಠಾಧ್ಯಕ್ಷ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಅವರು ಇಂದು ಶ್ರೀಲಂಕಾದ ಕ್ಯಾಂಡಿಯಲ್ಲಿ ನಡೆಯಲಿರುವ ಅಂತರ ರಾಷ್ಟ್ರೀಯ ಯೋಗ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ. ಕ್ಯಾಂಡಿಯ ಫ್ಯಾಮಿಲಿ ಯೋಗ ಅಕಾಡೆಮಿ ಮತ್ತು ಬೆಂಗಳೂರಿನ ರೋಟರಿ ಬೆಂಗಳೂರು ಗ್ಲೋಬಲ್ ಯೋಗ ವತಿಯಿಂದ ಭಾರತ-ಲಂಕಾ ಗ್ಲೋಬಲ್ ಯೋಗ ಫೆಸ್ಟಿವಲ್ ನಡೆಯಲಿದೆ. ಕ್ರೀಡೆಯಲ್ಲಿ ಯೋಗ, ವಿಜ್ಞಾನ ಯೋಗ, ಯೋಗಾಸನ ಜೋಡಣೆ, ಮಹಿಳೆಯರಿಗೆ ಯೋಗ, ಮುದ್ರೆ ಮತ್ತು ಬಂಧ, ಚಕ್ರ ಮತ್ತು ಸೆಳವು, ಯೋಗ ಮತ್ತು ಸಂಗೀತ ಚಿಕಿತ್ಸೆ ಎಂಬ ವಿಷಯಗಳ ಕುರಿತು ನಡೆಯಲಿರುವ ಯೋಗ ಸೆಮಿನಾರ್‌ನಲ್ಲಿ ಸ್ವಾಮೀಜಿ ವಿಷಯ ಮಂಡಿಸಲಿದ್ದಾರೆ. ಪ್ರವಾಸೋದ್ಯಮ ಮತ್ತು ಭೂಮಿ ಸಚಿವಾಲಯ ಹಾಗೂ ಕ್ರೀಡೆ ಮತ್ತು ಯುವ ವ್ಯವಹಾರಗಳ ಸಚಿವಾಲಯದ ಹರಿನ್ ಫೆರ್ನಾಂಡೊ, ಅಂತರರಾಷ್ಟ್ರೀಯ ಯೋಗ ತಜ್ಞ ರಾಘವೇಂದ್ರ ಪೈ, ರೋಟರಿ ಬೆಂಗಳೂರು ಗ್ಲೋಬಲ್ ಯೋಗದ ಸಂಸ್ಥಾಪಕ ಡಾ.ಯೋಗಿರಾಜ್, ನಿವೃತ್ತ ಆಯುಷ್ ಅಧಿಕಾರಿ ಡಾ. ನಾಗೇಶ್, ಡಾ.ಮಧುಮತಿ, ವಿಶ್ವನಾಥ್ ಗುರೂಜಿ ಪಾಲ್ಗೊಳ್ಳಲಿದ್ದಾರೆ ಎಂದು ಚಂದ್ರವನ ಆಶ್ರಮದ ಕಾರ್ಯದರ್ಶಿ ಟಿ.ಪಿ.ಶಿವಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂತರಾಳದಿಂದ... EDITORIAL

# ದಲಿತನೆಂಬ ಕಾರಣಕ್ಕೆ ಜಿಗಜಿಣಗಿ
## ಸಚಿವ ಸ್ಥಾನದಿಂದ ವಂಚಿತರಾದರೆ

ಏಳು ಬಾರಿ ಸಂಸದರಾಗಿ ಅನುಭವವಿದ್ದರೂ ದಲಿತನನ್ನುವ ಕಾರಣಕ್ಕೆ ಮೋದಿ ಸರಕಾರದ ಸಂಪುಟದಲ್ಲಿ ನನಗೆ ಸಚಿವ ಸ್ಥಾನ ನಿರಾಕರಿಸಲಾಗಿದೆ ಎಂದು ಸಂಸದ ರಮೇಶ್ ಜಿಗಜಿಣಗಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ತನ್ನ ರಾಜಕೀಯ ಜೀವನದ ಕಡೆಯ ದಿನಗಳಲ್ಲಾದರೂ ದಲಿತ ಸ್ಥಾನಮಾನದ ಬಗ್ಗೆ ಅವರಿಗೆ ಅರಿವು ಮೂಡಿರುವುದು ಒಂದು ಆಶಾದಾಯಕ ವಿಷಯವೇ ಆಗಿದೆ. ಜಿಗಜಿಣಗಿಯವರು ಬಿಜೆಪಿಯೊಳಗೆ ತನ್ನ ಜಾತಿಯ ಬಗ್ಗೆ ಒಂದು ರೀತಿಯ ಕೀಳರಿಮೆಯಿಂದಲೇ ಬದುಕಿಕೊಂಡು ಬಂದವರು. ದೇವಸ್ಥಾನ ಪ್ರವೇಶದ ವಿಷಯದಲ್ಲಿ ಜಿಗಜಿಣಗಿ ಹೇಳಿಕೆ ಈ ಹಿಂದೆ ಪತ್ರಿಕೆಗಳಲ್ಲಿ ಚರ್ಚೆಯ ವಿಷಯವಾಗಿತ್ತು ದಲಿತರಾದ ಕಾರಣಕ್ಕೆ ದೇವಸ್ಥಾನದೊಳಗೆ ಪ್ರವೇಶ ಸಿಗದೇ ಇದ್ದಾಗ, ದೇವಸ್ಥಾನದ ಹೊರಗೆ ನಿಂತೇ ಪ್ರಸಾದವನ್ನು ಸ್ವೀಕರಿಸಿ ಅವರು ಪತ್ರಿಕೆಗಳಲ್ಲಿ ಮುಖಪುಟದ ಸುದ್ದಿಯಾದರು. ಒಬ್ಬ ದಲಿತನಾಗಿರುವ ಕಾರಣಕ್ಕೆ ಒಬ್ಬ ಸಂಸದನಿಗೂ ದೇವಸ್ಥಾನದಲ್ಲಿ ಪ್ರವೇಶವಿಲ್ಲ ಎಂದಾದರೆ, ಹಿಂದೂ ಧರ್ಮದಲ್ಲಿ ಉಳಿದ ದಲಿತರ ಸ್ಥಾನಮಾನ ಹೇಗಿರಬಹುದು ಎನ್ನುವುದು ಚರ್ಚೆಗೆ ಕಾರಣವಾಗಿತ್ತು ಈ ಸಂದರ್ಭದಲ್ಲಿ ಸ್ಪಷ್ಟೀಕರಣ ನೀಡಿದ ಜಿಗಜಿಣಗಿ ನಾನು ದೇವಸ್ಥಾನ ಪ್ರವೇಶಿಸುವುದರಿಂದ ಕೆಲವರ ಭಾವನೆಗಳಿಗೆ ಧಕ್ಕೆಯಾಗುವುದರಿಂದ ದೇವಸ್ಥಾನ ಪ್ರವೇಶಿಸುವುದಿಲ್ಲ, ಇದು ನನಗೆ ನನ್ನ ತಾಯಿ ನೀಡಿದ ನಿರ್ದೇಶನವಾಗಿದೆ. ಅದನ್ನು ಪಾಲಿಸುತ್ತಿದ್ದೇನೆ ಎಂದು ಬಿಟ್ಟರು. ಒಂದು ಕಾಲದಲ್ಲಿ ಅಂಬೇಡ್ಕರ್ ಅವರು 'ದಲಿತರಿಗೆ ದೇವಸ್ಥಾನದಲ್ಲಿ ಪ್ರವೇಶವಿಲ್ಲ ಎಂದಾದರೆ ಆ ದೇವಸ್ಥಾನವನ್ನೇ ನಿರಾಕರಿಸಬೇಕು ಎಂದು ಕರೆ ನೀಡಿದ್ದರು. ದಲಿತ ಸಮುದಾಯದ ಹಕ್ಕುಗಳಿಗಾಗಿ ಅಂಬೇಡ್ಕರ್‌ರಂತಹ ನಾಯಕರು ಬೀದಿಗಿಳಿದು ಹೋರಾಟ ನಡೆಸಿದ ಕಾರಣದಿಂದಲೇ ಜಿಗಜಿಣಗಿಯಂತಹ ನಾಯಕರು ಸಂಸತ್ತನ್ನು ಪ್ರವೇಶಿಸಲು ಸಾಧ್ಯವಾಗಿದೆ. ಜಿಗಜಿಣಗಿಯವರು ದೇವಸ್ಥಾನ ಭೇಟಿಯನ್ನೇ ಮಾಡದೇ ಇದ್ದಿದ್ದರೆ ಯಾರೂ ಅವರನ್ನು ಪ್ರಶ್ನಿಸುತ್ತಿರಲಿಲ್ಲ. ಆದರೆ ಅವರು ಅಸ್ಪೃಶ್ಯತೆಯನ್ನು ಆಚರಿಸುವ ದೇವಸ್ಥಾನದ ಹೊರಗಡೆ ನಿಂತು ಪ್ರಸಾದ ಸ್ವೀಕರಿಸಿರುವುದು ಹಲವು ದಲಿತ ನಾಯಕರ ಆಕ್ಷೇಪಕ್ಕೆ ಕಾರಣವಾಗಿತ್ತು ವಿಪರ್ಯಾಸವೆಂದರೆ, ಈ ಸಂದರ್ಭದಲ್ಲಿ ಜಿಗಜಿಣಗಿಯವರ ಪರವಾಗಿ ಬಿಜೆಪಿ ನಾಯಕರು ಧ್ವನಿಯೆತ್ತಬೇಕಾಗಿತ್ತು ನಾವೆಲ್ಲ ಹಿಂದೂ ನಾವೆಲ್ಲ ಒಂದು ಎಂದು ಆಗ್ರಹಿಸುವ ಸಂಘಪರಿವಾರ, ಆರೆಸ್ಸೆಸ್ ಮುಖಂಡರು ಪತ್ರಿಕಾ ಹೇಳಿಕೆ ನೀಡಿ ಜಿಗಜಿಣಗಿಯವರಿಗೆ ದೇವಸ್ಥಾನ ಪ್ರವೇಶಿಸಲು ಅವಕಾಶ ನೀಡಬೇಕು'' ಆಗ್ರಹಿಸಬೇಕಿತ್ತು. ಹಿಂದೂ ಧರ್ಮದ ಪರವಾಗಿ ಮಾತನಾಡುವ ಸ್ವಾಮೀಜಿಗಳು ಜಿಗಜಿಣಗಿಯವರ ಪರವಾಗಿ ಮಾತನಾಡಬೇಕಾಗಿತ್ತು. ಆದರೆ ಎಲ್ಲಾರೂ ಮೌನವಾಗಿದ್ದು ಜಿಗಜಿಣಗಿಯವರಿಗೆ ಆದ ಅವಮಾನವನ್ನು ಪರೋಕ್ಷವಾಗಿ ಸಮರ್ಥಿಸಿಕೊಂಡರು.

> ಸುದ್ದಿಗೋಷ್ಠಿಯೊಂದರಲ್ಲಿ ಬಹಿರಂಗವಾಗಿಯೇ ತನ್ನ ಅಸಮಾಧಾನವನ್ನು ಹೊರಗೆಡಹಿದ ಜಿಗಜಿಣಗಿ 'ದಲಿತ ಸಮುದಾಯದಿಂದ ಇಡೀ ದಕ್ಷಿಣ ಭಾರತದಲ್ಲಿ ನಾನೊಬ್ಬನೇ ಏಳು ಬಾರಿ ಸಂಸದನಾಗಿ ಗೆದ್ದು ಬಂದಿರುವುದು ಕೇಂದ್ರ ಸರಕಾರದಲ್ಲಿ ಬಾರಿ ಎಲ್ಲಾ ಮೇಲ್ ಜಾತಿಯವರೇ ಸಚಿವರಾಗಿದ್ದಾರೆ. ಯಾಕೆ ದಲಿತರು ಬಿಜೆಪಿಗೆ ಮತ ಹಾಕಿಲ್ಲವೆ ಬಿಜೆಪಿಯೊಳಗಿನ ಈ ಜಾತಿ ಮಸ್ತಿಷ್ಕಿಯಿಂದ ನನ್ನ ಮನಸ್ಸಿಗೆ ಭಾರೀ ನೋವಾಗಿದೆ ಎಂದು ಅಳಲು ತೋಡಿಕೊಂಡಿದ್ದಾರೆ. 'ಬಿಜೆಪಿ ಪಕ್ಷವೆನ್ನುವುದು ದಲಿತರ ವಿರೋಧಿ ಎಂದು ಬಹಳಷ್ಟು ನಾಯಕರು ನನ್ನಲ್ಲಿ ವಾದ ಮಾಡಿದ್ದರು. ಇದೀಗ ಬಿಜೆಪಿಯು ನನಗೆ ಸಚಿವ ಸ್ಥಾನ ನೀಡದೆ ಇರುವುದರ ಹಿಂದೆ ದಲಿತರ ಕುರಿತಂತೆ ಅದರ ಧೋರಣೆ ಬಹಿರಂಗವಾಗಿದೆ ಎಂದು ಅವರು ಹೇಳಿಕೊಂಡಿದ್ದಾರೆ.

ಇದೀಗ ಕೇಂದ್ರದಲ್ಲಿ ಮೋದಿ ನೇತೃತ್ವದ ಸರಕಾರದ ಸಂಪುಟದೊಳಗೂ ಜಿಗಜಿಣಗಿಯವರಿಗೆ ಪ್ರವೇಶ ಸಿಕ್ಕಿಲ್ಲ. ಹೊರಗಿನಿಂದಲೇ ಪ್ರಸಾದ ಸ್ವೀಕರಿಸಬೇಕಾದ ಸ್ಥಿತಿ ಅವರಿಗೆ ಎದುರಾಗಿದೆ. ಸಚಿವರಾಗಲು ಜಿಗಜಿಣಗಿ ಎಲ್ಲಾ ರೀತಿಯಲ್ಲೂ ಅರ್ಹತೆಯನ್ನು ಪಡೆದಿದ್ದಾರೆ. ಮೊತ್ತ ಮೊದಲಾಗಿ ಜಿಗಜಿಣಗಿ ಶೋಷಿತ ಸಮುದಾಯದಿಂದ ಬಂದವರು. ಇಡೀ ದಕ್ಷಿಣ ಭಾರತದಲ್ಲಿ ಏಳು ಬಾರಿ ಸಂಸದರಾಗಿ ಆಯ್ಕೆಯಾದ ದಲಿತ ನಾಯಕರು ಎನ್ನುವ ಹೆಗ್ಗಳಿಕೆಯನ್ನು ಹೊಂದಿದವರು. ಎಲ್ಲಾಕ್ಕಿಂತ ಮುಖ್ಯವಾಗಿ ಉತ್ತರ ಕರ್ನಾಟಕವನ್ನು ಪ್ರತಿನಿಧಿಸುತ್ತಾ ಬಂದವರು. ಬಾರಿ ರಾಜ್ಯದಿಂದ ನಾಲ್ವರು ಕೇಂದ್ರ ಸಚಿವರಾಗಿದ್ದಾರೆ. ವಿಪರ್ಯಾಸದ ಸಂಗತಿಯೆಂದರೆ, ಆಯ್ಕೆಯಾದ ಎಲ್ಲಾರೂ ಮೇಲ್‌ಜಾತಿಗೆ ಸೇರಿದವರು. ಪ್ರಹ್ಲಾದ್ ಜೋಷಿಯವರು ಬ್ರಾಹ್ಮಣ ಸಮುದಾಯಕ್ಕೆ ಸೇರಿದವರಾಗಿದ್ದರೆ ಕುಮಾರಸ್ವಾಮಿ ಮತ್ತು ಶೋಭಾ ಕರಂದ್ಲಾಜೆ ಒಕ್ಕಲಿಗ ಸಮುದಾಯಕ್ಕೆ ಸೇರಿದವರು. ಸೋಮಣ್ಣ ಅವರು ಲಿಂಗಾಯತರು. ಕನಿಷ್ಠ ಶೋಭಾ ಕರಂದ್ಲಾಜೆಯನ್ನು ಪಕ್ಕಕ್ಕಿಟ್ಟು ಅವರ ಬದಲಿಗೆ ಜಿಗಜಿಣಗಿಯವರನ್ನು ಸಚಿವ ಸ್ಥಾನಕ್ಕೆ ಪರಿಗಣಿಸುವ ಅವಕಾಶ ಬಿಜೆಪಿಗಿತ್ತು. ರಾಜಕೀಯವಾಗಿ ಅತ್ಯಂತ ಅಪ್ರಬುದ್ಧರೂ, ಅಭಿವೃದ್ಧಿಯ ಬಗ್ಗೆ ಯಾವ ದೂರದೃಷ್ಟಿಯೂ ಇಲ್ಲದೆ ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಿಜೆಪಿ ಕಾರ್ಯಕರ್ತರಿಂದಲೇ ಘೇರಾವ್ ಗೊಳಗಾಗಿದ್ದ ಶೋಭಾ ಕರಂದ್ಲಾಜೆಯನ್ನು ಸಚಿವ ಸ್ಥಾನಕ್ಕೆ ಪರಿಗಣಿಸಿದ ಬಿಜೆಪಿಗೆ ಜಿಗಜಿಣಗಿಯ ಹಿರಿತನ ಯಾಕೆ ಕಣ್ಣಿಗೆ ಬೀಳಲಿಲ್ಲ ಎನ್ನುವ ಪ್ರಶ್ನೆ ಇದೀಗ ಮುನ್ನೆಲೆಗೆ ಬಂದಿದೆ.

ಕಾಂಗ್ರೆಸ್ ಪಕ್ಷವು ದಲಿತ ನಾಯಕನನ್ನು ಮುಖ್ಯಮಂತ್ರಿ ಮಾಡಲಿ, ದಲಿತರಿಗೆ ನ್ಯಾಯ ನೀಡಲಿ ಎಂದು ಸಲಹೆ ನೀಡುವ ಬಿಜೆಪಿ ನಾಯಕರು, ಜಿಗಜಿಣಗಿಗೆ ಸಚಿವ ಸ್ಥಾನ ನೀಡುವ ವಿಷಯದಲ್ಲಿ ಯಾಕೆ ಮೌನವಾಗಿದ್ದಾರೆ ಶೋಷಿತ ಸಮುದಾಯವನ್ನು 'ಹಿಂದುತ್ತದೆ ಹೆಸರಿನಲ್ಲಿ ಮತಬ್ಯಾಂಕ್ ಆಗಿ ಬಳಸುವ ಬಿಜೆಪಿ, ಅಧಿಕಾರ ಹಂಚಿಕೆಯ ಸಂದರ್ಭದಲ್ಲಿ ಯಾಕೆ ಅವರನ್ನು ನಿರ್ಲಕ್ಷಿಸುತ್ತಿದೆ ಎನ್ನುವ ಪ್ರಶ್ನೆಗೆ ಮತ್ತೆ ಮಹತ್ವ ಬಂದಿದೆ. ದಕ್ಷಿಣ ಕನ್ನಡದಲ್ಲಿ ಹಿಂದುತ್ವವನ್ನು ಮುಂದಿಟ್ಟುಕೊಂಡು ಬಿಲ್ಲವ ಸಮುದಾಯದ ಮತಗಳನ್ನು ಬಿಜೆಪಿ ತನ್ನ ಜೋಳಿಗೆಗೆ ಹಾಕುತ್ತಾ ಬಂದಿದೆ. ಆದರೆ ಅಧಿಕಾರ ಹಂಚಿಕೆಯ ಬಿಲ್ಲವರನ್ನು ಸಂಪೂರ್ಣ ನಿರ್ಲಕ್ಷಿಸಿದೆ ಎನ್ನುವ ಆರೋಪವನ್ನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಬಿಲ್ಲವ ನಾಯಕರೂ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಬಿಲ್ಲವರು ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕುತ್ತಾ ಬಂದಿದ್ದಾಗ, ರಾಷ್ಟ್ರಮಟ್ಟದಲ್ಲಿ ಹಲವು ಬಿಲ್ಲವ ನಾಯಕರು ಹುಟ್ಟಿ ಬಂದರು.




• ಹಿಂದಿನ ಸಂಚಿಕೆಯಿಂದ


ನ್ಯಾಯೋಚಿತ ಯುದ್ಧದಲ್ಲಿ ಅವನನ್ನು ನಾನೇನು, ಇಂದ್ರನೂ ಕೊಲ್ಲಲು ಸಾಧ್ಯವಿರಲಿಲ್ಲ. ಆದರೆ ದುರ್ಯೋಧನನು ಪಾಪಿ; ನಮ್ಮನ್ನು ವರ್ಷಗಟ್ಟಲೆ ಅನ್ಯಾಯವಾಗಿ ಹಿಂಸಿಸಿದ. ತನ್ನಿಚ್ಛೆಗೆ ವಿರೋಧವಾಗಿ ಯುಧಿಷ್ಠಿರನನ್ನು ಈ ಯುದ್ಧದಲ್ಲಿ ತೊಡಗುವಂತೆ ಮಾಡಿದ. ನಾನು ಅವನ ತೊಡೆಯೊಡೆದುದಕ್ಕೆ ನಾನು ಮಾಡಿದ್ದ ಪ್ರತಿಜ್ಞೆಯೇ ಕಾರಣ. ದ್ರೌಪದಿಯನ್ನು ಅಪಮಾನಗೊಳಿಸಿದಾಗಲೇ ನಾನು ಹಾಗೆ ಮಾಡಿದ್ದಿದ್ದರೆ ನಿನಗೆ ಕೋಪ ಬರುತ್ತಿರಲಿಲ್ಲ; ಬದಲಿಗೆ ನಾನು ಮಾಡಿದ್ದು ಸರಿಯೆಂದೇ ಹೇಳುತ್ತಿದ್ದೆ. ಆದರೆ ಆಗ ಅಣ್ಣ ಯುಧಿಷ್ಠಿರ ನನ್ನನ್ನು ತಡೆದ. ಆ ಪ್ರತಿಜ್ಞೆಯನ್ನು ನಾನು ಪೂರೈಸಿಕೊಳ್ಳಲು ಇಷ್ಟೆಲ್ಲ ವರ್ಷ ಕಾಯಬೇಕಾಯಿತು ಎಂದನು.

ಗಾಂಧಾರಿಯು, ''ಭೀಮ, ನೀನು ನನ್ನ ಮಗ ದುರ್ಯೋಧನನನ್ನು ಲೋಕೈಕವೀರನೆಂದು ಹೊಗಳಿರುವೆ; ನಿನ್ನನ್ನು ನಾನು ಕ್ಷಮಿಸುತ್ತೇನೆ. ಆದರೆ, ನನ್ನ ಮಗ ದುಶ್ಶಾಸನನ ರಕ್ತ ಕುಡಿದೆಯಲ್ಲ ನಿನ್ನ ತಮ್ಮನ ರಕ್ತವನ್ನು ಅದು ಕ್ರೂರ ಕರ್ಮವಲ್ಲವೆ ಅದಕ್ಕೇನು ಹೇಳುತ್ತಿ ಎಣ್ಣಲು, ಭೀಮನು, ಹೌದಮ್ಮ, ಅದು ಕ್ರೂರ ಕೆಲಸವೇ. ಹಾಗೆ ಮಾಡುವೆನೆಂದು ನಾನು ಯಾವುದೋ ಆವೇಶದ ಭರದಲ್ಲಿ ಪ್ರತಿಜ್ಞೆ ಮಾಡಿದ್ದೆ. ಪ್ರತಿಜ್ಞೆಯ ಪುರೈಕೆಗಾಗಿ ಹಾಗೆ ಮಾಡಿದೆ. ನನ್ನ ದೊಡ್ಡ ದೋಷವೆಂದರೆ ಉಕ್ಕಿಬರುವ ನನ್ನ ಕೋಪ. ಇದರಿಂದ ನನಗೆ ಸಾಕಾಗಿಹೋಗಿದೆ. ಅಮ್ಮ, ನೀನು ಇದನ್ನು ಕ್ಷಮಿಸಬೇಕು. ನನ್ನ ತಮ್ಮನ ರಕ್ತದ ಒಂದು ಹನಿಯನ್ನೂ ನಾನು ಕುಡಿದಿಲ್ಲ. ತುಟಿಗೆ ಮುಟ್ಟಿಸಿದೆನಷ್ಟೆ. ಇದು ರಾಧೇಯನಿಗೆ ಗೊತ್ತಿತ್ತು. ಅಮಾನುಷ ಕಾರ್ಯವಾದ ಇದಕ್ಕಾಗಿ ನೀನು ನನ್ನನ್ನು ಕ್ಷಮಿಸಬೇಕಮ್ಮ ಎಂದನು. ಭೀಮನ ಈ ವಿನೀತ ನಡವಳಿಕೆ ಮತ್ತು ಒಳ್ಳೆಯ ಮಾತುಗಳಿಂದ ಗಾಂಧಾರಿಗೆ ಸಮಾಧಾನವಾಯಿತು.

ಭೀಮನ ಈ ಮುಖವನ್ನು ಕಂಡು ಕೃಷ್ಣನಿಗೆ ನಗು ತಡೆದುಕೊಳ್ಳುವುದೇ ಒಂದು ಪ್ರಯಾಸವಾಯಿತು. ಗಾಂಧಾರಿ ಈಗ ಯುಧಿಷ್ಠಿರನ ಕಡೆ ತಿರುಗಿ, ಎಲ್ಲಿ ಆ ರಾಜಕುಮಾರ ಎಂದಳು. ಅವಳ ಧ್ವನಿಯಿಂದಲೇ ಅವಳಿಗೆಷ್ಟು ಕೋಪವಿದೆಯೆಂದು ಯುಧಿಷ್ಠಿರನಿಗೆ ಅರ್ಥವಾಯಿತು. ಕೈಜೋಡಿಸಿ ನಮಸ್ಕರಿಸುತ್ತ ಹತ್ತಿರ ಬಂದು, ಅಮ್ಮ, ನಿನ್ನ ಮಕ್ಕಳನ್ನು ಕೊಂದ ನಾನು, ಇದೋ ಇಲ್ಲಿರುವೆ. ಲೋಕನಾಶಕ್ಕೆ ಕಾರಣನಾದ ನನ್ನನ್ನು ಶಪಿಸಿಬಿಡು ತಾಯಿ ಎಂದನು. ಗಾಂಧಾರಿಯು ಈಗ ಮಹಾಪ್ರಯಾಸದಿಂದ ವ್ಯಾಸನ ಮಾತನ್ನು ನೆನೆದುಕೊಂಡಳು. ತನ್ನೆರಡು ಕಣ್ಣುಗಳನ್ನೂ ರೇಷ್ಮೆ ವಸ್ತ್ರವೊಂದರಿಂದ ಕಟ್ಟಿಕೊಂಡಿದ್ದ ಅವಳು, ತನ್ನ ಏರಿಬರುತ್ತಿದ್ದ ಕೋಪವನ್ನು ತಡೆದುಕೊಳ್ಳುವುದಕ್ಕಾಗಿ, ಸರ್ಪದಂತೆ ನಿಟ್ಟುಸಿರು ಬಿಡುತ್ತ, ಮುಖ ತಿರುಗಿಸಿಕೊಂಡಳು; ಕೊನೆಗೆ ತನ್ನನ್ನು ತಾನು ಸಂಭಾಳಿಸಿಕೊಂಡಳು. ಕೊನೆಗೂ ಅವಳ ಮನಸ್ಸಿನಲ್ಲಿ ಪುತ್ರಪ್ರೇಮದ ಮೇಲೆ ಧರ್ಮವೇ ಜಯವನ್ನು ಸಾಧಿಸಿತು.

ಮುಂದುವರಿಯುವುದು...

# ನಂಬುವುದಾದರೆ ಪೂರ್ತಿಯಾಗಿ ನಂಬು



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ



ದೇವರನ್ನು ನಂಬಿ ಮತ್ತು ಸಮಯವನ್ನು ನಂಬಿರಿ ಜೀವನ ಸುಂದರವಾಗಿರುತ್ತದೆ, ಬದುಕನ್ನು ಪ್ರೀತಿಸಿ, ರಾತ್ರಿ ಯಾದರೆ ಬೆಳಗಿಗಾಗಿ ಕಾಯಿರಿ, ಆ ಕ್ಷಣವೂ ಬರುತ್ತದೆ, ನೀವು ಕಾಯುತ್ತಿರುವಕ್ಷಣ,ಪ್ರೀತಿಗೆ ಅಂತ್ಯವಿಲ್ಲ..ನಾವು ಪರಸ್ಪರ ಕಾಳಜಿ ವಹಿಸಿದಾಗ ಪ್ರೀತಿ ಬೆಳೆಯುತ್ತದೆ ನಾವು ಒಗ್ಗಟ್ಟಾಗಿ ಮತ್ತು ಸಮರ್ಪಿತವಾಗಿ ನಿಂತಾಗ ಏಕತೆ ಬೆಳೆಯುತ್ತದೆ ಸಾಮರಸ್ಯ ಬೆಳೆಯುತ್ತದೆ ನಾವು ಅಸಡ್ಡೆ ಮತ್ತು ಸೊಕ್ಕಿನವರಾದಾಗ ಸಂಬಂಧಗಳು ಮುರಿಯುತ್ತವೆ

ನಾವು ಪರಸ್ಪರ ಮಾತನಾಡುವಾಗ ನಾವು ನೋವು ಹಂಚಿಕೊಂಡಾಗ ಬದಲಾವಣೆ ಬರುತ್ತದೆ ನೋವು ಮಾಯವಾಗುತ್ತದೆ ಜೀವನದಲ್ಲಿ ಪ್ರೀತಿಯೇ ಉಳಿದಿಲ್ಲವೇ ಏನೇ ಆಗಲಿ, ಜೀವನದಲ್ಲಿ ಒಮ್ಮೆಯಾದರೂ ಪ್ರೀತಿಯಲ್ಲಿ ಬೀಳಲೇ ಬೇಕು... ಸಿಗಲಿ ಸಿಗದಿರಲಿ, ಸಿಗುವ ಸಾಂತ್ವನ ಬಹಳ ಅದ್ಭುತ... ಅವನ ಸುತ್ತ ಕಲ್ಪನೆಯ ಜಗತ್ತು ಸೃಷ್ಟಿಯಾಗುತ್ತದೆ, ಜನರ ನಡುವೆ ಸಂತಸ ಹಂಚಿಕೊಳ್ಳಲು ಶುರು ಮಾಡುತ್ತಾನೆ. ವ್ಯಕ್ತಿಯು ಸಂತೋಷವಾಗಿರಲು ಪ್ರಾರಂಭಿಸುತ್ತಾನೆ ... ಜೀವನವನ್ನು ಧನಾತ್ಮಕವಾಗಿ ಬದುಕುವ ಕಲೆ ... ಪ್ರೀತಿಯಲ್ಲಿ ನಾವು ಅನುಭವಿಸುವುದು ತುಂಬಾ ದೈವಿಕ ಭಾವನೆ.

ಒಂದೆಡೆ ಶ್ರೀಕೃಷ್ಣ ಹೇಳುತ್ತಾನೆ. ನನ್ನನ್ನು ನಂಬುತ್ತೀಯಾ. ನಂಬುವುದಾದರೆ ಪೂರ್ತಿಯಾಗಿ ನಂಬು.ಅನುಮಾನವಿಲ್ಲದೆ, ಶುದ್ಧ ಮನಸ್ಸಿನಿಂದ ಮಗು ತಾಯಿಯನ್ನು ಅಪ್ಪುವ ಹಾಗೆ ನಂಬು.... ಹಾಗಿದ್ದಲ್ಲಿ ಮಾತ್ರ ನಾನು ನಿನಗೆ ಸಿಗುತ್ತೇನೆ... ಶ್ರೀಕೃಷ್ಣ ಹುಟ್ಟುವ ಮೊದಲೇ ಆತನ ಸಾವು ಆತನಿಗಾಗಿ ಕಾಯುತ್ತಿತ್ತು... ಸೋದರ ಮಾವನ ರೂಪದಲ್ಲಿ... ಹೆತ್ತ ತಾಯಿಗೆ ಆತ ದಕ್ಕಲಿಲ್ಲ... ಸಲುಹಿದ ತಾಯಿಗೆ ಆತ ಸಿಗಲಿಲ್ಲ... ಪ್ರೀತಿಸಿದ ರಾಧೆಯ ಪ್ರೀತಿ ಪೂರ್ತಿ ಆಗಲಿಲ್ಲ.... ಆತ ತನಗೆ ಸಿಕ್ಕಿದ ಅಂತ ಅಂದು ಕೊಂಡವರಿಗೆ ಸುಳ್ಳಾದ... ಒಟ್ಟಿನಲ್ಲಿ ಶ್ರೀಕೃಷ್ಣ ಒಂದು ಚೌಕಟ್ಟಿನಲ್ಲಿ ಸಿಗದ ವ್ಯಕ್ತಿತ್ವ....

ಪ್ರತಿಯೊಂದೂ ಸಂಬಂಧ... ಬಾಂಧವ್ಯವನ್ನೂ ಸಮರ್ಥವಾಗಿ ನಿಭಾಯಿಸಿದ ಆದರ್ಶ ಶ್ರೀಕೃಷ್ಣ . ಕೃಷ್ಣನ ಕಥೆ ಓದಿದ ಮೇಲೆ ನಮಗೆ ಅಲ್ಲಿ ಸಿಗುವುದೇನು

ಪ್ರೀತಿಸಿ ಮುದ್ದಿಸ ಬೇಕಾದ ಮಾವನಾದ ಕಂಸ ಪ್ರೀತಿ ನಮಗೂ ಸಿಗದಿರ ಬಹುದು... ತಾಯಿಯಂತೆ ಬಂದು ಮೊಲೆಯುಣಿಸುವ ಪೂತನಿಯೂ ನಮಗೆ ಸಿಗ ಬಹುದು.... ಏನೂ ಬಯಸದ, ಶುದ್ಧ ಹೃದಯದ ಪ್ರೀತಿ ಕೊಡುವ ರಾಧೆಯೂ ನಮಗೆ ಭೇಟಿಯಾಗ ಬಹುದು....

ಕೃಷ್ಣ ಸಾಹಸವಂತ, ಲೋಕ ವಿಖ್ಯಾತ... ಎಂದು ಮದುವೆಯಾದ ರುಕ್ಮಿಣಿ.... ಪ್ರೀತಿಸಿ ಹಠ ಮಾಡಿ ಮದುವೆಯಾದ ಸತ್ಯಭಾಮೆ....

ಅಪ್ಪ, ಅಮ್ಮನಾದರೂ ಅನಿವಾರ್ಯವಾಗಿ ಪ್ರೀತಿ ಮಾಡಲಾಗದ ಜೊತೆಯಾಗಿ ಇರಲಾಗದ ಮುಗ್ಧ ಅಸಹಾಯಕರು... ಯಾರದ್ದೋ ಮಗುವನ್ನು ತನ್ನದೆಂದು ಮುದ್ದಿಸುವ ಯಶೋದೆ ನಂದಗೋಪನಂಥವರೂ ನಮಗೆ ಸಿಗ ಬಹುದು.... ಧರ್ಮಜ... ಪ್ರತಿಕ್ಷಣವೂ ಧ್ಯಾನಿಸುವ ಅರ್ಜುನ... ನೀನೇ ದೈವ ಎಂದು ನಂಬಿ... ಪ್ರಾಣ ಕೊಡಲೂ ಸಿದ್ಧವಾಗಿರುವ ಕುಂತಿ ಮತ್ತು ಕುಂತಿ ಪುತ್ರರು ಮತ್ತು ಅವರ ಜವಾಬ್ದಾರಿಗಳು.... ಸಖಿಯಂಥಹ ಸಹೋದರಿ ದ್ರೌಪದಿ... ಒಳಗೊಳಗೆ ದೈವವೆಂದು ಪ್ರಾರ್ಥಿಸುವ, ಎದುರಿಗೆ ಧರ್ಮಕ್ಕೆ ಗಂಟು ಬಿದ್ದು ವಿರೋಧಿಸುವ ಭೀಷ್ಮ, ದ್ರೋಣ, ಕೃಪಾಚಾರ್ಯ...

ಅತ್ತಿಗೆ ತಾಯಿಯೆಂದು ತಿಳಿದರೂ

ಮಾನಭಂಗಕ್ಕೆ ಎದುರಾಗುವ ದುರುಳರು... ನಿನ್ನನ್ನು ನಂಬುವುದೇ ಇಲ್ಲ ಎಂದು ಧಿಕ್ಕರಿಸಿ, ಎದುರಿಸುವ ಧುರ್ಯೋಧನ... ಶಕುನಿ... ದುಶ್ಯಾಸನ... ಶಿಶುಪಾಲ... ಜರಾಸಂಧ....

ಮಗುವಿನಂಥಹ ಗೆಳೆಯ ಸುಧಾಮ... ದೈವವೆಂದು ಪ್ರಾರ್ಥಿಸುವ ಅಕ್ರೂರ, ವಿಧುರ... ಸ್ವಲ್ಪ ಖ್ಯಾತಿ ಸಿಕ್ಕಿದರೆ ಸಾಕು, ತಾವು ದೈವ ವಂಶದವರು... ಎಂದು ಹಾರಾಡುವ ಯದು ವಂಶದವರು... ಕಷ್ಟದ ಮಹತ್ವ ತಿಳಿಯದ ಮಕ್ಕಳು... ಹುಟ್ಟು... ಬದುಕಿನುದ್ದಕ್ಕೂ ನ್ಯಾಯ, ಧರ್ಮ ಸಂಸ್ಥಾಪನೆಗಾಗಿ ಹೋರಾಡಿ, ತಂತ್ರ, ಕಪಟ ನೀತಿಯನ್ನೂ ತನ್ನದಾಗಿಸಿ... ಜಗತ್ತು ಬಿಟ್ಟು ಹೋಗುವಾಗ ಎಲ್ಲಾವನ್ನೂ ಇಲ್ಲಿಯೇ ಬಿಟ್ಟು

ಏನನ್ನೂ ತನ್ನೊಡನೆ ಒಯ್ಯದ... ಎಲ್ಲಾ ಐಹಿಕ, ಲೌಕಿಕ, ಲೋಕದೊಳಗಿದ್ದು, ಏನನ್ನೂ ಅಂಟಿಸಿ ಕೊಳ್ಳದೆ... ಕೊನೆಯಲ್ಲಿ ತನ್ನ ಕುಲ, ವಂಶ ನಾಶ ಆಗುವುದನ್ನೂ ನೋಡಿ... ಕೇವಲ ಬದುಕಿನ ಕರ್ತವ್ಯವನ್ನು ನಿಭಾಯಿಸುವ ಶ್ರೀಕೃಷ್ಣ.... ದುಷ್ಟರನ್ನು ನಿಗ್ರಹಿಸಲು... ಧರ್ಮ ಸಂಸ್ಥಾಪನೆಗಾಗಿ ಕೃಷ್ಣನ ಬಾಳು ... ದೇವರ ಅವತಾರವಷ್ಟೇ ಅಲ್ಲ.... ನಮ್ಮ ಪ್ರಸ್ತುತ ಬದುಕಿಗೂ ಉದಾಹರಣೆ ಮತ್ತು ಯಾವತ್ತಿಗೂ ನಮಗೆ ಆದರ್ಶ... ನಮಗೂ ಸಹ ದುರ್ಯೋಧನ... ದುಶ್ಯಾಸನ.. ಶಕುನಿ, ಕರ್ಣರು... ಎದುರಾಗ ಬಹುದು... ನಮಗೆ ಸಿಕ್ಕ ಪ್ರತಿಯೊಬ್ಬರೊಡನೆ ನಾವು ಹೇಗಿರ ಬೇಕು ಹೇಗೆ ವ್ಯವಹರಿಸ ಬೇಕು ಶ್ರೀಕೃಷ್ಣ ಅತ್ಯುತ್ತಮ ಉದಾಹರಣೆ... ವೈರಿಯೊಡನೆ, ಸ್ನೇಹಿತರೊಡನೆ, ಸಹೋದರಿ ದ್ರೌಪದಿಯಂತವರೊಡನೆ... ಪ್ರೇಮಿ... ಮಡದಿ... ಗೆಳೆಯರೊಡನೆ ಹೇಗಿರ ಬೇಕು.. ಸಂಬಂಧ...ಬಾಂಧವ್ಯ... ಬದುಕಿನ ರಾಜಕೀಯಗಳನ್ನು ಹೇಗೆ ನಿಭಾಯಿಸ ಬೇಕು ಎನ್ನುವುದಕ್ಕೆ ಶ್ರೀಕೃಷ್ಣ... ನಮಗೆ ಅತ್ಯುತ್ತಮ ಆದರ್ಶ.... ಅಂದಿಗೂ... ಇಂದಿಗೂ... ಎಂದೆಂದಿಗೂ... ಬದುಕಿನ ಪ್ರತಿಯೊಂದೂ ಕ್ಷಣಕ್ಕೂ ಆದರ್ಶ ಶ್ರೀಕೃಷ್ಣ...

ನಮ್ಮ ಬದುಕಿನ ಕುರುಕ್ಷೇತ್ರದಲ್ಲಿಯೂ ಸಹ... ರಣರಂಗದ ಯುದ್ಧದಲ್ಲಿ ನಾವಿದ್ದರೂ ಶಸ್ತ್ರ ಹಿಡಿಯದ... ಸಂಯಮ ಕಿರುನಗುವಿನ ಶ್ರೀಕೃಷ್ಣ ನಮಗೆ ಆದರ್ಶ....

**ನಾವು ನೋವು ಹಂಚಿಕೊಂಡಾಗ ಬದಲಾವಣೆ**

### ವಿಪರ್ಯಾಸ ಏನು ಗೊತ್ತಾ

- ಆತ ಒಂದು ಚೌಕಟ್ಟಿನೊಳಗೆ ಎಂದೂ ಸಿಗುವುದೇ ಇಲ್ಲ....
- ಶ್ರೀಕೃಷ್ಣ ಹೀಗೆ ಎಂದು ಯಾವತ್ತಿಗೂ ಹೇಳಲಾಗುವದಿಲ್ಲ...
- ನಮ್ಮ ಬುದ್ಧಿಮಟ್ಟ ಎಷ್ಟಿದೆಯೋ ಅಷ್ಟು ಮಾತ್ರ ಆತ ನಮಗೆ ದಕ್ಕುತ್ತಾನೆ...
- ಈ ಜಗತ್ತಿನ ಎಲ್ಲಾ ವೂ ನಮ್ಮದು... ನಮಗಾಗಿ ಎಂದು ಕೊಳ್ಳುತ್ತೇವೆ...
- ನಿತ್ಯವೂ ಮಿಥ್ಯ ಭ್ರಮೆಯಲ್ಲಿ ಬದುಕುತ್ತೇವೆ...
- ಈ ಜಗತ್ತು ನಮ್ಮದು. ಎಲ್ಲಾ ದೂ ನಮ್ಮದು... ನನ್ನದು... ಹುಟ್ಟಿದ ಪ್ರತಿಕ್ಷಣವೂ ನಮ್ಮದು ಬರಿಗೈಯಲ್ಲಿ ಹುಟ್ಟಿ... ಖಾಲಿ ಕೈಯಲ್ಲಿ ಮರಳುವುದು ನಮ್ಮ ಬದುಕು...
- ಸಾವನ್ನು ಮರೆತು ಹಾರಾಡುವ ನಮ್ಮ ಬದುಕಿಗೆ ನಾವು ಹೇಗಿರ ಬೇಕು ಹೇಗೆ ಬಾಳ ಬೇಕು ಎನ್ನುವುದಕ್ಕೆ ಶ್ರೀಕೃಷ್ಣ ನಮಗೆ ಆದರ್ಶ...

# ಪುನರುಜ್ಜೀವನ ಕಾರ್ಯಕ್ಕೆ ಯುಕೆಯ ಐಸಿಇ ತಂಡದಿಂದ ಮೆಚ್ಚುಗೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಜಕ್ಕೂರು ಕೆರೆ ಉಳಿಸಲು ಕೈಗೊಂಡಿರುವ ಪುನರುಜ್ಜೀವನ ಕಾರ್ಯಕ್ಕೆ ಯುನೈಟೆಡ್ ಕಿಂಗ್ ಗಮ್ ನಾ ಐಸಿಇ (ಇನ್‌ಸ್ಟಿಟ್ಯೂಟ್ ಆಫ್ ಸಿವಿಲ್ ಇಂಜಿನಿಯರ್ಸ್) ತಂಡವು ಮೆಚ್ಚುಗೆ ವ್ಯಕ್ತಪಡಿಸಿದೆ.

ಯುಕೆಯ ಐಸಿಇ(ಇನ್‌ಸ್ಟಿಟ್ಯೂಟ್ ಆಫ್ ಸಿವಿಲ್ ಇಂಜಿನಿಯರ್ಸ್) ಅಧ್ಯಕ್ಷರಾದ ಪ್ರೊ. ಡಾ. ಅನುಷಾ ಶಾ ರವರು ಅಟ್ಕಿನ್ಸ್ ತಂಡದೊಂದಿಗೆ ಜಕ್ಕೂರು ಕೆರೆಗೆ ಭೇಟಿ ನೀಡಿದರು. ಈ ವೇಳೆ ಪ್ರಮುಖ ಅಂತಾರಾಷ್ಟ್ರೀಯ ವಿನ್ಯಾಸ ಸಲಹಾ ಸಂಸ್ಥೆಯಾಗಿರುವ ಆಟ್ಕಿನ್ಸ್ ರವರು ಕೆರೆಯ ಪುನರುಜ್ಜೀವನದ ಪ್ರಕ್ರಿಯೆಯನ್ನು ನೋಡಿ ಪಾಲಿಕೆ ಕೆರೆ ವಿಭಾಗದಿಂದ ಕೆರೆ ಪುನರುಜ್ಜೀವನದ ಪ್ರಯತ್ನಗಳಲ್ಲಿ ಅಳವಡಿಸಿಕೊಂಡಿರುವ ಸುಸ್ಥಿರ ತಂತ್ರಜ್ಞಾನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಗರದಲ್ಲಿ ಕೆರೆಗಳ ಪಾತ್ರ ಪ್ರಮುಖವಾಗಿದ್ದು, ಜಕ್ಕೂರು ಕೆರೆಯ ಸಂಪೂರ್ಣ ಅಭಿವೃದ್ಧಿ, ಜೌಗು ಪ್ರದೇಶದ ಅಭಿವೃದ್ಧಿ ಸೇರಿದಂತೆ ಎಲ್ಲಾ ರೀತಿಯ ಮಾಹಿತಿಯನ್ನು ಸಂಗ್ರಹಿಸಿಕೊಂಡರು. ಮುಂದಿನ ಪೀಳಿಗೆಗೆ ಉತ್ತಮ ಕಾರ್ಯ ಕೈಗೊಂಡಿದ್ದು, ಇದೇ ರೀತಿ ಇನ್ನೂ ಹೆಚ್ಚಿನ ಕೆರೆಗಳಲ್ಲಿ ಅಭಿವೃದ್ಧಿ ಕೈಗೆತ್ತಿಕೊಳ್ಳಲು ಪಾಲಿಕೆ ಅಧಿಕಾರಿಗಳು ಮಾಹಿತಿ ಒದಗಿಸಿದರು.

ದೇಶದ ವಿವಿಧ ಭಾಗಗಳಿಂದ ನಿಗಮಗಳು, ಪರಿಸರವಾದಿಗಳು, ಸರೋವರ ಸಂರಕ್ಷಣಾ ತಜ್ಞರು, ಅಂತರರಾಷ್ಟ್ರೀಯ ವಿನ್ಯಾಸ ಸಲಹೆಗಾರರು, ಹವಾಮಾನ ನಿಯಂತ್ರಣ ಇಲಾಖೆಗಳೊಂದಿಗೆ ಜಕ್ಕೂರು ಕೆರೆ ಪುನರುಜ್ಜೀವನ, ಪುನಃಶ್ಚೇತನ ಮತ್ತು ಸುಸ್ಥಿರ ಅಭಿವೃದ್ಧಿಯ ಬಗ್ಗೆ ಅಧ್ಯಯನ ಮಾಡಲು ತಂಡಗಳು ಭೇಟಿ ನೀಡಲಿವೆ. ಈ ವೇಳೆ ಪಾಲಿಕೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಅಕ್ಷತ್, ಸಹಾಯಕ ಅಭಿಯಂತರರಾದ ಲತೀಫ್, ಯುಕೆಯ ಯುಕೆಯ ಐಸಿಇನ ಉಪಾಧ್ಯಕ್ಷರಾದ ಪ್ರೊ. ಡಾ. ಅನುಷಾ ಶಾ, ಅಟ್ಕಿನ್ಸ್ ತಂಡದ ಪ್ರತಿನಿಧಿಗಳು ಉಪಸ್ಥಿತರಿದ್ದರು.

# 5.35 ಕೋಟಿ ರೂ. ಮೌಲ್ಯದ ಸರ್ಕಾರಿ
## ಬಂಡಿದಾರಿ ಜಾಗ ಅತಿಕ್ರಮಣವನ್ನು ತೆರವು

• ಉದಯವಾಹಿನಿ, ಬೆಂಗಳೂರು

ನಗರದ ಮಹದೇವಪುರ ವಲಯ ವೈಟ್‌ಫೀಲ್ಡ್ ವಾರ್ಡ್ ಪಟ್ಟಂದೂರು ಅಗ್ರಹಾರ ಗ್ರಾಮದಲ್ಲಿ ಸುಮಾರು 503 ಚ.ಮೀ ವಿಸ್ತೀರ್ಣದ 5.35 ಕೋಟಿ ರೂ. ಮೌಲ್ಯದ ಸರ್ಕಾರಿ ಬಂಡಿದಾರಿ ಜಾಗದ ಇಂದು ಒತ್ತುವರಿಯನ್ನು ತೆರವುಗೊಳಿಸಿ ಬಿಬಿಎಂಪಿ ವಶಕ್ಕೆ ಪಡೆಯಲಾಗಿದೆ.

ಮಹದೇವಪುರ ವಲಯ ವೈಟ್‌ಫೀಲ್ಡ್ ವಾರ್ಡ್ ವ್ಯಾಪ್ತಿಯ ಐ.ಟಿ.ಪಿ.ಎಲ್ ಮುಖ್ಯ ರಸ್ತೆ ಯಿಂದ ಬ್ರಿಗೇಡ್ ಟೆಕ್‌ಪಾರ್ಕ್ ರಸ್ತೆಯನ್ನು ಬೆಂಗಳೂರು ಪೂರ್ವ ತಾಲ್ಲೂಕು ಕೆ.ಆರ್ ಪುರ ಹೋಬಳಿ ಪಟ್ಟಂದೂರು ಅಗ್ರಹಾರ ಗ್ರಾಮದ ಸರ್ವೆ ನಂ.134/5 ರಲ್ಲಿನ ಸರ್ಕಾರಿ ಬಂಡಿದಾರಿ ಜಾಗದಲ್ಲಿ ಈ ಹಿಂದಿನಿಂದಲೂ ವಾಹನಗಳು ಸಂಚರಿಸುತ್ತದ್ದವು. ಮುಂದುವರಿದು, ಸರ್ವೆ ನಂ.134/5 ರ ಮಾಲೀಕರಾದ ಶ್ರೀ. ಬಿ. ರಾಮಚಂದ್ರ ನಾಯ್ಡು ಬಿನ್ ಶಕುಂತಲಬಾಯಿ ರವರು ಸದರಿ ರಸ್ತೆಯನ್ನು ಆತಿಕ್ರಮಿಸಿಕೊಂಡು ಅಡ್ಡಲಾಗಿ ಕಬ್ಬಿಣದ ಬ್ಯಾರಿಕೇಡ್ ಅಳವಡಿಸಿ ಕಳೆದ 2 ತಿಂಗಳುಗಳಿಂದ ಸಾರ್ವಜನಿಕರು ಹಾಗೂ ಯಾವುದೇ ವಾಹನಗಳು ಸಂಚರಿಸದಂತೆ ಅಡ್ಡಿಪಡಿಸಿದ್ದರು.


ಉದಯವಾಹಿನಿ ಚಿತ್ರ

ಅಲ್ಲದೇ, ಸದರಿ ರಸ್ತೆಯಲ್ಲಿಯೇ ಖಾಸಗಿ ಹೋಟೆಲ್ ನಡೆಸಲು ಜಾಗವನ್ನು ಬಾಡಿಗೆಗೆ ನೀಡಿ ಹಣ ಪಡೆಯುತ್ತಿದ್ದ ಜಾಗವನ್ನು ಮಹದೇವಪುರ ರಸ್ತೆ ಮೂಲಭೂತ ಸೌಕರ್ಯ ವಿಭಾಗದ ಅಧಿಕಾರಿಗಳು, ತಹಸೀಲ್ದಾರ್ ಬೆಂಗಳೂರು ಪೂರ್ವ ತಾಲ್ಲೂಕು ಕಛೇರಿಯ ಭೂಮಾಪಕರು, ರಾಜಸ್ವ ನಿರೀಕ್ಷಕರು, ಸ್ಥಳೀಯ ವೈಟ್‌ಫೀಲ್ಡ್ ಪೊಲೀಸರುಗಳ ಸಹಯೋಗದೊಂದಿಗೆ ಒತ್ತುವರಿ ಮಾಡಿಕೊಂಡಿದ್ದ ಸುಮಾರು 503.03 ಚದರ ಮೀಟರ್ ವಿಸ್ತೀರ್ಣದ ರೂ.5.35 ಕೋಟಿ ಮೌಲ್ಯದ ಸರ್ಕಾರಿ ಬಂಡಿದಾರಿ ಜಾಗದ ಒತ್ತುವರಿಯನ್ನು ತೆರವುಗೊಳಿಸಿ ಸದರಿ ರಸ್ತೆಯನ್ನು ಅಭಿವೃದ್ಧಿಪಡಿಸಲು ವೆಟ್‌ಮಿಕ್ಸ್ ಮಿಶ್ರಣವನ್ನು ಅಳವಡಿಸುವ ಕಾರ್ಯವನ್ನು ಸದರಿ ದಿನದಂದೇ ಮಾಡಲಾಗಿರುತ್ತದೆ. ಶ್ರೀ. ಬಿ. ರಾಮಚಂದ್ರ ನಾಯ್ಡು ಬಿನ್ ಶಕುಂತಲಬಾಯಿ ರವರು ಪಟ್ಟಂದೂರು ಅಗ್ರಹಾರ ಗ್ರಾಮದ ಸರ್ವೆ ನಂ. 134/5ರಲ್ಲಿನ ಸರ್ಕಾರಿ ಬಂಡಿದಾರಿ, ಸರ್ಕಾರಿ ಬಿ ಕರಾಬು ಜಾಗದಲ್ಲಿ ಕಾಂಪೌಂಡ್ ಗೋಡೆ ನಿರ್ಮಿಸಿರುವುದನ್ನು ತಾಲ್ಲೂಕು ಭೂ ಮಾಪಕರು ನೀಡಿರುವ ಸರ್ವೆ ನಕ್ಷೆಯಲ್ಲಿ ಧೃಡಪಟ್ಟಿರುತ್ತದೆ.

ಆದ್ದರಿಂದ, ಈ ಬಾಬ್ತು ಸದರಿಯವರಿಗೆ ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರಂತೆ ನೋಟೀಸ್ ನೀಡಿ ಒತ್ತುವರಿ ತೆರವು ಆದೇಶ ಜಾರಿ ಮಾಡಿ ಮುಂದಿನ ದಿನಗಳಲ್ಲಿ ಮೇಲ್ಕಂಡಂತೆ ಒತ್ತುವರಿದಾರರು ಸರ್ಕಾರಿ ಬಿ ಕರಾಬು ಬಂಡಿ ದಾರಿಯಲ್ಲಿ ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಿ ರಸ್ತೆ ಬದಿ ಚರಂಡಿಯನ್ನು ನಿರ್ಮಿಸಲಾಗುವುದೆಂದು ಕಾರ್ಯಪಾಲಕ ಅಭಿಯಂತರಾದ ಉದಯ್ ಚೌಗುಲೆ ರವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಪಂಚ ಜೀವಕೋಶಗಳು



ಕೃಷ್ಣಪ್ಪ

ಉಪನಿಷತ್ತುಗಳಲ್ಲಿ ಆತ್ಮವನ್ನು ಅನ್ನ,ಪ್ರಾಣ, ಮನಸ್ಸು,ವಿಜ್ಞಾನ ಮತ್ತು ಆನಂದಗಳಿಗೆ ಪರ್ಯಾಯವಾಗಿ ಬಳಸಲಾಗಿದೆ. ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯ ಕೋಶ, ವಿಜ್ಞಾನಮಯ ಕೋಶ ಮತ್ತು ಆನಂದಮಯ ಕೋಶ ಇವುಗಳನ್ನ ವಿಸ್ತ್ರತವಾಗಿ ವಿವರಿಸಲಾಗಿದೆ.

ಇವುಗಳಲ್ಲಿ ಒಂದೊಂದಕ್ಕೂ ನಿಕಟವಾದ ಸಂಬಂಧವಿದೆ ಇವುಗಳ ಮೇಲೆ ಜೀವ ಕೋಶ ನಿಂತಿದೆ. ಜೀವಕೋಶದ ಮೇಲೆ ಮಾನವನ ಜೀವ ನಿಂತಿದೆ. ಈ ಜೀವಕೋಶಗಳಿಗೆ ಸೃಷ್ಟಿಯ ಸಂಬಂಧ, ಪ್ರಕೃತಿಯ ಸಂಬಂಧ, ದೈವ ಸಂಬಂಧ ಹಾಗೂ ಮಾನವ ಸಂಬಂಧ ಇದೆ. ಆದರೆ ಎಲ್ಲಾ ಸಂಬಂಧಕ್ಕೂ ಮೀರಿರುವ ಒಂದು ಸಂಬಂಧ ಇದೆ ಅದೇನೆಂದರೆ ಅದೇ ಜೀವ ಸಂಬಂಧ. ಈ ಜೀವ ಸಂಬಂಧಕ್ಕೆ ಅಂತ್ಯ ಸಂಬಂಧ ಇರುವುದನ್ನು ಮಾನವ ಅರ್ಥ



ಮಾಡಿಕೊಂಡರೆ ಬದುಕು ಸಾರ್ಥಕ ಅದೇ ಬದುಕು ಅನಿಶ್ಚಿತ, ಸಾವು ನಿಶ್ಚಿತ.

ಈ ಕ್ಷಣದಿಂದ ನೂರು ವರ್ಷ ಬಹುಶಃ ನಾವ್ಯಾರು ಸಹ ಜೀವಕೋಶ ಹೊತ್ತು ಕೊಂಡು ಈ ಭೂಮಿಯ ಮೇಲೆ ಇರುವುದಿಲ್ಲ. ಇದರ ಸಾಮಾನ್ಯ ಜ್ಞಾನದ ಅರಿವು ಮಾನವನಲ್ಲಿ ಇರದೇ ದೆವ್ವ,ಪಿಶಾಚಿ,ರಾಕ್ಷಸ ರೀತಿ ಸ್ವರ್ಗದಂತಿರುವ ಭೂಮಂಡಲವನ್ನ ನರಕ ಮಾಡಿ ಹೋಗುತ್ತಾನೆ. ಸೃಷ್ಟಿಯ ಹಾಗೂ ದೈವ ಪ್ರಕಾರ ಮಾನವನಂಥ ಒಳ್ಳೆಯ ಪ್ರಾಣಿ ಯಾವುದೂ ಇಲ್ಲ. ಆದರೆ ಮಾನವನಂಥ ಕೆಟ್ಟಪ್ರಾಣಿ ಮತ್ತೊಂದು ಪ್ರಾಣಿ ಇಲ್ಲ ಎಲ್ಲಾ ಕರ್ಮಗಳು ಮಾನವ ನಿರ್ಮಿತ ಕರ್ಮಗಳಾಗಿವೆ.


ಆ ಕರ್ಮಗಳಿಗೆ ಮುಕ್ತಿ ಇಲ್ಲ. ಭೂಮಂಡಲದಲ್ಲಿ ಮಾನವ ಎಲ್ಲಾ ಪ್ರಾಣಿ ಪಕ್ಷಿಗಳಿಗಿಂತ ಹಿರಿಯಪ್ರಾಣಿ.

ಈ ಹಿರಿಯ ಪ್ರಾಣಿ ಸರಿ ಇದ್ದಿದ್ದರೆ ಎಲ್ಲಾ ಕಿರಿಯ ಪ್ರಾಣಿಗಳು ಅನುಕರಣೆ ಮಾಡುತ್ತಿದ್ದವು. ಆದರೇನು ಬಂತು ಎಲ್ಲಾ ವೂ ಕಾಲವೇ ನಿರ್ಧರಿಸುವ ಪಂಕ್ತಿಗೆ ಬಂದು ನಿಂತಿದೆ. ಯಾರು ಏನು ಹೇಗೆ ಎಂಥವರು ಎಂಬುದನ್ನ ಕಾಲವೇ ನಿರ್ಧರಿಸುತ್ತದೆ. ಕಾಲ ಕಳೆದಂತೆ ಕೆಟ್ಟವರ ಬಣ್ಣ ಬಯಲಾಗಿ ಉತ್ತಮರು ಉಳಿದುಕೊಳ್ಳುತ್ತಾರೆ.

# ಪುಟ್ಟ ಹನುಮ

• ಉದಯವಾಹಿನಿ, ವಿಶೇಷ

ನಮ್ಮ ಮನೆಯ ಪುಟ್ಟ ಹನುಮ
ನಾಲ್ಕು ವರ್ಷದ ಪೋರ
ಹನುಮಾನ್ ಚಾಲಿಸ ಭಕ್ತಿಯಿಂದ
ಭಜಿಸುವನು
ನಾನೇ ಹನುಮಾನ್ ಎನ್ನುವನು
ಹನುಮಾನ ದೇಗುಲಕೆ ಹೋಗೋಣ
ಎನ್ನುವನು ಟಿ.ವಿ.ಯಲಿ
ರಾಮಾಯಣ ವೀಕ್ಷಿಸುವನು
ಜೈ ಶ್ರೀರಾಮ ಎಂದು
ನುಡಿಯುವನು
ರಾಮ,ಹನುಮ,ಕೃಷ್ಣ,ಬಲರಾಮ
ಸುಭದ್ರೆಯರ ಮೂರುತಿಯೊಂದಿಗೆ
ಆಟ ವಾಡುವನು ಜಗನ್ನಾಥ ಎಂದು
ಕೈಮುಗಿದು ನಮಿಸುವನು
ಭಗವಂತನ ಗುಣಗಾನ ಮಾಡುವನು
ಶಿವನ ನಾಟ್ಯ ವೀಕ್ಷಿಸುವನು
ತಾನೂ ನಾಟ್ಯವ ಮಾಡುವನು
ತ್ರಯಂಬಕಮ್ ಯಜಾಮಹೇ
ಎಂದು ಭಜಿಸುವನು
ಮಲಗುವ ಮುನ್ನ ಭಗವಂತನಿಗೆ ಅವನ ತಂದೆತಾಯಿ ಕೊಡಿಸಿದ
ವಸ್ತುಗಳಿಗೆ ಧನ್ಯವಾದ ಅರ್ಪಿಸುವನು ರಾಮಸ್ಕಂದಮ್ ಹೇಳಿ
ದೇವರ ಭಸ್ಮ ಹಚ್ಚಿಕೊಂಡು ಕೈ ಮುಗಿದು ನಿದ್ರಿಸುವನು.


ಉದಯವಾಹಿನಿ ಚಿತ್ರ

ಗಿರಿಜಾ.ಎಸ್.ದೇಶಪಾಂಡೆ.ಬೆಂಗಳೂರು.

# ಭವಿಷ್ಯದ ಕ್ರಿಕೆಟ್ ಸ್ಟಾರ್‌ಗಳಿಗಾಗಿ
## ಪ್ರತಿಭಾನ್ವೇಷಣೆ ಮಾಡಿದ ಮೈಸೂರು ವಾರಿಯರ್ಸ್

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಭಾರತದ ಪ್ರಮುಖ ಅಗರಬತ್ತಿ ತಯಾರಕರು, ಮೈಸೂರು ವಾರಿಯರ್ಸ್‌ನ ಮಾಲೀಕರಾಗಿರುವ ಎನ್‌ಆರ್ ಗ್ರೂಪ್, ಕರ್ನಾಟಕದಲ್ಲಿ ನಡೆಯುವ ಮುಂದಿನ ಕ್ರಿಕೆಟ್ ಪಂದ್ಯಾವಳಿಗಳಲ್ಲಿ ಮೈಸೂರು ವಾರಿಯರ್ಸ್ ತಂಡವನ್ನು ಪ್ರತಿನಿಧಿಸಲು ಬೆಂಗಳೂರಿನಲ್ಲಿ ಯುವ ಆಟಗಾರರ ಪ್ರತಿಭಾನ್ವೇಷಣೆ ನಡೆಸಿತು. ಈ ಪ್ರತಿಭಾನ್ವೇಷಣೆಯಲ್ಲಿ ಆಯ್ಕೆಯಾದ ಆಟಗಾರರು ಮುಂಬರುವ ಮಹಾರಾಜ ಟ್ರೋಫಿ ಕೆಎಸ್‌ಸಿಎಯಲ್ಲಿ ಮೈಸೂರು ವಾರಿಯರ್ಸ್ ತಂಡದ ಪರವಾಗಿ ಆಡಲಿದ್ದಾರೆ ಮತ್ತು ಕೆಎಸ್‌ಸಿಎ ಟಿ20 2024ರ ಹರಾಜಿನಲ್ಲಿ ಭಾಗವಹಿಸುವ ಅವಕಾಶ ಪಡೆದುಕೊಳ್ಳಲಿದ್ದಾರೆ.

> ಮೈಸೂರು ವಾರಿಯಸ್‌ನ ಮಾಲೀಕ ಮತ್ತು ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ ಅವರು, ''ಹಲವು ಯುವ ಪ್ರತಿಭೆಗಳನ್ನು ಗಮನಿಸಿದ್ದೇವೆ. ಹರಾಜು ಪ್ರಕ್ರಿಯೆಯ ಬಳಿಕ ಕೆಲವು ಪ್ರತಿಭೆಗಳು ನಮ್ಮ ತಂಡವನ್ನು ಸೇರಲಿದ್ದಾರೆ. ಮಹಾರಾಜ ಟ್ರೋಫಿಯಲ್ಲಿ ಅವರ ಪ್ರತಿಭೆ ನೋಡಲು ನಾವು ಉತ್ಸುಕರಾಗಿದ್ದೇವೆ'' ಎಂದು ಹೇಳಿದರು.

ಮೊದಲ ಪ್ರತಿ ಭಾನ್ವೇಷಣೆಯು ಜುಲೈ 12 ರಂದು ಬೆಂಗಳೂರಿನ ಜಸ್ಟ್ ಕ್ರಿಕೆಟ್ ಅಕಾಡೆಮಿಯಲ್ಲಿ ನಡೆಯಿತು. ಇದರಲ್ಲಿ 124 ಮಧ್ಯಮ ವೇಗದ ಬೌಲರ್‌ಗಳು, 54 ಸ್ಪಿನ್ನರ್‌ಗಳು, 47 ಬ್ಯಾಟ್ಸ್‌ಮನ್‌ಗಳು, 14 ಆಲ್‌ರೌಂಡರ್‌ಗಳು ಮತ್ತು 20 ವಿಕೆಟ್ ಕೀಪರ್‌ಗಳು ಸೇರಿದಂತೆ 260ಕ್ಕೂ ಹೆಚ್ಚು ಯುವ ಕ್ರಿಕೆಟಿಗರು ಭಾಗವಹಿಸಿದ್ದರು. ಮುಂದಿನ ಪ್ರತಿಭಾನ್ವೇಷಣೆ ಕಾರ್ಯಕ್ರಮವು ಜುಲೈ 18ರಂದು ಮೈಸೂರಿನಲ್ಲಿ ನಡೆಯಲಿದೆ. ಆ ಬಳಿಕ ಆಯ್ಕೆಯಾದ ಆಟಗಾರರ ಹೆಸರನ್ನು ಕೆಎಸ್‌ಸಿಎಗೆ ಶಿಫಾರಸು ಮಾಡಲಾಗುವುದು. ಜುಲೈ 25ರಂದು ನಡೆಯುವ ಹರಾಜು ಪ್ರಕ್ರಿಯೆಯಲ್ಲಿ ಅವರು ಪಾಲ್ಗೊಳ್ಳಬಹುದು. ಹರಾಜು ಪ್ರಕ್ರಿಯೆಯ ಬಳಿಕ ತಂಡವನ್ನು ಸೇರುವ ಆಟಗಾರರು ಮೈಸೂರಿನಲ್ಲಿ ಒಂದು ವಾರಗಳ ಕಾಲ ಕಠಿಣ ತರಬೇತಿ ಪಡೆಯಲಿದ್ದಾರೆ.



**ಹರಾಜು ಪ್ರಕ್ರಿಯೆ**

ನಂತರ ಆಗಸ್ಟ್ 15ರಿಂದ ಸೆಪ್ಟೆಂಬರ್ 1ರವರೆಗೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಮಹಾರಾಜ ಟ್ರೋಫಿ ಮಹಾರಾಜ ಟ್ರೋಫಿ ಪಂದ್ಯಾವಳಿಯಲ್ಲಿ ತಮ್ಮ ಸಾಮರ್ಥ್ಯ ಪ್ರದರ್ಶನ ಮಾಡಲಿದ್ದಾರೆ. ಪ್ರತಿಭಾನ್ವೇಷಣೆ ಕಾರ್ಯಕ್ರದಲ್ಲಿ ಮೈಸೂರು ವಾರಿಯರ್ಸ್‌ನ ಮಾಲೀಕರಾದ ಶ್ರೀ ಅರ್ಜುನ್ ರಂಗ, ಮೈಸೂರು ವಾರಿಯಸ್‌ನ ಆಟಗಾರ ಶ್ರೀ ಕರುಣ್ ನಾಯರ್, ತಂಡದ ವ್ಯವಸ್ಥಾಪಕರಾದ ಶ್ರೀ ಸುರೇಶ್ ಎಂ ಆರ್ ಮತ್ತು ಮೈಸೂರು ವಾರಿಯರ್ಸ್‌ನ ಸಹಾಯಕ ಕೋಚ್ ಶ್ರೀ ವಿಜಯ್ ಮದ್ಯಾಳ್ಕರ್ ಉಪಸ್ಥಿತರಿದ್ದರು.

ಉದಯ ವಾಹಿನಿ

# ಪ್ರಾದೇಶಿಕ

ಶನಿವಾರ 13 ಜುಲೈ 2024 | 05

# ಕುಂಟುನೆಪ ಹೇಳದೆ ಕೇಂದ್ರ ಸ್ಥಾನದಲ್ಲಿದ್ದು ಜನರ ಸಮಸ್ಯೆ ಪರಿಹರಿಸಿ

## ಅಧಿಕಾರಿಗಳು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಿ ಪ್ರೋಟೋಕಾಲ್ ಫಾಲೋಮಾಡಿ ಕಾಟಾಚಾರಕ್ಕೆ ಕೆಲಸ ಮಾಡಬೇಡಿ

• ಉದಯವಾಹಿನಿ,ಚಿಂಚೋಳಿ





ಉದಯವಾಹಿನಿ ಚಿತ್ರ

**ಶಾಸಕ ಖಡಕ್ ಸೂಚನೆ**

ತಾಲ್ಲೂಕಾ ಮಟ್ಟದ ಅಧಿಕಾರಿಗಳು ಮತ್ತು ಪಿಡಿಓಗಳು ಯಾವುದೇ ಕುಂಟುನೆಪ ಹೇಳದೆ ಕೇಂದ್ರ ಸ್ಥಾನದಲ್ಲಿದ್ದು ಜನರ ಸಮಸ್ಯೆಗಳು ಪರಿಹಸಬೇಕು ಎಂದು ಶಾಸಕ ಡಾ.ಅವಿನಾಶ ಜಾಧವ ಖಡಕ್ ಕ್ಕಾಗಿ ಸೂಚಿಸಿದರು.

ಪಟ್ಟಣದ ತಾಲ್ಲೂಕಾ ಪಂಚಾಯತ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಕೆಡಿಪಿ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು,ಅಧಿಕಾರಿಗಳು ಕಾನೂನಿನ ಚೌಕಟ್ಟಿನಲ್ಲಿ ಕೆಲಸ ಮಾಡಿ ಪ್ರೋಟೋಕಾಲ್ ಫಾಲೋ ಮಾಡಿ ಕಾಟಾಚಾರಕ್ಕೆ ಕೆಲಸ ಮಾಡಬೇಡಿ ಯಾವುದೇ ತಪ್ಪು ಮಾಡದೆ ನಿಷ್ಪಕ್ಷಪಾತ ಕೆಲಸ ಮಾಡಿ ಇಲ್ಲಾಂದ್ರೆ ಬೇರೆಡೆ ವರ್ಗಾವಣೆ ಮಾಡಿಕೊಂಡು ಹೋಗಿ ಎಂದು ಸೂಚಿಸಿದರು.

ಕಾಮಗಾರಿಗಳ ಮೇಲೆ ಹಾಗೂ ಇಲಾಖೆಗಳ ಮೇಲೆ ದೂರುಗಳು ಬರುತ್ತಿರುವುದು ಬಹಳಷ್ಟು ಆಗಿವೆ ಇದು ಸರಿಯಾದ ಕ್ರಮವಲ್ಲ ಇದರಿಂದ ಶಾಸಕರ ಹೆಸರಿಗೆ ಚ್ಯತಿ ಬಂದಾಗೆ ಉನ್ನತಮಟ್ಟದ ಅಧಿಕಾರಿ ಎಳ ಕೆಳಗಿರುವ ಅಧಿಕಾರಿಗಳು ಜೆಇ,ಇಂಜಿನಿಯರಿಂಗಗಳು, ಸೂಪರಿಡೆಂಟ್, ಲೈನ್ ಮ್ಯಾನ್‌ಗಳು ಸರಿಯಾದ ಕೆಲಸ ಮಾಡದಿ ರುವವರಿಗೆ ಬದಲಾಯಿಸಿ ವರ್ಗಾವಣೆ ಮಾಡಿ ತಾಲ್ಲೂಕಿನ ಆಹಾರ ದಾನ್ಯಗಳು ಅಂತರ ರಾಜ್ಯಗಳಿಗೆ ಮಾರಾಟದ ಮಾಡುವ ಬಗ್ಗೆ ಮಾಹಿತಿ ಕೇಳಿಬರುತ್ತಿದ್ದು,ಸಿಡಿಪಿಓ ಇಲಾಖೆ ಹಾಗೂ ಅಕ್ಷರ ದಾಸೋಹ ಇಲಾಖೆ ಸೇರಿದಂತೆ ಮಕ್ಕಳಿಗೆ ವಿತರಣೆ ಮಾಡಲಾಗುವ ಆಹಾರ ದಾನ್ಯಗಳು ಉತ್ತಮ ರೀತಿಯಲ್ಲಿ ಪರಿಶೀಲಿಸಿ ಮಕ್ಕಳಿಗೆ ಬಿಸಿಯೂಟ ನೀಡಬೇಕು ಎಃದು ತಾಕೀತು ಮಾಡಿದರು.

ಇಲಾಖೆವಾರು ಅಧಿಕಾರಿಗಳು ತಮ್ಮ ತಮ್ಮ ವಾರ್ಷಿಕ ವರದಿಯನ್ನು ಓದಿ ಹೇಳಿದರು, ವಸತಿ ನಿಲಯಗಳಲ್ಲಿ ಮಕ್ಕಳಿಗಿಂತ ಹೆಚ್ಚು ಆಹಾರ ದಾನ್ಯಗಳು ಪೂರೈಕೆ ಆಗುತ್ತಿದೆ ಎಂದು ಮಾಹಿತಿ ತಿಳಿದು ಬರುತ್ತಿದೆ ಅಧಿಕಾರಿಗಳು ಜಾಗೃತರಾಗಿ ಉತ್ತಮ ಗುಣಮಟ್ಟದ ಊಟ ಕೊಡಬೇಕು ಎಂದು ಸಮಾಜ ಕಲ್ಯಾಣ ಇಲಾಖೆ, ಬಿಸಿಎಂ ಇಲಾಖೆ,ಅಲ್ಪಸಂಖ್ಯಾರ ಕಲ್ಯಾಣ ಇಲಾಖೆ, ಮಕ್ಕಳ ಮತ್ತು ಕಲ್ಯಾಣ ಅಭಿವೃದ್ಧಿ ಇಲಾಖೆಗಳಿಗೆ ನಿರ್ದೇಶನ ನೀಡಿದರು.

ಶಿಕ್ಷಣ ಇಲಾಖೆಯವರು ಮಕ್ಕಳಿಗೆ ಉತ್ತಮ ರೀತಿಯಲ್ಲಿ ಶಿಕ್ಷಣ ನೀಡಬೇಕು ಯಾವ ಶಿಕ್ಷಕರು ಪಾಠ ಮಾಡಲು ಸರಿಯಾದ ಸಮಯಕ್ಕೆ ಶಾಲೆಗೆ ಹೋಗದವರಿಗೆ ನೋಟಿಸ್ ಜಾರಿ ಮಾಡಿ ಅಮಾನತು ಮಾಡಿ,ಈ ಬಾರಿ ಹತ್ತನೇ ತರಗತಿಯ ಫಲಿತಾಂಶ ಶೇಕಡಾ35ರಷ್ಟು ಬಂದಿದ್ದು ಶಿಕ್ಷಣ ಬಹಳಷ್ಟು ಕುಸಿದಿದ್ದು ಕಂಡುಬರುತ್ತಿದೆ ಮುಂದೆ ಬರುವ ದಿನಗಳಲ್ಲಿ ಚನ್ನಾಗಿ ಶಿಕ್ಷಣ ನೀಡಿ ಉತ್ತಮ ಫಲಿತಾಂಶ ಬರಬೇಕು ಎಂದು ಶಿಕ್ಷಣಾಧಿಕಾರಿಗೆ ವಾರ್ನಿಂಗ್ ನೀಡಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ, ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶಂಕರ ರಾಠೋಡ್, ಟಿಹೆಚ್‌ಓ ಮಹ್ಮುದ್ ಗಫಾರ, ಕೃಷಿ ವೀರಶೆಟ್ಟಿ ರಾಠೋಡ್, ತೋಟಗಾರಿಕೆ ರಾಜಕುಮಾರ ಗೋವಿನ್, ಚಂದ್ರಂಪಳ್ಳಿ ಎಇಇ ಚೇತನ್, ಕೈಗಾರಿಕೆ ಶರಣಪ್ಪಾ, ಸಿಡಿಪಿಓ ಸವಿತಾ, ಬಿಸಿಎಂ ಅನುಸೋಯಾ ಚವ್ಹಾಣ, ಎಂಐ ಇಂದುಧರ ಮಂಗಲಗಿ, ಪಿಡಬ್ಲ್ಯೂಡಿ ಬಸವರಾಜ ಬೇನೂರ, ಅಲ್ಪಸಂಖ್ಯಾತರ ಇಲಾಖೆ ನವಾಬ್ ಮಸೂದ್, ಸೇರಿದಂತೆ ಅನೇಕ ಅಧಿಕಾರಿಗಳು ಸಿಬ್ಬಂದಿ ವರ್ಗದವರು ಪಿಡಿಓಗಳು ಇದ್ದರು.

**ಜೆಜೆಎಂ ಕಾಮಗಾರಿಯೂ ಯಾವುದೇ ಬಿಲ್ಲು ಮಾಡದಂತೆ ತಡೆಹಿಡಿಯಿರಿ**

ತಾಪಂ.ಇಓ ಗಮನಕ್ಕೆ ತಂದು ಪರಿಶೀಲಿಸಿದ ನಂತರ ಗ್ರಾಮ ಪಂಚಾಯಿತಿನವರು ಹಸ್ತಾಂತರ ಮಾಡಿಕೊಳ್ಳಬೇಕು,ಜೆಜೆಎಂ ಕಾಮಾಗಾರಿ ಮಾಡುವಾಗ ಸಿಸಿರಸ್ತೆ,ಚರಂಡಿ ಒಡೆದಾಗ ದುರಸ್ತಿ ಮಾಡಿಕೊಟ್ಟಿದಾಗ ಮಾತ್ರ ಗ್ರಾಪಂನವರು ಹಸ್ತಾಂತರ ಮಾಡಿಕೊಳ್ಳಬೇಕು ಎಂದು ತಾಪಂ.ಇಓ ಹಾಗೂ ಪಿಡಿಓಗಳಿಗೆ ತಾಕೀತು ಮಾಡಿದರು. ಸರಿಯಾದ ಕೆಲಸ ಮಾಡದಿದ್ದಕ್ಕೆ ತೋಟಗಾರಿಕೆ ಇಲಾಖೆ, ಲ್ಯಾಂಡ್ ಆರ್ಮಿ ಇಲಾಖೆ,ಜೆಸ್ಕಾಂ ಇಲಾಖೆ, ಸಿಡಿಪಿಓ ಇಲಾಖೆಯವರಿಗೆ, ಪಿಆರ್‌ಇ ಇಲಾಖೆ ಜೆಇಗಳಿಗೆ ಶಾಸಕರು ತರಾಟೆಗೆ ತೆಗೆದುಕೊಂಡರು.

---

# ನಕಲಿ ದಾಖಲೆ ಸೃಷ್ಟಿಸಿ 132 ಕೋಟಿ ರೂ. ಜಿಎಸ್‌ಟಿ ವಂಚನೆ; ಆರೋಪಿ ಬಂಧನ

• ಉದಯವಾಹಿನಿ, ಬೆಳಗಾವಿ




ನಕಲಿ ಇನ್‌ವೈಸ್ (ದಾಖಲೆ) ಸೃಷ್ಟಿಸಿ 132 ಕೋಟಿ ರೂಪಾಯಿ ತೆರಿಗೆ ವಂಚನೆ ಮಾಡುತ್ತಿದ್ದ ಪ್ರಕರಣವನ್ನು ಬೇಧಿಸಿರುವ ಕೇಂದ್ರ ಜಿಎಸ್ಟಿ ಇಲಾಖೆಯ ಬೆಳಗಾವಿ ವಿಭಾಗದ ಅಧಿಕಾರಿಗಳು ಪ್ರಕರಣದ ಪ್ರಮುಖ ಆರೋಪಿಯನ್ನು ಬಂಧನಕ್ಕೊಳಪಡಿಸಿದ್ದಾರೆ.

ಫೆಡರಲ್ ಲಾಜಿಸ್ಟಿಕ್ಸ್ ಮಾಲೀಕ ನಕೀಬ್ ನಜೀಬ್ ಮುಲ್ಲಾ ಬಂಧಿತ ಆರೋಪಿ. ರೂ.23.82 ಕೋಟಿಯ ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಒಳಗೊಂಡ ರೂ.132 ಕೋಟಿ ಮೌಲ್ಯದ ನಕಲಿ ಜಿಎಸ್‌ಟಿ ಇನ್‌ವಾಯ್ಸ್ ರಾಕೆಟ್‌ಗಳನ್ನು ಸೃಷ್ಟಿಸಿದ್ದ. ಗ್ರಾಹಕರಿಂದ ಹಣ ಸಂಗ್ರಹಿಸಿ ಅದನ್ನು ಜಿಎಸ್‌ಟಿ ಕಚೇರಿಗೆ ಕಟ್ಟದೇ ವಂಚಿಸಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸರಕು ಮತ್ತು ಸೇವೆಗಳ ನೈಜ ಪೂರೈಕೆ ಮಾಡದೇ ಆರೋಪಿಯು ನಕಲಿ ಇನ್‌ವಾಯ್ಸ್ ನೀಡುವ ಮೂಲಕ ಇನ್‌ಪುಟ್ ತೆರಿಗೆ ಕ್ರೆಡಿಟ್ ಪಡೆದಿದ್ದ. 'ಫೆಡರಲ್ ಲಾಜಿಸ್ಟಿಕ್ಸ್ ಅಂಡ್ ಕಂ' ಹೆಸರಿನ ಸಂಸ್ಥೆ ಕೂಡ ನಕಲಿಯಾಗಿದೆ. ಅದರ ಮೂಲಕವೇ ಅನೇಕ ಸಂಸ್ಥೆಗಳ ರಿಟರ್ನ್‌ಗಳು ಮತ್ತು ಇತರ ಜಿಎಸ್‌ಟಿ ಸಂಬಂಧಿತ ಸೇವೆ ನೀಡುವುದಾಗಿ ನಂಬಿಸಿದ್ದ. ಗ್ರಾಹಕರ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಲಾಯಿತು ಎಂದು ತಿಳಿಸಿದ್ದಾರೆ.

ಸಿಜಿಎಸ್‌ಟಿ ಕಾಯ್ದೆ 2024ರ ಸೆಕ್ಷನ್ 69ರ ನಿಬಂಧನೆಗಳ ಪ್ರಕಾರ, ಸೆಕ್ಷನ್ 132(1) (ಬಿ) ಮತ್ತು 132 (1) (ಸಿ) ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಜಿಎಸ್‌ಟಿ ಮುಖ್ಯ ಆಯುಕ್ತ ದಿನೇಶ್ ಪಿ. ಪಂಗಾರ್ಕರ್ ತಿಳಿಸಿದ್ದಾರೆ. ಆರೋಪಿಯನ್ನು ಬೆಳಗಾವಿಯ ಜೆಎಂಎಫ್‌ಸಿ ಎರಡನೇ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, 14 ದಿನ ನ್ಯಾಯಾಂಗ ಬಂಧನ ವಿಧಿಸಲಾಗಿದೆ.

---

# ಅನಿವಾಸಿ ಕನ್ನಡಿಗರ ಸಮಸ್ಯೆಗಳ ಸ್ಪಂದನೆಗೆ ಮನವಿ

• ಉದಯವಾಹಿನಿ, ಶಿವಮೊಗ್ಗ



ಉದಯವಾಹಿನಿ ಚಿತ್ರ

ಅನಿವಾಸಿ ಕನ್ನಡಿಗರ ಅವಶ್ಯಕತೆಗಳು-ಸಮಸ್ಯೆಗಳಿಗೆ ಸ್ಪಂದಿಸಲು ಪ್ರತ್ಯೇಕವಾದ ಒಂದು ಸಚಿವಾಲಯ ಪ್ರಾರಂಭಿಸಲು ಸರ್ಕಾರಕ್ಕೆ ಪ್ರಣಾಳಿಕೆ ಸಲ್ಲಿಸಲಾಗಿದ್ದು, ಈ ಕುರಿತು ನೀತಿ-ನಿಯಮಾವಳಿಗಳನ್ನು ರೂಪಿಸಲಾಗುತ್ತಿದೆ ಎಂದು ಅನಿವಾಸಿ ಭಾರತೀಯ ಸಮಿತಿ ಉಪಾಧ್ಯಕ್ಷೆ ಡಾ.ಆರತಿ ಕೃಷ್ಣ ತಿಳಿಸಿದರು.

ಜು.12 ರಂದು ಜಿಲ್ಲೆಯ ಅನಿವಾಸಿ ಕನ್ನಡಿಗರು, ಕುಟುಂಬದವರಿಂದ ಅಹವಾಲು, ದೂರುಗಳನ್ನು ಸ್ವೀಕರಿಸಲು ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಅನಿವಾಸಿ ಭಾರತೀಯ ಸಮಿತಿಯನ್ನು ರಾಜ್ಯದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ 2008ರಲ್ಲಿ ಸ್ಥಾಪಿಸಲಾಗಿದೆ. ವಿಶ್ವದೆಲ್ಲೆಡೆ ನೆಲೆಸಿರುವ ಅನಿವಾಸಿ ಕನ್ನಡಿಗರ ಆಕಾಂಕ್ಷೆ, ಅವಶ್ಯಕತೆ, ನಿರೀಕ್ಷೆಗಳನ್ನು ಗಮನದಲ್ಲಿ ಇಟ್ಟುಕೊಂಡು 2016-17 ನೇ ಸಾಲಿನಲ್ಲಿ ಅನಿವಾಸಿ ಭಾರತೀಯ ನೀತಿಯನ್ನು ಹೊರತರಲಾಗಿದೆ. ಅನಿವಾಸಿ ಕನ್ನಡಿಗರು ಹಲವಾರು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ. ವಿಶೇಷವಾಗಿ ದುಡಿಯುವ ವರ್ಗ ಹೆಚ್ಚಿನ ತೊಂದರೆ ಎದುರಿಸುತ್ತಾರೆ. ಗಲ್ಫ್ ದೇಶಗಳಿಗೆ ತೆರಳಿದ ಅನಿವಾಸಿ ಕನ್ನಡಿಗರಿಂದ ಪ್ರತಿನಿತ್ಯ ಒಂದಲ್ಲ ಒಂದು ಸಮಸ್ಯೆ ಹೊತ್ತ ಕರೆಗಳು ಬರುತ್ತಿರುತ್ತವೆ.


ನಕಲಿ ಏಜೆನ್ಸಿ ಮೂಲಕ ತೆರಳಿದ ದುಡಿಯುವ ವರ್ಗ ಅಲ್ಲಿ ತೊಂದರೆಗಳೊಳಗಾಗಿ, ಯಾವುದೋ ಕೆಲಸ ಮಾಡುವುದು ಅನಿವಾರ್ಯವಾಗಿ, ಅವರ ವೀಸಾ, ಪಾಸ್‌ಪೋರ್ಟ್‌ಗಳನ್ನೂ ಉದ್ಯೋಗದಾತರು ಕಿತ್ತುಕೊಂಡು ಪರಿತಪಿಸುತ್ತಾರೆ. ಹಾಗೂ ಶಿವಮೊಗ್ಗ, ಹೆಚ್‌ಡಿ ಕೋಟೆ, ಹುಣಸೂರಿನ ಹಕ್ಕಿಪಿಕ್ಕಿ ಜನಾಂಗದವರು ವಿಶ್ವದೆಲ್ಲೆಡೆ ಸಂಚರಿಸುತ್ತಾರೆ. ಅವರು ಕೆಲಸಕ್ಕೆ ತೆರಳಿದ ದೇಶದಲ್ಲಿ ಹಲವು ಕಷ್ಟಗಳನ್ನು ಅನುಭವಿಸುತ್ತಾರೆ. ಇತ್ತೀಚೆಗೆ 40 ಕ್ಕೂ ಹೆಚ್ಚು ಜನರು ಸೂಡಾನ್‌ನಲ್ಲಿ ಸಿಲುಕಿದ್ದರು. ಭದ್ರಾವತಿ, ತೀರ್ಥಹಳ್ಳಿಯಿಂದಲೂ ಹೆಚ್ಚಿನ ಜನರು ದುಡಿಯುವ ಉದ್ದೇಶಗಳಿಗೆ ಕಾಂಬೋಡಿಯಾ, ವಿಯೆಟ್ನಾಂ ಇತರೆ ಬೇರೆ ದೇಶಗಳಿಗೆ ತೆರಳಿ ಸವಾಲು ಗಳನ್ನು ಎದುರಿಸುತ್ತಾರೆ. ಹಕ್ಕಿಪಿಕ್ಕಿ ಸಮುದಾಯದವರು, ರಾಜ್ಯದಲ್ಲಿ ತಾವು ವಿವಿಧೆಡೆ ಓಡಾಡಲು ಅಡ್ಡಿಯಾಗುತ್ತಿದೆ. ಆದ್ದರಿಂದ ಐಡಿ ಕಾರ್ಡ್ ನೀಡುವಂತೆ, ತಾವು ವಾಸಿಸುತ್ತಿರುವ ಮನೆಗಳು ಮತ್ತು ಸಾಗುವಳಿ ಮಾಡುತ್ತಿರುವ ಜಮೀನಿಗೆ ಹಕ್ಕುಪತ್ರ ಮತ್ತು ಸಾಗುವಳಿ ಚೀಟಿ ನೀಡುವಂತೆ, ಆದಿವಾಸಿ ತೈಲ ಕಂಪೆನಿ ತೆರೆಯಲು ಸ್ಥಳ ಮತ್ತು ಲೈಸೆನ್ಸ್ ನೀಡುವಂತೆ ಉಪಾಧ್ಯಕ್ಷರಿಗೆ ಮನವಿ ಮಾಡಿದರು

> **ವಿದೇಶಕ್ಕೆ ತೆರಳುವವರು ಸಮಿತಿಯ ಕಚೇರಿಯಲ್ಲಿ ನೋಂದಣಿ ಮಾಡಿಕೊಂಡರೆ, ಅವರಿಗೆ ಸಹಾಯ ಮಾಡುವುದು ಸುಲಭವಾಗುತ್ತದೆ. ಆದ್ದರಿಂದ ಹೊರ ದೇಶಗಳಿಗೆ ತೆರಳುವ ಮುನ್ನ ನೋಂದಣಿ ಮಾಡಿಸಿಕೊಳ್ಳಬೇಕು. ಅನಿವಾಸಿಯರ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಬೆಂಗಳೂರಿಗೆ ಬರಲು ಕಷ್ಟವಾದಲ್ಲಿ ತಾಲ್ಲೂಕುಗಳಲ್ಲಿ ತಹಶೀಲ್ದಾರ್, ಎಸಿ ಕಚೇರಿ, ಜಿಲ್ಲಾಡಳಿತಕ್ಕೆ ಸಹ ದೂರು ನೀಡಬಹುದು ಎಂದರು.**

---

# ಬಿದ್ದಾಗ ಸೊರಗೋದು, ಗೆದ್ದಾಗ ಸೊಕ್ಕು ಮಾಡೋದು ರಾಜಕಾರಣವಲ್ಲ

• ಉದಯವಾಹಿನಿ, ಬೆಳಗಾವಿ



> **ಬಹಳ ಶಿಸ್ತಿನಿಂದ ಎಲ್ಲರೂ ಕೆಲಸ ಮಾಡಿದ್ದೀರಿ. ಶ್ರಮ ಪಟ್ಟಿದ್ದೀರಿ. ನಿಮ್ಮ ಸಹಾಯಕ್ಕೆ ನಾವು ನಿಲ್ಲುತ್ತೇವೆ. ಗೋಕಾಕ, ಅರಬಾವಿ ಕ್ಷೇತ್ರದ ಜನರಲ್ಲಿ ಮಂದಹಾಸ ತಂದು ಕೊಡು ಎಂದು ನಾನು ದೇವಿ ಮಹಾಲಕ್ಷ್ಮಿಯಲ್ಲಿ ಬೇಡಿಕೊಳ್ಳುತ್ತೇನೆ**
> **- ಲಕ್ಷ್ಮೀ ಹೆಬ್ಬಾಳಕರ್, ಸಚಿವೆ**

ಗೆದ್ದಾಗ ಸೊಕ್ಕಾಗಲಿ, ಸೋತಾಗ ಸೊರಗುವುದಾಗಲಿ ನನ್ನ ಜಾಯಮಾನವಲ್ಲ. ಸೋಲಲಿ, ಗೆಲ್ಲಲಿ ಯಾವತ್ತೂ ಜನರೊಂದಿಗಿದ್ದು ಅವರ ಕಷ್ಟ ಸುಖದಲ್ಲಿ ಭಾಗಿಯಾಗುವುದು ನನ್ನ ಗುಣ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.

ಗೋಕಾಕ ಹಾಗೂ ಮೂಡಲಗಿ ತಾಲ್ಲೂಕಿನ ಕಾರ್ಯಕರ್ತರಿಗೆ ಧನ್ಯವಾದ ಸಮರ್ಪಣಾ ಸಮಾರಂಭದಲ್ಲಿ ಸಚಿವರು ಮಾತನಾಡುತ್ತಿದ್ದರು. ಸೋಲು, ಗೆಲುವು ಸಹಜ ಪ್ರಕ್ರಿಯೆ. ರಾಜಕಾರಣ ನಿಂತ ನೀರಲ್ಲ, ಗೆಲುವು ಯಾರ ಸ್ವತ್ತಲ್ಲ, ಬಿದ್ದಾಗ ಸೊರಗೋದು, ಗೆದ್ದಾಗ ಸೊಕ್ಕು ಮಾಡೋದು ರಾಜಕಾರಣವಲ್ಲ ಎಂದು ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು. ಕಾಂಗ್ರೆಸ್ ಪಕ್ಷ ಬೆಳಗಾವಿ ಲೋಕಸಭೆಯ ಇತಿಹಾಸದಲ್ಲೇ ಕಳೆದ ಲೋಕಸಭಾ ಚುನಾವಣೆಯಲ್ಲಿ ಅತ್ಯಧಿಕ ಮತ ಪಡೆದಿದೆ. ತಾಂತ್ರಿಕವಾಗಿ ಸೋತಿರಬಹುದು. ಆದರೆ ಅತೀ ದೊಡ್ಡ ಸಂಖ್ಯೆಯಲ್ಲಿ ಜನರು ನಮ್ಮನ್ನು ಬೆಂಬಲಿಸಿದ್ದಾರೆ. ಪ್ರಚಾರಕ್ಕೆ ಹೋದಾಗ ಎಲ್ಲಾ ಕಡೆ ಅಭೂತಪೂರ್ವ ಬೆಂಬಲ ಸಿಗುತ್ತಿತ್ತು.

ಈ ಬಾರಿ ಕಾಂಗ್ರೆಸ್ ಗೆಲುವು ಖಚಿತ ಎಂದು ಎಲ್ಲಾ ಕಡೆ ಜನರೇ ಮಾತನಾಡುತ್ತಿದ್ದರು. ಆದರೆ ಕಾರಣಾಂತರಗಳಿಂದ ಸೋತಿರಬಹುದು. ಇಂದಿರಾಗಾಂಧಿ, ಸಿದ್ದರಾಮಯ್ಯ ಸೇರಿದಂತೆ ಸೋತವರೆಲ್ಲ ಮತ್ತೆ ಎದ್ದು, ಗೆದ್ದು ರಾಜಕಾರಣದಲ್ಲಿ ಹೆಸರು ಮಾಡಿದ್ದಾರೆ. ಅವರು ನಮಗೆ ಆದರ್ಶ ಎಂದು ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ನಾವು ಸದಾ ನಿಮ್ಮ ಜೊತೆಗಿರುತ್ತೇವೆ. ನಿಮ್ಮನ್ನು ದೂರ ಮಾಡುವ ಮನೋಭಾವ ನಮ್ಮದಲ್ಲ. ಸೋಲಿನಿಂದ ಕಂಗೆಡುವುದು ಬೇಡ. ಕೆಲವರು ಸೋತರೆ ಧಮಕಿ ಹಾಕುತ್ತಾರೆ. ಪ್ರಜಾಪ್ರಭುತ್ವದಲ್ಲಿ ಯಾರಿಗೂ ಹೆದರಬೇಕಿಲ್ಲ. ಬೇರೆಯವರು ನಮಗೆ ಅನ್ನ ಹಾಕುವುದಿಲ್ಲ.

ಸ್ವಾಭಿಮಾನದಿಂದ ಬದುಕೋಣ. ಎಲ್ಲರೂ ಸೇರಿ ಪಕ್ಷ ಸಂಘಟನೆ ಮಾಡೋಣ ಎಂದು ಅವರು ತಿಳಿಸಿದರು. ಲೋಕಸಭಾ ಚುನಾವಣೆ ಅಭ್ಯರ್ಥಿಯಾಗಿದ್ದ ಮೃಣಾಲ್ ಹೆಬ್ಬಾಳಕರ್ ಮಾತನಾಡಿ, ಚುನಾವಣೆ ಪ್ರಚಾರದ ವೇಳೆ ಪ್ರತಿ ಊರನ್ನು ತಲುಪುವ ಪ್ರಯತ್ನ ಮಾಡಿದ್ದೆವು. ಎಲ್ಲಾ ಕಡೆ ಒಳ್ಳೆಯ ಅಭಿಪ್ರಾಯ ವ್ಯಕ್ತವಾಗಿತ್ತು. ಚುನಾವಣೆಯಲ್ಲಿ ಸೋತಿರಬಹುದು. ಆದರೆ 6 ಲಕ್ಷ ಜನರು ನಮ್ಮನ್ನು ಬೆಂಬಲಿಸಿದ್ದಾರೆ ಎಂದರು.

---

# ತೆಂಕನಿಡಿಯೂರು ಗ್ರಾ. ಪಂ. ನಲ್ಲಿ ಸದಸ್ಯರ ಜಟಾಪಟಿ

• ಉದಯವಾಹಿನಿ, ಉಡುಪಿ



ಉದಯವಾಹಿನಿ ಚಿತ್ರ

**ಮಹಿಳಾ ಸದಸ್ಯೆಗೆ ಗಾಯ**

ಸಭೆಯ ವಿಚಾರವಾಗಿ ಬಿಜೆಪಿ, ಕಾಂಗ್ರೆಸ್ ಸದಸ್ಯರ ನಡುವೆ ಜಟಾಪಟಿ ನಡೆದಿರುವ ಘಟನೆ ಉಡುಪಿಯ ತೆಂಕ ನಿಡಿಯೂರು ಗ್ರಾಮ ಪಂಚಾಯತ್ ನಲ್ಲಿ ಶುಕ್ರವಾರ ನಡೆದಿದೆ. ಸುಮಾರು 50 ಲೋಡ್ ಕಸವನ್ನು ಹೂತು ಹಾಕಿ ರುವ ಹಿನ್ನೆಲೆಯಲ್ಲಿ ಬಾವಿಯ ನೀರು ಕಲುಷಿತಗೊಳ್ಳುತ್ತಿದೆ ಕೂಡಲೇ ಕಸವನ್ನು ಹೊರತೆಗೆಯಬೇಕು ಎಂದು ಗ್ರಾಮ ಸ್ಥರು ಪಂಚಾಯತ್ ಅಧ್ಯಕ್ಷೆ ಶೋಭಾ ನಾಯ್ಕ್ ವಿರುದ್ಧ ಪ್ರತಿಭಟನೆ ನಡೆಸಿದ್ದಾರೆ ಇದರ ಹಿನ್ನೆಲೆಯಲ್ಲಿ ಪಂಚಾಯತ್ ನಲ್ಲಿ ಸಭೆ ನಡೆಯುತಿದ್ದ ವೇಳೆ ಬಿಜೆಪಿ ಸದಸ್ಯರು ಸಭೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಸದಸ್ಯರು ಕೋರಂ ಇಲ್ಲದೆ ಸಭೆ ನಡೆಸಲು ವಿರೋಧಿಸಿದ್ದಾರೆ ಅಲ್ಲದೆ ಸಭೆಗೆ ಮೂವರು ಸದಸ್ಯರು ಗೈರಾಗಿದ್ದು ಸಭೆ ನಡೆಸಲು ಬಿಡದೆ ಬಿಜೆಪಿ ಸದಸ್ಯರು ಸಭೆಯ ಬಾವಿಗಿಳಿದು ವಿರೋಧ ವ್ಯಕ್ತಪಡಿಸಿದ್ದಾರೆ.

ಈ ನಡುವೆ ಕಾಂಗ್ರೆಸ್ ಸದಸ್ಯರು ಮಧ್ಯ ಪ್ರವೇಶಿಸಿ ಬಿಜೆಪಿ ಸದಸ್ಯರನ್ನು ಸಭೆಯಿಂದ ಹೊರ ದೂಡಲು ಯತ್ನಿಸಿದ್ದಾರೆ ಈ ವೇಳೆ ಮಾತಿಗೆ ಮಾತು ಬೆಳೆದು ಇಒ, ಪೊಲೀಸರ ಎದುರೇ ಎಳೆದಾಡಿಕೊಂಡು ಜಗಳವಾಡಿದ್ದಾರೆ.

ಈ ನಡುವೆ ಗ್ರಾ.ಪಂಚಾಯತ್‌ನ ಮಹಿಳಾ ಸದಸ್ಯೆಯೊಬ್ಬರು ಗಾಯಗೊಂಡಿದ್ದಾರೆ.

ಸುಮಾರು ಅರ್ಧ ಗಂಟೆಗಳ ಕಾಲ ಬಿಗುವಿನ ವಾತಾವರಣ ಉಂಟಾಗಿದ್ದು ಬಳಿಕ ಬಿಜೆಪಿ ಸದಸ್ಯರು ಸಭೆಯಿಂದ ಹೊರ ನಡೆದು ಕಾಂಗ್ರೆಸ್ ಸದಸ್ಯರ ವಿರುದ್ಧ ಠಾಣೆಗೆ ದೂರು ನೀಡಲು ನಿರ್ಧರಿಸಿದ್ದಾರೆ.

---

# ಗ್ಯಾರಂಟಿ ಕಾರಣದಿಂದ ಅಭಿವೃದ್ಧಿ ಸ್ಥಗಿತವೆಂಬ ರಾಯರೆಡ್ಡಿ ಹೇಳಿಕೆ ಅಲ್ಲಗಳೆದ ಎಂ.ಬಿ.ಪಾಟೀಲ

• ಉದಯವಾಹಿನಿ, ವಿಜಯಪುರ



ಗ್ಯಾರಂಟಿ ಯೋಜನೆಗಳಿಂದ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲವೆಂದು ಸಿಎಂ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಹೇಳಿಕೆಯನ್ನು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಅಲ್ಲಗಳೆದಿದ್ದಾರೆ.

ಶುಕ್ರವಾರ ನಗರದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಯರೆಡ್ಡಿ ಏನು ಮಾತನಾಡಿದ್ದಾರೆಂದು ನನಗೆ ಸರಿಯಾದ ಮಾಹಿತಿ ಇಲ್ಲ. ಅಂಥದ್ದು ಯಾವುದೂ ಇಲ್ಲ, ಅದು ಏನೇ ಇದ್ದರೂ ರಾಯರೆಡ್ಡಿ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮಾತನಾಡುತ್ತಾರೆ ಎಂದರು. ಗ್ಯಾರಂಟಿ ಯೋಜನೆಯಿಂದ ರಾಜ್ಯದಲ್ಲಿ ಅಭಿವೃದ್ಧಿ ಕೆಲಸ ಆಗುತ್ತಿಲ್ಲ. ಕಾರಣ ಕ್ರಮ ಕೈಗೊಳ್ಳುವಂತಹ ಆಗ್ರಹಿಸಿ ಕೇಂದ್ರ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್ ಅವರಿಗೆ ಬಿಜೆಪಿ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮನವಿ ನೀಡಿರುವುದಕ್ಕೆ ತಿರುಗೇಟು ನೀಡಿದ ಅವರು, ಯತ್ನಾಳ ಸಂಸದರಾ ರಾಜ್ಯಸಭಾ ಸದಸ್ಯರಾ ಅವರು ಶಾಸಕರು ಮಾತ್ರ ಎಂದರು. ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಹಣ ಮೊದಲು ಬರಲಿ ಎಂದು ಯತ್ನಾಳಗೆ ಹೇಳಿ ಎಂದು ಕುಟುಕಿದ ಎಂ.ಬಿ.ಪಾಟೀಲ, ಕಳೆದ ಬಾರಿ ಕೋರ್ಟ್‌ಗೆ ಹೋಗಿ ಜಿಎಸ್.ಟಿ. ಹಣ ಪಡೆದುಕೊಳ್ಳುವ ಪರಸ್ಥಿತಿ ಬಂತು. ಬರ ಪರಿಹಾರಕ್ಕೆ ಕೇಳಿದಷ್ಟು ಹಣ ಬರಲಿಲ್ಲ. ಕೇಳಿದ್ದಕ್ಕಿಂತಲೂ ಕಡಿಮೆ ಹಣ ಕೊಟ್ಟರು ಎಂದು ಕಿಡಿ ಕಾರಿದರು. ಚಂದ್ರಬಾಬು ನಾಯ್ಡು, ನಿತೀಶಕುಮಾರ್ ಅವರಂತೆ ಯತ್ನಾಳ ಕೂಡ ಕೇಂದ್ರದ ಮೇಲೆ ಒತ್ತಡ ಹಾಕಿ ರಾಜ್ಯಕ್ಕೆ ಹಣ ಕೊಡಿಸುವ ಕೆಲಸ ಮಾಡಲಿ ಎಂದು ಸಿಡುಕಿದರು. ರಾಜ್ಯಕ್ಕೆ ಬೇಕಾದ ಅನ್ನಭಾಗ್ಯ ಯೋಜನೆಗೆ ಕೇಂದ್ರ ಸರ್ಕಾರ ಅಕ್ಕಿ ಕೊಡದೆ ಅಕ್ಕಿಯನ್ನು ಹರಾಜು ಮಾಡಿದರು. ಹಣ ಕೊಟ್ಟರೂ ಅಕ್ಕಿ ಕೊಡಲಿಲ್ಲ. ಇದಕ್ಕೆಲ್ಲ ಯತ್ನಾಳ ಉತ್ತರಿಸಲಿ ಎಂದರು.

---

# 100 'ಇಡಿ' 'ಸಿಬಿಐ' ತಂಡಗಳು ಬಂದರೂ ಕೈ 'ವೈಟ್ ಟಿ-ಶರ್ಟ್ ಆರ್ಮಿ' ಹೆದರಲ್ಲ

• ಉದಯವಾಹಿನಿ, ಹುಬ್ಬಳ್ಳಿ



ಉದಯವಾಹಿನಿ ಚಿತ್ರ

ಮುಡಾ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಮಹಮ್ಮದ್ ನಲಪಾಡ್ ಮಾತನಾಡಿದ್ದು, ನಾವು 100 ಇಡಿ ಅಧಿಕಾರಿಗಳ ತಂಡ ಬಂದರೂ ಹೆದರುವುದಿಲ್ಲ. 100 ಸಿಬಿಐ ಅಧಿಕಾರಿಗಳ ತಂಡ ಬಂದರೂ ಹೆದರುವುದಿಲ್ಲ ಎಂದು ತಿಳಿಸಿದರು.

ಹುಬ್ಬಳ್ಳಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ನಡೆಸೋಕೆ ಅಧಿಕಾರಿಗಳು ಬಹಳ ಮುಖ್ಯ. ಅಧಿಕಾರಿಗಳನ್ನು ಕಂಟ್ರೋಲ್ ಮಾಡೋದು ಮಿನಿ ಸ್ಟರ್ ಕೆಲಸ. ಸದ್ಯ ಬಿ ನಾಗೇಂದ್ರ ಅವರನ್ನು ಇಡಿ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಬಿಜೆಪಿಯವರು ಹಗರಣ ಮಾಡಿದಾಗ ಇಡಿ ಅಧಿಕಾರಿಗಳು ಎಲ್ಲಿದ್ದರು? ಬಿಜೆಪಿ ಅವರ ಮೇಲೆ ಯಾವುದಾದರೂ ಕ್ರಮ ತೆಗೆದುಕೊಂಡಿದ್ದಾರಾ? ಎಂದು ಪ್ರಶ್ನಿಸಿದರು.

ಬಿಜೆಪಿಯವರು ಹರಿಶ್ಚಂದ್ರನ ಮೊಮ್ಮಕ್ಕಳ ಮಾಜಿ ಸಿಎಂ ಯಡಿಯೂರಪ್ಪನವರು ಜೈಲಿಗೆ ಹೋಗಿದ್ದು ನೆನಪಿಲ್ಲವೇ ಮಾತಿನ ಭರದಲ್ಲಿ ನಾವೇ ಜೈಲಿಗೆ ಕಳಿಸಿದ್ದೇವೆ ಎಂದ ನಲಪಾಡ್ ಯಡಿಯೂರಪ್ಪರನ್ನು ನಾವೇ ಕಳಿಸಿದ್ದೇವೆ ಎಂದು ಹೇಳಿ ಬಳಿಕ ಅವರ ಸರ್ಕಾರದಲ್ಲಿ ಜೈಲಿಗೆ ಹೋಗಿದ್ದರು ಎಂದು ನಲಪಾಡ್ ಹೇಳಿದರು.

ಬಿಎಸ್ ಯಡಿಯೂರಪ್ಪ ಪುತ್ರ ವಿಜಯೇಂದ್ರ ಸತ್ಯ ಹರಿಶ್ಚಂದ್ರನ ಮೊಮ್ಮಗ ಅಲ್ಲ. ಬೊಮ್ಮಾಯಿ ಸರ್ಕಾರದಲ್ಲಿನ 40% ಕಮಿಷನ್ ಎಲ್ಲಿ ಹೋಯಿತು ಆಗ ಸಿಬಿಐ ಇಡಿ ಎಲ್ಲಿ ಮಲಗಿತ್ತು ಈಗ ಓಡೋಡಿ ಬಂದಿದ್ದಾರೆ ಅಂತ ನಲಪಾಡ್ ತೀವ್ರ ಆಕ್ರೋಶ ಹೊರಹಾಕಿದರು.

> **ಕಾಂಗ್ರೆಸ್‌ನ ವೈಟ್ ಟಿ-ಶರ್ಟ್ ಆರ್ಮಿ ಹೆದರಲ್ಲ. ಮುಡಾ ಹಗರಣ ಬಿಜೆಪಿ ಕಾಲದಲ್ಲಿ ನಡೆದಿದ್ದು. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕುರುಬ ಸಮುದಾಯದವರು.ಅವರು ಎರಡನೇ ಬಾರಿ ಸಿಎಂ ಆಗಿರುವುದು ಬಿಜೆಪಿಗೆ ಸಹಿಸೋಕೆ ಆಗುತ್ತಿಲ್ಲ**
> **-ನಲಪಾಡ್**
> **ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ**

ಕೋವಿಡ್ ಸಮಯದಲ್ಲಿ ಡಾ.ಕೆ ಸುಧಾಕರ್ ದುಡ್ಡು ಹೊಡೆದರು. ಡಿಕೆ ಶಿವಕುಮಾರ್ ಕೆಸ್ ಬೇರೆ ಯಡಿಯೂರಪ್ಪ ಕೆಸ್ ಬೇರೆ. ಆದರೆ ಬಿಜೆಪಿಯವರು ಡಿಕೆ ಶಿವಕುಮಾರ್ ಅವರನ್ನು ಟಾರ್ಗೆಟ್ ಮಾಡಿದ್ದಾರೆ. ಈಗ ನಾವು ಯಾವ ಸಿಬಿಐ ಜಾರಿ ನಿರ್ದೇಶನಾಲಯಕ್ಕೆ ಹೆದರಲ್ಲ. 100 ಇಡಿ ತಂಡಗಳು ಬರಲಿ 100 ಸಿಬಿಐ ಬಂದರೂ ಹೆದರುವುದಿಲ್ಲ.

---

# ಗ್ರಾ.ಪಂ. ನಡೆದ ಕಾಮಗಾರಿ ಅವ್ಯವಹಾರ ತನಿಖೆಗೆ ಆಗ್ರಹ

## ಅವ್ಯವಹಾರಗಳನ್ನು ತನಿಖೆಗೆ ಒಳಪಡಿಸಬೇಕು ಎಂದು ತಾಲ್ಲೂಕು ಪಂಚಾಯಿತಿ ಅಧಿಕಾರಿ ಮನವಿ ಪತ್ರ ಸಲ್ಲಿಕೆ

• ಉದಯವಾಹಿನಿ, ಸಿಂಧನೂರು

ಉದಯವಾಹಿನಿ ಚಿತ್ರ



**ಬಡತನ ನಿವಾರಿಸಲು ಶ್ರಮ**

ತಾಲ್ಲೂಕಿನ ಬಾದರ್ಲಿ ಗ್ರಾಮ ಪಂಚಾಯತಿಯಲ್ಲಿನ ಕೂಲಿ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಿ, ಹಾಗೂ ವಿವಿಧ ಕಾಮಗಾರಿಗಳಲ್ಲಿ ನಡೆದ ಅವ್ಯವಹಾರಗಳನ್ನು ತನಿಖೆಗೆ ಒಳಪಡಿಸಬೇಕು ಎಂದು ತಾಲ್ಲೂಕು ಪಂಚಾಯಿತ ಅಧಿಕಾರಿ ಮನವಿ ಪತ್ರ ಸಲ್ಲಿಸಿ ಆಗ್ರಹಿಸಿದರು.

ನಂತರ ಮಾತನಾಡಿದ ಕೃಷಿ ಕೂಲಿ ಕಾರ್ಮಿಕರ ಹಕ್ಕುಗಳ ಹೋರಾಟ ಸಮಿತಿ ಸಂಚಾಲಕ ಮೌನೇಶ್ ಜಾಲವಾಡಗಿ ಅವರು ಸರ್ಕಾರವು ಬಡಜನರ ಕಲ್ಯಾಣಕ್ಕಾಗಿ, ಅವರನ್ನು ಬಡತನದಿಂದ ಮೇಲೆತ್ತಲು ಹಲವಾರು ಯೋಜನೆಗಳನ್ನು ಜಾರಿಗೊಳಿಸಿದರ ಭಾ ಗವಾಗಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಯಂತಹ ಮಹತ್ತರ ಯೋಜನೆಯನ್ನು ಜಾರಿಗೊಳಿಸಿ ಈ ಯೋಜನೆಯಿಂದ ಬಡ ಮತ್ತು ಕೂಲಿ ಕಾರ್ಮಿಕರಿಗೆ ಪಂಚಾಯಿತಿ ವತಿಯಿಂದ ಕೆಲಸ ನೀಡಿ ಅವರ ಬಡತನ ನಿವಾರಿಸಲು ಶ್ರಮಿಸುತ್ತಿದೆ. ಆದರೆ ಇಂತಹ ಮಹತ್ತರ ಯೋಜನೆಯನ್ನು ಶುಕ್ರವಾರ ಅಧಿಕಾರಿಗಳು ತಮ್ಮ ವೈಯಕ್ತಿಕ ಹಿತಾಸಕ್ತಿಗೋಸ್ಕರ ಈ ಯೋಜನೆಯನ್ನು ಬುಡಮೇಲು ಮಾಡಿದ್ದಾರೆ.

ಮತ್ತು ಬಡ ಕೂಲಿ ಕಾರ್ಮಿಕರು ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಕೆಲಸ ಮಾಡಿದಕ್ಕಾಗಿ ಅವ 'ರಿಗೆ ಕೇವಲ ರೂ.100 ಮತ್ತು 120 ರೂಪಾಯಿಯಂತೆ ಕೂಲಿಯನ್ನು ಪಾವತಿ ಮಾಡಿ ಕೂಲಿಕಾರರ ಶ್ರಮಕ್ಕೆ ಪ್ರತಿಫಲ ನೀಡದೆ ವಂಚಿಸಿದ್ದಾರೆ.

ಈ ಯೋಜನೆಯಡಿ ಎಸ್ಸಿ ಎಸ್ಟಿ ಕಾಲೋನಿಯ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನದಲ್ಲಿ ಈ ಸಮುದಾಯಗಳ ಅಭಿವೃದ್ಧಿ ಶೂನ್ಯವಾಗಿದೆ, ಅಂಗವಿಕಲರ ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾ ನವನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ,

ಆದ್ದರಿಂದ ನರೇಗಾ ಹಾಗೂ 15ನೇ ಹಣಕಾಸು ಯೋಜನೆಯಲ್ಲಿ ಸಾಕಷ್ಟು ಅವ್ಯವಹಾರ ಮಾಡಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಿರಿಯ ಅಭಿಯಂತರರು, ಕಾಮಗಾರಿಯ ವೆಂಡರ್ (ಏಜೆನ್ಸಿ) ಮತ್ತು ಕಂಪ್ಯೂಟರ್ ಆಪರೇಟರ್ ಇವರನ್ನು ತಕ್ಷಣವೇ ಅಮಾನತು ಮಾಡಿ, ಎರಡು ಯೋಜನೆಯಲ್ಲಿನ ಮೂರು ವರ್ಷದ ಕಾಮಗಾರಿಗಳನ್ನು ವಿಶೇಷ ತಂಡವನ್ನು ರಚಿಸಿ ತನಿಖೆ ನಡೆಸಿ ಈ ಮೇಲ್ಕಂಡ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ನಮ್ಮ ಸಮಿತಿಯು ಆಗ್ರಹಿಸುತ್ತದೆ.

**15ನೇ ಹಣಕಾಸು ಯೋಜನೆ**

**ಆದರೆ ಅದೇ ಪಂಚಾಯಿತಿಗಳಲ್ಲಿ ಸಿಸಿ ರಸ್ತೆಗಳು, ಚರಂಡಿ ಊಳೆತ್ತುವುದು, ಮೆಟ್ಲಿಂಗ್ ರಸ್ತೆಗಳು, ಸ್ಮಶಾನ ಅಭಿವೃದ್ಧಿ, ಚರಂಡಿ ನಿರ್ಮಾಣದಂತಹ ಕಾಮಗಾರಿಗಳಿಗೆ ಯಂತ್ರೋಪಕರಣಗಳನ್ನು ಉಪ ಯೋಗಿಸಿ ವಲಸೆ ಹೋದಂತ ಜನರ ಹೆಸರಲ್ಲಿ NMR ಮೊತ್ತವನ್ನು ಪಾವತಿಸಿ ಕಾಮಗಾರಿಗಳನ್ನು ಮಾಡುತ್ತಿದ್ದಾರೆ. 15ನೇ ಹಣಕಾಸು ಯೋಜನೆಯಡಿ, ಮೀಸಲಾತಿ ಅನ್ವಯ ಅನುದಾನವನ್ನು ಬಳಕೆ ಮಾಡದೆ, ಮನಸ್ಸಿಗೆ ಬಂದ ಹಾಗೆ ತಮಗಿಷ್ಟ ಬಂದ ಕಾಮಗಾರಿಗಳಿಗೆ ಹಣವನ್ನು ವಿನಿಯೋಗಿಸುತ್ತಿದ್ದಾರೆ.**

**ಹೌದು! ಈ ಯೋಜನೆಯಲ್ಲಿ ಅಧಿಕಾರಿಗಳು ಅಕ್ರಮ ಮಾಡಿರುವ ಬಹಳಷ್ಟು ಉದಾಹರಣೆಗಳು ಕಾಣಸಿಗುತ್ತವೆ, ಅದರ ಬಾಗವಾಗಿ ಸಿಂಧನೂರು ತಾಲ್ಲೂಕಿನ ಬಾದರ್ಲಿ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಿರಿಯ ಅಭಿಯಂತರರು, ಮತ್ತು ಕಂಪ್ಯೂಟರ್ ಆಪರೇಟರ್ ಇವರ ಹಸ್ತಕ್ಷೇಪದಿಂದ ಮತ್ತು ದಿವ್ಯ ನಿರ್ಲಕ್ಷ್ಯದಿಂದ ಪಂಚಾಯಿತಿಯಲ್ಲಿ ಸಾಕಷ್ಟು ಅವ್ಯವಹಾರಗಳನ್ನು ಮಾಡಿರುವ ಆರೋಪಗಳು ಕೇಳಿ ಬರುತ್ತಿವೆ.**

---

# ಮಿನಿ ನ್ಯೂಸ್

## ಪ್ಲಾಸ್ಟಿಕ್ ವಸ್ತುಗಳು ಬಳಸಿದರೆ ದಂಡ: ಶಂಭುಲಿಂಗ ದೇಸಾಯಿ

• ಉದಯವಾಹಿನಿ, ಜೇವರ್ಗಿ



ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳಾದ ಸ್ಟ್ರಿಂಗ್ ಪೈಪ್ ಪ್ಲಾಸ್ಟಿಕ್ ಪಿಕಪ್ ಚಮಚ ಗ್ಲಾಸ್ ಇವುಗಳ ಉತ್ಪಾದನೆ ಸಾಗಾಣಿಕೆ ಮಾರಾಟ, ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆದಕಾರಣ ಜೇವರ್ಗಿ ಪಟ್ಟಣದ ಸಾರ್ವಜನಿಕರು ಇವುಗಳನ್ನು ಬಳಸುವುದಾಗಲಿ ಅಥವಾ ಉತ್ಪಾದನೆ ಮಾಡುವುದಾಗಲಿ ಸಾಗಾಣಿಕೆ ಮಾಡಿದ್ದಲ್ಲಿ ದಂಡ ಮತ್ತು ನೇಮ ಅನುಸಾರ ಕ್ರಮ ಕೈಗಳಾಗುತ್ತದೆ ಪುರಸಭೆ ಮುಖ್ಯ ಅಧಿಕಾರಿ ಶಂಭುಲಿಂಗ ದೇಸಾಯಿ ತಿಳಿಸಿದ್ದಾರೆ.

ಪ್ಲಾಸ್ಟಿಕ್ ಬಳಸಿ ಅನಾರೋಗ್ಯಕ್ಕೆ ತುತ್ತಾಗಬೇಡಿ ಆರೋಗ್ಯಕರವಾದ ಜೀವನವನ್ನು ಜೀವಿಸಬೇಕಾದರೆ ಪ್ಲಾಸ್ಟಿಕ್ ನಿಷೇಧಿಸಿ ಹಾಗೂ ಜೇವರ್ಗಿ ಪಟ್ಟಣದಲ್ಲಿರುವ ಹೋಟೆಲ್ ಬಾರ್ ಅಂಡ್ ರೆಸ್ಟೋರೆಂಟ್ ಗಳಲ್ಲಿ ಪ್ಲಾಸ್ಟಿಕ್ ಉತ್ಪಾದನೆಗಳು ಬಳ ಸದಂತೆ ಮಾಲೀಕರು ನೋಡಿಕೊಳ್ಳಬೇಕು. ಒಂದು ವೇಳೆ ಪ್ಲಾಸ್ಟಿಕ್ ಉದ್ಪಾದನೆಗಳು ಬಳಸಿದ್ದು ಕಂಡು ಬಂದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು. ಪುರಸಭೆಯೊಂದಿಗೆ ಸಾರ್ವಜನಿಕರು ಸಹಕರಿಸಬೇಕೆಂದರು.

## ಕಾಂಗ್ರೆಸ್ ಕಾರ್ಪೊರೇಟರ್‌ಗೆ ಹಿಗ್ಗಾಮುಗ್ಗಾ ಥಳಿತ

• ಉದಯವಾಹಿನಿ, ಬಳ್ಳಾರಿ

ನಗರದ ರಾಯಲ್ ಸರ್ಕಲ್ ನಲ್ಲಿರುವ ಮಹಾನಗರ ಪಾಲಿಕೆ ಮುಂಭಾಗದಲ್ಲೆ ಕಾಂಗ್ರೆಸ್ ಕಾರ್ಪೊರೇಟರ್ ಗೆ ಹಿಗ್ಗಾಮುಗ್ಗಾ ಥಳಿಸಿದ ಘಟನೆ ಗುರುವಾರ ಸಂಜೆ ನಡೆದಿದೆ. ಕಾಂಗ್ರೆಸ್ ಮಹಿಳಾ ಕಾರ್ಪೊರೇಟರ್ ಮೈದುನ, ಬೆಂಬಲಿಗರು 38 ನೇ ವಾರ್ಡ್ ಪಾಲಿಕೆ ಕಾಂಗ್ರೆಸ್ ಕಾರ್ಪೊರೇಟರ್ ಕುಬೇರ ಅವರ ಮೇಲೆ ಹಲ್ಲೆ ನಡೆಸಿದ್ದಾರೆ. ಮೇಯರ್ ಚೇಂಬರ್‌ನಲ್ಲಿ ಕುಬೇರ ಅವರೊಂದಿಗೆ ಕ್ಷುಲ್ಲಕ ವಿಚಾರಕ್ಕೆ ಗಲಾಟೆ ಮಾಡಿಕೊಂಡಿದ್ದ ರವಿ 39 ನೇ ವಾರ್ಡ್ ಪಾಲಿಕೆ ಕಾಂಗ್ರೆಸ್ ಸದಸ್ಯೆ ಶಶಿಕಲಾರ ಮೈದುನ ಎಂದು ತಿಳಿದು ಬಂದಿದೆ.

ಗಲಾಟೆ ಮಾಡಿ ಪಾಲಿಕೆ ಕಚೇರಿಯಿಂದ ಹೊರಬರುತ್ತಿದ್ದಂತೆ ಕುಬೇರ ಮತ್ತು ಸ್ನೇಹಿತ ನಾಗರಾಜ ಮೇಲೆ ರವಿ ಮತ್ತು ಬೆಂಬಲಿಗರು ಹಲ್ಲೆ ಮಾಡಿದ್ದಾರೆ. ಘಟನೆಯ ವಿಡಿಯೋ ಸಿಸಿ ಕೆಮರಾದಲ್ಲಿ ಸೆರೆಯಾಗಿದೆ. ಹಲ್ಲೆ ಬಳಿಕ ವಿಮ್ಸ್‌ನ ಟ್ರಾಮಾ ಕೇರ್ ಗೆ ಕುಬೇರ ದಾಖಲಾಗಿದ್ದು, ಅಲ್ಲಿಯೂ ಕುಬೇರ ಮತ್ತವರ ಸ್ನೇಹಿತರಾದ ನಾಗರಾಜು, ವೀರೇಂದ್ರ ಮೇಲೆ ಗುಂಪು ಕಟ್ಟಿಕೊಂಡು ಬಂದು ಮತ್ತೆ ರವಿ ಆ್ಯಂಡ್ ಗ್ಯಾಂಗ್ ಹಲ್ಲೆ ನಡೆಸಿದ್ದಾರೆ ಎಂದು ಆರೋಪ ಮಾಡ ಲಾಗಿದೆ. ಹಲ್ಲೆ ಹಿಂದೆ ಹಳೆ ದ್ವೇಷದ ಶಂಕೆ ಇದ್ದು , ಗಾಂಧಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

## ಗರುಡ ಗ್ಯಾಂಗ್‌ಗೆ ಹಣಕಾಸಿನ ನೆರವು ಉಪ್ಪಿನಂಗಡಿಯ ಯುವತಿ ಬಂಧನ

• ಉದಯವಾಹಿನಿ, ಉಡುಪಿ

ಕಾಪು ಗರುಡ ಗ್ಯಾಂಗ್ ಸದಸ್ಯರಿಗೆ ಆರ್ಥಿಕ ನೆರವು ನೀಡಿದ್ದ ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿಯ ಆರೋಪಿಯೊಬ್ಬನ ಆಪ್ತ ಯುವತಿಯನ್ನು ಉಡುಪಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿ ದಕ್ಷಿಣ ಕನ್ನಡ ಜಿಲ್ಲೆಯ ಉಪ್ಪಿನಂಗಡಿ ಕರ್ವೇಲು, ಬಾನೊಟ್ಟು ನಿ ವಾಸಿ ಝುಕರಿಯಾ ಪತ್ನಿ ಸಫಾರ ಯಾನೆ ಸಾಜಿದ (21) ಎಂದು ಗುರುತಿಸಲಾಗಿದೆ. ಗರುಡ ಗ್ಯಾಂಗ್ ಸದಸ್ಯರಿಗೆ ಸಫಾರ ಆರ್ಥಿಕ ನೆರವು, ಆಶ್ರಯ ವ್ಯವಸ್ಥೆ ಮಾಡಿದ್ದಳು. ಗ್ಯಾಂಗ್ ಸದಸ್ಯರಿಗೆ ಮೊಬೈಲ್ ಫೋನ್ ನೀ ಡಿ ಹಣ ವರ್ಗಾವಣೆ ಮಾಡಿರುವ ಆರೋಪವೂ ಸಫಾರ ಯಾನೆ ಸಾಜಿದ ಮೇಲಿದೆ ಎಂದು ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಅರುಣ್ ಕೆ. ತಿಳಿಸಿದ್ದಾರೆ. ಸದ್ಯ ಸಫಾರ ಯಾನೆ ಸಾಜಿದಯನ್ನು ಮಂಗಳೂರಿನ ಕಾರಾಗೃಹದಲ್ಲಿ ಇರಿಸಲಾಗಿದೆ.

## ಹಾಡಹಗಲೇ ಕಳ್ಳತನ ಮಾಡಿದ ಆರೋಪಿಯ ಸೆರೆ, ಸೊತ್ತು ವಶ

• ಉದಯವಾಹಿನಿ, ಚಿತ್ತಾಪುರ

ತಾಲ್ಲೂಕಿನ ಕಮರವಾಡಿ ಗ್ರಾಮದಲ್ಲಿ ಕಳೆದ ವಾರ ಹಾಡುಹಗಲೇ ಮನೆಯ ಮೇಲ್ಛಾವಣಿ ತೆಗೆದು ಕಳ್ಳತನ ಮಾಡಿದ ಆರೋಪಿಯನ್ನು ಪೊಲಿಸ್‌ರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಮರವಾಡಿಯ ಶಿವಬಸಪ್ಪ ಅಮಕರ್ ಎಂಬುವನನ್ನು ಬಂಧಿಸಿ ಕಳುವಾದ ಚಿನ್ನ ಸಮೇತ ವಸ್ತುಗಳು ಪೊಲಿಸ್‌ರು ವಶಪಡಿಸಿಕೊಂಡಿದ್ದಾರೆ.

ಕಳೆದ ಜೂನ್ 28ರಂದು ಗ್ರಾಮದ ಮಲ್ಲಪ್ಪ ಮಾಂಗ್ ಎಂಬವರ ಮನೆ ಕಳ್ಳತನವಾಗಿತ್ತು. ಮೇಲ್ಛಾವಣಿ ಕಿತ್ತು 45 ಗ್ರಾಂ ಚಿನ್ನ ಹಾಗೂ 5 ಸಾವಿರ ರೂ.ಗಳ ನಗದು ಕಳ್ಳರು ದೋಚಿದ್ದರು. ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸಲು, ಅಪರ ಪೊಲೀಸ್ ಅಧೀಕ್ಷಕ ಎನ್ ಶ್ರೀನಿಧಿ, ಶಹಾಬಾದ್ ಡಿವೈಎಸ್ಪಿ ಶಂಕರಗೌಡ ಪಾಟೀಲ್, ಸಿಪಿಐ ಚಂದ್ರಶೇಖರ್ ತಿಗಡಿ ಅವರ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ಕೈಗೊಂಡರು. ಪಿಎಸ್‌ಐಗಳಾದ ಶ್ರೀಶೈಲ್ ಅಂಬಾಟಿ, ಚಂದ್ರಾಮಪ್ಪ, ಸಿಬ್ಬಂದಿಗಳಾದ ನಾಗೇಂದ್ರ, ಬಸವರಾಜ್, ಸವಿಕುಮಾರ್, ಅಯ್ಯಣ್ಣ, ಬಸವರಾಜ್, ಸಿದ್ದರಾಮೇಶ್, ಈರೇಶ್, ಮಂಜುನಾಥ್ ಅವರನ್ನೊಳಗೊಂಡ ತಂಡವನ್ನು ರಚಿಸಿ ಆರೋಪಿ ಕಮರವಾಡಿಯ ಶಿವಬಸಪ್ಪ ಅಮಕರ್ ಎಂಬವನನ್ನು ಬಂಧಿಸಿ ಒಟ್ಟು 1,30,000 ರೂ. ಮೌಲ್ಯದ ಚಿನ್ನದ ಆಭರಣಗಳನ್ನು ಜಪ್ತಿಪಡಿಸಿಕೊಂಡು ಆರೋಪಿತನಿಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

## ಕುಡಿಯುವ ನೀರಿನ ಬಾವಿ; ಅನುದಾನ ಮಣ್ಣುಪಾಲಾಗುವ ಆತಂಕ

• ಉದಯವಾಹಿನಿ, ಸಾಗರ

ಲಕ್ಷಾಂತರ ರೂಪಾಯಿ ಖರ್ಚು ಮಾಡಿ ತೆಗೆದಿರುವ ಕುಡಿಯುವ ನೀರಿನ ಬಾವಿಯು ಕಾಮಗಾರಿಯನ್ನು ಪೂರ್ಣಗೊಳಿಸದ ಹಿನ್ನೆಲೆಯಲ್ಲಿ ಈ ವರ್ಷದ ಮಳೆಗೆ ಮಣ್ಣು ಕುಸಿದು ಬಾವಿಯೇ ಮಾಯವಾಗುವ ಅಪಾಯ ತಾಲ್ಲೂಕಿನ ಕುದರೂರು ಗ್ರಾಮ ಪಂಚಾಯ್ತಿಯಲ್ಲಿ ಎದುರಾಗಿದೆ.ಇಲ್ಲಿನ ಹೊನಗೋಡು ಎಂಬಲ್ಲಿ ನಿರ್ಮಾಣ ಹಂತದಲ್ಲಿದ್ದ ಸಾರ್ವಜನಿಕ ಕುಡಿಯುವ ನೀರಿನ ಬಾವಿ ಅರ್ಧಂಬರ್ಧ ಕಾಮಗಾರಿ ಮಾಡಿ ಹಾಗೆಯೇ ಬಿಟ್ಟಿರುವ ಕುದರೂರು ಗ್ರಾಮ ಪಂಚಾಯ್ತಿಯ ನಿರ್ಲಕ್ಷ್ಯದಿಂದ ಪೂರ್ಣ ಅನುದಾನ ವ್ಯರ್ಥವಾಗುತ್ತದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ನಡುವೆ ಬಾವಿಯ ಸುತ್ತಮುತ್ತಲ ಜಾಗದಲ್ಲಿ ಭೂ ಕುಸಿತದ ಕಾರಣ ಬಾವಿಯೇ ಕಣ್ಮರೆಯಾಗುವ ಸಾಧ್ಯತೆ ಹೆಚ್ಚಿದೆ.

# ಅಮೆರಿಕ ಸೇನೆಗೆ ಶೇಕಡ 25 ರೋಬೋಟ್ ಸೈನಿಕರು

## ಮುಂದಿನ 10 ವರ್ಷಗಳಲ್ಲಿ ಎಐ ತಂತ್ರಜ್ಞಾನದ ಕಮಾಲ್, ಎಐ ತಂತ್ರಜ್ಞಾನ ಆಧರಿತ ರೋಬೋಟ್‌ಗಳು ಮಾನವನ ರೂಪದಲ್ಲೇ ಇರೋದಿಲ್ಲ



ಸುದೀರ್ಘ ಕಾಲ ಕಾರ್ಯ

**ವಾಷಿಂಗ್ಟನ್:** ವಿಜ್ಞಾನ ಲೋಕದಲ್ಲಿ ಯಾವುದೇ ಹೊಸ ತಂತ್ರಜ್ಞಾನ ಆವಿಷ್ಕಾರವಾದರೂ ಮೊದಲು ಅದನ್ನ ಸೇನೆಯಲ್ಲಿ ಅಳವಡಿಕೆ ಮಾಡಿಕೊಳ್ಳೋಕೆ ಸರ್ಕಾರ ಗಳು ಉತ್ಸಾಹ ತೋರುತ್ತವೆ! ಅಣು ಬಾಂಬ್‌ನಿಂದ ಮೊದಲುಗೊಂಡು ಕೃತಕ ಬುದ್ಧಿಮತ್ತೆವರೆಗೆ ಎಲ್ಲಾ ತಂತ್ರಜ್ಞಾನಗಳೂ ಸೇನೆಯ ಗಮನ ಸೆಳೆಯುತ್ತವೆ.

ಹೀಗಾಗಿ, ಸದ್ಯ ಭಾರೀ ಚರ್ಚೆಯಲ್ಲಿರುವ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಬಳಕೆ ಮಾಡಿಕೊಂಡು ಸೇನೆಯ ಬಲವರ್ಧನೆ ಮಾಡುವ ಚಿಂತನೆ ಅಮೆ ರಿಕದಲ್ಲಿ ನಡೆಯುತ್ತಿದೆ. ಅದರಲ್ಲೂ ಎಐ ತಂತ್ರಜ್ಞಾನ ಆಧರಿತ ರೋಬೋಟ್‌ಗಳನ್ನ ಸೇನೆಗೆ ಪರಿಚಯಿಸಲು ಸಿದ್ಧತೆ ನಡೆಯುತ್ತಿದೆ. ಈ ಕುರಿತಾಗಿ ಪ್ರತಿಕ್ರಿಯೆ ನೀಡಿರುವ ಅಮೆ ರಿಕ ಸೇನೆಯ ನಿವೃತ್ತ ಜನರಲ್ ಮಾರ್ಕ್ ಮಿಲ್ಲೆ, ಮುಂದಿನ 10 ರಿಂದ 15 ವರ್ಷಗಳಲ್ಲಿ ಅಮೆರಿಕ ಸೇನೆಯ ಒಟ್ಟು ಸೈನಿಕರ ಪೈಕಿ ಶೇ. 25 ರಷ್ಟು ಸೈನಿಕರು ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಹೊಂದಿರುವ ರೋಬೋಟ್‌ಗಳನ್ನೇ ಕೆಲಸಕ್ಕೆ ನಿಯೋಜಿಸುವ ಸಾಧ್ಯತೆಗಳು ಇವೆ ಎಂದಿದ್ದಾರೆ. ಸೈನ್ಯದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧರಿತ ರೋಬೋಟ್‌ಗಳನ್ನ ಕೆಲಸಕ್ಕೆ ನಿಯೋಜನೆ ಮಾಡಿದರೆ ಹಲವು ರೀತಿಯ ಅನುಕೂಲಗಳಿವೆ. ಅತ್ಯಂತ ಕ್ಲಿಷ್ಟಕರ, ಸಂಕೀರ್ಣವಾದ ಮಿಲಿಟರಿ ಆಪರೇಷನ್‌ಗಳನ್ನ ರೋಬೋಟ್‌ಗಳು ಸಮರ್ಥವಾಗಿ ನಿಭಾಯಿಸಬಲ್ಲವು. ಎಐ ತಂತ್ರಜ್ಞಾನ ಆಧರಿತ ರೋಬೋಟ್‌ಗಳು ಮಾನವನಿಗಿಂತಲೂ ಅತ್ಯಂತ ನಿಖರವಾಗಿ ಹಾಗೂ ಪರಿಣಾಮಕಾರಿಯಾಗಿ ಸಮಸ್ಯೆಗಳನ್ನ ಎದುರಿಸಬಹುದು. ಜೊತೆಯಲ್ಲೇ ಎಂಥದ್ದೇ ಅಹಿತಕರ ವಾತಾವರಣದಲ್ಲೂ ಸುದೀರ್ಘ ಕಾಲ ಕಾರ್ಯ ನಿರ್ವಹಿಸಬಲ್ಲವು. ಈ ಮೂಲಕ ಸಾಂಪ್ರದಾಯಿಕ ಯುದ್ಧದ ಚಿತ್ರಣವನ್ನೇ ಬದಲಾಯಿಸಬಹುದು.

### ಇದಕ್ಕೆ ಕಾರಣ ಎಐ ತಂತ್ರಜ್ಞಾನ

**ಹಾಲಿವುಡ್ ಸಿನಿಮಾಗಳಲ್ಲಿ ಕಾಣ ಸಿಗುವ ರೋಬೋಟ್ ಸೈನಿಕರು, ಯಂತ್ರ ಮಾನವರ ಯುದ್ಧಗಳು ಕಾಲ್ಪನಿಕ ಏನಲ್ಲ! ಕೆಲವೇ ವರ್ಷಗಳಲ್ಲಿ ಇದು ವಾಸ್ತವ ಆಗಲಿದೆ. ಇದಕ್ಕೆ ಕಾರಣ ಎಐ ತಂತ್ರಜ್ಞಾನ! ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ರಂಗದಲ್ಲಿ ಮಹತ್ವದ ಬೆಳವಣಿಗೆಗಳು ಆಗುತ್ತಿವೆ. ತಂತ್ರಜ್ಞಾನ ಅಭಿವೃದ್ಧಿ ಹೊಂದುತ್ತಿದೆ. ಇದರ ಸಂಪೂರ್ಣ ಲಾಭ ಪಡೆಯಲು ಮುಂದಾಗಿರುವ ಸೇನೆ, ರೋಬೋಟ್ ಸೈನಿಕರ ದೊಡ್ಡ ಪಡೆಯನ್ನೇ ಕಟ್ಟಲು ನಿರ್ಧರಿಸಿದೆ ಎಂಬ ಮಾಹಿತಿ ಇದೆ.**

- **ಶಸ್ತ್ರಸಜ್ಜಿತ ಡ್ರೋನ್‌ಗಳು, ರೋಬೋಟಿಕ್ ನಾಯಿಗಳ ರೂಪದಲ್ಲೂ ಸೇನೆಯಲ್ಲಿ ಸೇವೆ**
- **ಅಮೆರಿಕದ ರಕ್ಷಣಾ ವಲಯದ ಉನ್ನತೀಕರಣಕ್ಕೆ ಎಐ ತಂತ್ರಜ್ಞಾನದ ಮಹತ್ವದ ಕೊಡುಗೆ**

ದಿನೇ ದಿನೇ ರೋಬೋಟ್‌ಗಳನ್ನ ಸೇನೆಗೆ ನಿಯೋಜಿಸುವ ಸಂಖ್ಯೆ ಹೆಚ್ಚಾದಷ್ಟೂ ಮಾನವರ ನಿಯೋಜನೆ ಕಡಿಮೆಯಾಗುತ್ತಾ ಹೋಗುತ್ತದೆ. ಈ ಕುರಿತಾಗಿ ಅಮೆರಿಕ ಸೇನೆ ಹಲವು ದಶಕಗಳಿಂದ ರೋಬೋಟಿಕ್ ಹಾಗೂ ಎಐ ತಂತ್ರಜ್ಞಾನದ ಕುರಿತಾಗಿ ಅಧ್ಯಯನ ನಡೆಸುತ್ತಿದೆ ಎಂದು ಮಾರ್ಕ್ ಮಿಲ್ಲೆ ಅವರು ಹೇಳಿದ್ದಾರೆ.

ಎಐ ತಂತ್ರಜ್ಞಾನ ಆಧರಿತ ರೋಬೋಟ್‌ಗಳು ಎಂದ ಮಾತ್ರಕ್ಕೆ ಅವು ಮಾನವನ ರೂಪದಲ್ಲೇ ಇರುತ್ತವೆ ಎಂದು ಭಾವಿಸಬೇಕಿಲ್ಲ. ಶಸ್ತ್ರಸಜ್ಜಿತ ಡ್ರೋನ್‌ಗಳು, ರೋಬೋಟಿಕ್ ನಾಯಿಗಳು.. ಹೀಗೆ ಹಲವು ವಿಧದ ರೋಬೋಟ್‌ಗಳನ್ನ ನಿಯೋಜನೆ ಮಾಡುವ ಉದ್ದೇಶವಿದೆ. ಎಐ ತಂತ್ರಜ್ಞಾನ ಅಭಿವೃದ್ಧಿ ಹೊಂದಿದಷ್ಟೂ ರೋಬೋಟಿಕ್ ತಂತ್ರಜ್ಞಾನಕ್ಕೆ ನೆರವಾಗುತ್ತಿದೆ. ಇದು ಅಮೆರಿಕದ ರಕ್ಷಣಾ ವಲಯದ ಉನ್ನತೀಕರಣಕ್ಕೆ ಮಹತ್ವದ ಕೊಡುಗೆ ನೀಡುತ್ತಿದೆ ಎಂದು ಮಿಲ್ಲೆ ವಿವರಿಸಿದ್ದಾರೆ. ಮಾನವನ ಜೊತೆಯಲ್ಲೇ ಯಂತ್ರ ಮಾನವರು ಕಾರ್ಯಾಚರಣೆ ನಡೆಸುವ ಮಾದರಿಯನ್ನೂ ಸೇನೆ ಅಭಿವೃದ್ಧಿಪಡಿಸುತ್ತಿದೆ. ಇದು ಮಾನವ ಹಾಗೂ ಯಂತ್ರದ ಸಮ್ಮಿಶ್ರಣ ಮಾದರಿಯಾಗಿದೆ. ಅಮೆರಿಕ ವಾಯು ಪಡೆ ಕೂಡಾ ಈ ತಂತ್ರಜ್ಞಾನದ ಸಂಶೋಧನೆಯಲ್ಲಿ ತೊಡಗಿದೆ.

ಮಾನವ ಪೈಲಟ್‌ಗಳ ಜೊತೆಯಲ್ಲೇ ವಿಮಾನದಲ್ಲಿ ಗಗನಕ್ಕೆ ಹಾರುವ ರೋಬೋಟ್‌ಗಳು, ಬೇಹುಗಾರಿಕಾ ಮಾಹಿತಿ ಕಲೆ ಹಾಕುವ ಜೊತೆಯಲ್ಲೇ ಶತ್ರು ರಾಷ್ಟ್ರಗಳ ಎಲೆಕ್ಟ್ರಾನಿಕ್ ಉಪಕರಣಗಳನ್ನು ನಾಶ ಮಾಡುವ ಸಾಮರ್ಥ್ಯ ಹೊಂದಿರುತ್ತವೆ. ಇನ್ನು ಅಮೆರಿಕ ನೌಕಾ ಪಡೆ ಕೂಡಾ ಮಾನವ ರಹಿತ ಜಲಾಂತರ್ಗಾಮಿಗಳಲ್ಲಿ ಈ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಲು ಮುಂದಾಗಿದೆ.

# ರಷ್ಯಾ ವಿರುದ್ಧದ ನಿರ್ಣಯದಿಂದ ಹೊರಗುಳಿದ ಭಾರತ



**ವಿಶ್ವಸಂಸ್ಥೆ:** ಉಕ್ರೇನ್ ವಿರುದ್ಧ ರಷ್ಯಾ ತನ್ನ ಆಕ್ರಮಣವನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ಜಪೋರಿಝಿಯಾ ಪರಮಾಣು ವಿದ್ಯುತ್ ಸ್ಥಾವರದಿಂದ ತನ್ನ ಮಿಲಿಟರಿ, ಇತರ ಅನಧಿಕೃತ ಸಿಬ್ಬಂದಿಯನ್ನು ತುರ್ತಾಗಿ ಹಿಂತೆಗೆದು ಕೊಳ್ಳಬೇಕು ಎಂದು ಒತ್ತಾಯಿಸುವ ನಿರ್ಣಯಕ್ಕೆ ಭಾರತವು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಗೈರು ಹಾಜರಾಗಿದೆ. ಭಾರತ, ಬಾಂಗ್ಲಾದೇಶ, ಭೂತಾನ್, ಚೀನಾ, ಈಜಿಪ್ಟ್, ನೇಪಾಳ, ಪಾಕಿಸ್ತಾನ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ, ಶ್ರೀಲಂಕಾ ಸೇರಿದಂತೆ 193 ಸದಸ್ಯರ ಯುಎನ್ ಜನರಲ್ ಅಸೆಂಬ್ಲಿಯು ಪರವಾಗಿ 99 ಮತಗಳು, ವಿರುದ್ಧ ಒಂಬತ್ತು ಮತಗಳು ಮತ್ತು 60 ಮಂದಿ ಗೈರು ಹಾಜರಾಗುವ ಮೂಲಕ ನಿರ್ಣಯವನ್ನು ಅಂಗೀಕರಿಸಲಾಯಿತು. ನಿರ್ಣಯದ ವಿರುದ್ಧ ಮತ ಚಲಾಯಿಸಿದವರಲ್ಲಿ ಬೆಲಾರಸ್, ಕ್ಯೂಬಾ, ಉತ್ತರ ಕೊರಿಯಾ, ರಷ್ಯಾ, ಸಿರಿಯಾ ಸೇರಿವೆ.

ಜಪೋರಿಝಿಯಾ ಪರಮಾಣು ಸ್ಥಾವರ ಸೇರಿ ದಂತೆ ಉಕ್ರೇನ್‌ನ ಪರಮಾಣು ಸೌಲಭ್ಯಗಳ ಸುರಕ್ಷತೆ ಮತ್ತು ಭದ್ರತೆ ಎಂಬ ಶೀರ್ಷಿಕೆಯ ನಿರ್ಣಯವು ರಷ್ಯಾವು ಉಕ್ರೇನ್ ವಿರುದ್ಧದ ತನ್ನ ಆಕ್ರಮಣವನ್ನು ತಕ್ಷಣವೇ ನಿಲ್ಲಿಸಬೇಕು ಮತ್ತು ತನ್ನ ಎಲ್ಲಾ ಮಿಲಿಟರಿ ಪಡೆಗಳನ್ನು ತನ್ನ ಅಂತರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಗಡಿಯೊಳಗಿನ ಉಕ್ರೇನ್ ಪ್ರದೇಶದಿಂದ ಬೇಷರತ್ತಾಗಿ ಹಿಂತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿತು.

ಜಪೋರಿಝಿಯಾ ಪರಮಾಣು ಸ್ಥಾವರದಿಂದ ರಷ್ಯಾ ತನ್ನ ಮಿಲಿಟರಿ ಮತ್ತು ಇತರ ಅನಧಿಕೃತ ಸಿಬ್ಬಂದಿಯನ್ನು ತುರ್ತಾಗಿ ಹಿಂತೆಗೆದುಕೊಳ್ಳಬೇಕು, ಅದರ ಸುರಕ್ಷತೆ, ಭದ್ರತೆಯನ್ನು ಖಚಿತಪಡಿಸಿಕೊಳ್ಳಲು ಉಕ್ರೇನ್‌ನ ಸಾರ್ವಭೌಮ ಮತ್ತು ಸಮರ್ಥ ಅಧಿಕಾರಿಗಳ ಸಂಪೂರ್ಣ ನಿಯಂತ್ರಣಕ್ಕೆ ಸ್ಥಾವರವನ್ನು ತಕ್ಷಣವೇ ಹಿಂತಿರುಗಿಸಬೇಕು ಎಂದು ಅದು ಒತ್ತಾಯಿಸಿತು.

ಉಕ್ರೇನ್‌ನ ನಿರ್ಣಾಯಕ ಇಂಧನ ಮೂಲ ಸೌಕರ್ಯದ ವಿರುದ್ಧ ರಷ್ಯಾದಿಂದ ದಾಳಿಗಳನ್ನು ತಕ್ಷಣವೇ ನಿಲ್ಲಿಸಲು ಇದು ಕರೆ ನೀಡಿತು, ಇದು ಉಕ್ರೇನ್‌ನ ಎಲ್ಲಾ ಪರಮಾಣು ಸೌಲಭ್ಯಗಳಲ್ಲಿ ಪರಮಾಣು ಅಪಘಾತ ಅಥವಾ ಘಟನೆಯ ಅಪಾಯವನ್ನು ಹೆಚ್ಚಿಸುತ್ತದೆ. ಕರಡು ನಿರ್ಣಯವನ್ನು ಉಕ್ರೇನ್ ಪರಿಚಯಿಸಿತು ಮತ್ತು ಫ್ರಾನ್ಸ್, ಜರ್ಮನಿ ಮತ್ತು ಯುನೈಟೆಡ್ ಸ್ಟೇಟ್ಸ್ ಸೇರಿ ದಂತೆ 50 ಸದಸ್ಯ ರಾಷ್ಟ್ರಗಳು ಪ್ರಾಯೋಜಿಸಿದವು.

**ನಿರ್ಣಯದ ಮೇಲಿನ ಮತದಾನದ ಮೊದಲು ಮತದಾನದ ವಿವರಣೆಯಲ್ಲಿ, ರಷ್ಯಾದ ಮೊದಲ ಉಪ ಖಾಯಂ ಪ್ರತಿನಿಧಿ ಡಿಮಿಟ್ರಿ ಪಾಲಿಯಾನ್ಸ್ಕಿ ಅವರು ಜನರಲ್ ಅಸೆಂಬ್ಲಿಯು ದುರದೃಷ್ಟವಶಾತ್ ಒಮ್ಮತವಿಲ್ಲದ, ರಾಜಕೀಯಗೊಳಿಸಿದ ಮತ್ತು ವಾಸ್ತವವನ್ನು ಪ್ರತಿಬಿಂಬಿಸದ ಅನೇಕ ದಾಖಲೆಗಳನ್ನು ಅಳವಡಿಸಿಕೊಂಡಿದೆ ಎಂದು ಹೇಳಿದರು.**

ಉಕ್ರೇನ್ನ ಝಪೋರಿಝಿಯಾ ಪರಮಾಣು ವಿದ್ಯುತ್ ಸ್ಥಾವರವನ್ನು ಉಕ್ರೇನ್ನ ಸಾರ್ವಭೌಮ ಮತ್ತು ಸಮರ್ಥ ಅಧಿಕಾರಿಗಳ ಸಂಪೂರ್ಣ ನಿಯಂತ್ರಣಕ್ಕೆ ಹಿಂದಿರುಗಿಸುವವರೆಗೆ, ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ ಬೆಂಬಲ ಮತ್ತು ಸಹಾಯ ಮಿಷನ್ ಅನ್ನು ಝಪೋರಿಝಿಯಾಗೆ ಎಲ್ಲಾ ಪ್ರದೇಶಗಳಿಗೆ ಸಮಯೋಚಿತ ಮತ್ತು ಪೂರ್ಣ ಪ್ರವೇಶದೊಂದಿಗೆ ಒದಗಿಸುವಂತೆ ಅದು ಮಾಸ್ಕೋಗೆ ಕರೆ ನೀಡಿತು. ಸೈಟ್ನಲ್ಲಿ ಪರಮಾಣು ಸುರಕ್ಷತೆ ಮತ್ತು ಭದ್ರತಾ ಪರಿಸ್ಥಿತಿಯ ಬಗ್ಗೆ ಸಂಪೂರ್ಣವಾಗಿ ವರದಿ ಮಾಡಲು ಏಜೆನ್ಸಿಯನ್ನು ಅನುಮತಿಸಲು ಪರಮಾಣು ಸುರಕ್ಷತೆ ಮತ್ತು ಭದ್ರತೆಗೆ ಮುಖ್ಯವಾದ ಸ್ಥಾವರವಾಗಿದೆ.

# ಉಕ್ರೇನ್ ವಿರುದ್ಧದ ರಷ್ಯಾ ಸಮರದಲ್ಲಿ ಚೀನಾ ಪ್ರಭಾವ



**ವಾಷಿಂಗ್ಟನ್:** ರಷ್ಯಾ, ಚೀನಾ ನಡುವಣ ಬಾಂಧವ್ಯ ಬಲಗೊಳ್ಳುತ್ತಿದೆ. ಉಕ್ರೇನ್ ವಿರುದ್ಧದ ರಷ್ಯಾದ ಸಮರದಲ್ಲಿ 'ನಿರ್ಣಾಯಕ ಪಾತ್ರ' ವಹಿಸಲು ಚೀನಾ ಮುಂದಾಗುತ್ತಿದೆ. ಈ ಬೆಳವಣಿಗೆಗಳ ಕುರಿತು 32 ರಾಷ್ಟ್ರಗಳ ಸದಸ್ಯತ್ವದ ಮೈತ್ರಿಕೂಟ 'ನ್ಯಾಟೊ' ತೀವ್ರ ಕಳವಳ ವ್ಯಕ್ತಪಡಿಸಿದೆ. ಉತ್ತರ ಅಂಟ್ಲಾಟಿಕ್ ಮಂಡಳಿಯ (ಎನ್‌ಸಿ) 75ನೇ ವಾರ್ಷಿಕೋತ್ಸವ ಕಾರ್ಯಕ್ರಮಕ್ಕಾಗಿ ಇಲ್ಲಿ ಸೇರಿದ್ದ ನ್ಯಾಟೊ ಸದಸ್ಯ ರಾಷ್ಟ್ರಗಳ ಮುಖಂಡರು ಈ ವಿಷಯ ಚರ್ಚಿಸಿದ್ದು, ಜಂಟಿ ಹೇಳಿಕೆಯನ್ನೂ ಬಿಡುಗಡೆ ಮಾಡಿದ್ದಾರೆ.

'ಚೀನಾದ ಮಹಾತ್ವಾಕಾಂಕ್ಷೆ ಮತ್ತು ದಬ್ಬಾಳಿಕೆಯ ನೀತಿಗಳು ನಮ್ಮ ಹಿತಾಸಕ್ತಿ, ಭದ್ರತೆ, ಮೌಲ್ಯಗಳಿಗೆ ಸವಾಲು ಒಡ್ಡುತ್ತಿವೆ. ರಷ್ಯಾ–ಚೀನಾ ಸಂಬಂಧ ಗಟ್ಟಿಯಾಗುತ್ತಿರುವುದು ನಿಯಮಾಧಾರಿತ ಅಂತರ ರಾಷ್ಟ್ರೀಯ ವ್ಯವಸ್ಥೆ ಬದಲಿಸುವ ಯತ್ನವೂ ಆಗಿದೆ' ಎಂದು ಇಲ್ಲಿ ನಡೆದ ಮುಖಂಡರ ಶೃಂಗಸಭೆ ನಿರ್ಣಯವನ್ನು ಅಂಗೀಕರಿಸಿದೆ. ಸದ್ಯ ರಷ್ಯಾಕ್ಕೆ ಚೀನಾ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದೆ. ಜೊತೆಗೆ 'ಗಡಿಯಿಲ್ಲದ' ಪಾಲುದಾರಿಕೆ ಚಟುವಟಿಕೆಗಳಿಂದ ಉಕ್ರೇನ್ ವಿರುದ್ಧದ ಯುದ್ಧದಲ್ಲಿ 'ನಿರ್ಣಾಯಕ ಪಾತ್ರ' ವಹಿಸಲೂ ಮುಂದಾಗುತ್ತಿದೆ. ಇದು, ರಷ್ಯಾ ತನ್ನ ನೆರೆ ರಾಷ್ಟ್ರಗಳ ಮೇಲೆ ಹೆಚ್ಚಿನ ಬೆದರಿಕೆಯೊಡ್ಡಲು ಕಾರಣವಾಗಿದೆ' ಎಂದೂ ನ್ಯಾಟೊ ಆತಂಕಪಟ್ಟಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯ ರಾಷ್ಟ್ರವಾಗಿ ಚೀನಾ, ವಿಶ್ವಸಂಸ್ಥೆಯ ಧ್ಯೇಯೋದ್ದೇಶವನ್ನು ಎತ್ತಿಹಿಡಿಯುವ ಜವಾಬ್ದಾರಿಯನ್ನು ನಿಭಾಯಿಸಬೇಕು ಹಾಗೂ ಯುದ್ಧಕ್ಕೆ ಪೂರಕವಾಗಿ ರಷ್ಯಾಗೆ ನೀಡಲಾಗುತ್ತಿರುವ ಎಲ್ಲಾ ರೀತಿಯ ಪರಿಕರ, ಶಸ್ತ್ರಾಸ್ತ್ರ ಹಾಗೂ ರಾಜಕೀಯ ಬೆಂಬಲವನ್ನು ತಡೆಹಿಡಿಯಬೇಕು ಎಂದು ಒತ್ತಾಯಿಸಿದೆ.

ಉಕ್ರೇನ್‌ನ ಮೇಲೆ ರಷ್ಯಾ ಪೂರ್ಣಪ್ರಮಾಣದಲ್ಲಿ ದಾಳಿ ನಡೆಸಿರುವುದು ಯೂರೋಪ್–ಅಟ್ಲಾಂಟಿಕ್ ವಲಯದಲ್ಲಿ ಶಾಂತಿ, ಭದ್ರತೆಯ ವಾತಾವರಣವನ್ನು ಛಿದ್ರಗೊಳಿಸಿದೆ. ಜಾಗತಿಕ ಭದ್ರತೆಗೂ ದಕ್ಕೆ ಉಂಟುಮಾಡಿದೆ. ಮೈತ್ರಿಕೂಟದ ಭದ್ರತೆಗೂ ರಷ್ಯಾ ನೇರ ಬೆದರಿಕೆಯೊಡ್ಡುತ್ತಿದೆ ಎಂದು ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ.

ಇದಕ್ಕೂ ಮುನ್ನ ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟಾಲ್ಟೆನ್‌ಬರ್ಗ್, 'ನ್ಯಾಟೊ ಮೈತ್ರಿಕೂಟವು ಇಂಡೊ–ಪೆಸಿಫಿಕ್ ವಲಯದ ಜೊತೆಗಿನ ಪಾಲುದಾರಿಕೆಗೆ ಬದ್ಧವಾಗಿದೆ. ಉಕ್ರೇನ್‌ಗೆ ಬೆಂಬಲವು ಮುಂದುವರಿಯಲಿದೆ. ಅದು ಭದ್ರತೆ ಹಿತಾಸಕ್ತಿಯ ರಕ್ಷಣೆಯಾಗಿದೆ' ಎಂದು ಹೇಳಿದರು.


# ನಟ ಅಕ್ಷಯ್ ಕುಮಾರ್‌ಗೆ ಕೋವಿಡ್

### ಅನಂತ್ ರಾಧಿಕಾ ವಿವಾಹಕ್ಕೆ ಗೈರು

**ಮುಂಬೈ:** ಬಾಲಿವುಡ್ ನಟ ಅಕ್ಷಯ್ ಕುಮಾರ್ ಅವರಿಗೆ ಕೋವಿಡ್–19 ದೃಢಪಟ್ಟಿದ್ದು, ಮನೆಯಲ್ಲಿಯೇ ಪ್ರತ್ಯೇಕ ವಾಸದಲ್ಲಿ ಉಳಿದು ಚಿಕಿತ್ಸೆ ಪಡೆಯುತ್ತಿದ್ದಾರೆ. ಹೀಗಾಗಿ ಅವರು ಉದ್ಯಮಿ ಮುಕೇಶ್ ಅಂಬಾನಿ ಪುತ್ರ ಅನಂತ್ ಅಂಬಾನಿ ಹಾಗೂ ರಾಧಿಕಾ ಮರ್ಚಂಟ್ ಅವರ ಮದುವೆ ಗೈರಾಗಲಿದ್ದಾರೆ ಎಂದು ವರದಿಯಾಗಿದೆ. ಮುಂಬೈನ ಜಿಯೊ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ನಲ್ಲಿ ಶುಕ್ರವಾರ ರಾತ್ರಿ 8ಕ್ಕೆ ಅನಂತ್–ರಾಧಿಕಾ ವಿವಾಹ ನಡೆದಿದೆ.

ಅನಂತ್ ಅವರು ಅಕ್ಷಯ್ ಅವರನ್ನು ಸ್ವತಃ ಭೇಟಿಯಾಗಿ ಆಮಂತ್ರಣ ನೀಡಿದ್ದರು. ಹೀಗಾಗಿ, ವಿವಾಹ ಸಮಾರಂಭದಲ್ಲಿ ಅಕ್ಷಯ್ ಭಾಗವಹಿಸುವುದು ನಿಚ್ಚಳವಾಗಿತ್ತು. ಆದರೆ, ಕೋವಿ ಡ್‌ನಿಂದಾಗಿ ಅದಕ್ಕೆ ತೊಡಕಾಗಿದೆ.

ವಿವಾಹ ಸಮಾರಂಭದಲ್ಲಿ ಪಾಲ್ಗೊಳ್ಳಲು ಡಬ್ಲ್ಯು ಡಬ್ಲ್ಯುಇ ಕುಸ್ತಿಪಟು, ಹಾಲಿವುಡ್ ನಟ ಜಾನ್ ಸೀನಾ, ಅಮೆರಿಕದ ಸೆಲೆಬ್ರಿಟಿ ಕಿಮ್ ಕರ್ದಾಶಿಯಾನ್, ಕ್ರಿಕೆಟಿಗ ಮಹೇಂದ್ರ ಸಿಂಗ್ ಧೋನಿ ಸೇರಿದಂತೆ ಖ್ಯಾತನಾಮರು ಈಗಾ ಗಲೇ ಜಿಯೊ ವರ್ಲ್ಡ್ ಕನ್ವೆನ್ಷನ್ ಸೆಂಟರ್‌ಗೆ ಬಂದಿದ್ದಾರೆ.



ಬಾಕ್ಸರ್ ಮೈಕ್ ಟೈಸನ್, ಹಾಲಿವುಡ್ ಹಾಗೂ ಬಾಲಿ ವುಡ್ ತಾರೆಯರು, ಜಾಗತಿಕ ರಾಜಕೀಯ ನಾಯಕರೂ ಪಾಲ್ಗೊಳ್ಳುವ ಸಾಧ್ಯತೆ ಇದೆ.

ಮದುವೆಯ ಸಂಭ್ರಮಾಚರಣೆ ಜುಲೈ 14ರವರೆಗೂ ನಡೆಯಲಿದೆ. ಜುಲೈ 13ರಂದು 'ಶುಭ ಆಶೀರ್ವಾದ', ಜುಲೈ 14ರಂದು 'ಮಂಗಳ ಉತ್ಸವ' ನಡೆಯಲಿದೆ.

**'ಸರ್ಫೀರಾ' ತೆರೆಗೆ:** ಅಕ್ಷಯ್ ಅಭಿನಯದ 'ಸರ್ಫಿರಾ' ಸಿನಿಮಾ ಇಂದು ತೆರೆ ಕಂಡಿದೆ. ಅನಾರೋಗ್ಯದ ನಡುವೆಯೂ ಅವರು ಚಿತ್ರದ ಪ್ರಚಾರದಲ್ಲಿ ತೊಡಗಿಕೊಂಡಿದ್ದರು. ತಮ್ಮೊಂದಿಗೆ ಇದ್ದ (ಚಿತ್ರತಂಡದ) ಕೆಲವರಿಗೆ ಕೋವಿಡ್ ದೃಢಪಟ್ಟಿದ್ದರಿಂದ ತಾವೂ ಪರೀಕ್ಷೆ ಮಾಡಿಸಿಕೊಂಡಿದ್ದರು. ಶುಕ್ರವಾರ ಬೆಳಿಗ್ಗೆ ಕೋವಿಡ್ ದೃಢಪಟ್ಟಿದೆ. ಅಕ್ಷಯ್ ಜೊತೆಗೆ, ಪರೇಶ್ ರಾವಲ್, ರಾಧಿಕಾ ಮದನ್ ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಂಡಿರುವ 'ಸರ್ಫಿರಾ' ತಮಿಳಿನ 'ಸೂರರೈ ಪೊಟ್ರು'ವಿನ ಹಿಂದಿ ರಿಮೇಕ್. ಎರಡೂ ಭಾಷೆಗಳಲ್ಲಿ ಸುಧಾ ಕೊಂಗಾರ ಅವರೇ ನಿರ್ದೇಶನ ಮಾಡಿದ್ದಾರೆ.

# 1.7 ಶತಕೋಟಿಗೆ ತಲುಪಲಿದೆ ಭಾರತದ ಜನಸಂಖ್ಯೆ



**ವಿಶ್ವಸಂಸ್ಥೆ:** ಭಾರತದ ಜನಸಂಖ್ಯೆಯು 2060ರ ಹೊತ್ತಿಗೆ ಸುಮಾರು 1.7 ಶತಕೋಟಿಗೆ ಏರುತ್ತದೆ, ನಂತರ ಶೇ.12 ರಷ್ಟು ಕುಸಿಯುತ್ತದೆ, ದೇಶವು ಶತಮಾನದುದ್ದಕ್ಕೂ ವಿಶ್ವದ ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುತ್ತದೆ ಎಂದು ವಿಶ್ವಸಂಸ್ಥೆ ಹೇಳಿದೆ. ವರ್ಲ್ಡ್ ಪಾಪ್ಯುಲೇಶನ್ 2024 ವರದಿಯು, ಮುಂಬರುವ 50–60 ವರ್ಷಗಳಲ್ಲಿ ವಿಶ್ವದ ಜನಸಂಖ್ಯೆಯು ಬೆಳವಣಿಗೆಯನ್ನು ಮುಂದುವರೆಸುವ ನಿರೀಕ್ಷೆಯಿದೆ, 2080 ರ ಮಧ್ಯದಲ್ಲಿ ಸುಮಾರು 10.3 ಶತಕೋಟಿ ಜನರನ್ನು ತಲುಪುತ್ತದೆ, ಇದು 2024 ರಲ್ಲಿ 8.2 ಶತಕೋಟಿಯಿಂದ ಹೆಚ್ಚಾಗುತ್ತದೆ ಉತ್ತುಂಗಕ್ಕೇರಿದ ನಂತರ, ಜಾಗತಿಕ ಜನಸಂಖ್ಯೆಯು ಕ್ರಮೇಣ ಕ್ಷೀಣಿಸಲು ಪ್ರಾರಂಭಿಸುತ್ತದೆ, ಶತಮಾನದ ಅಂತ್ಯದ ವೇಳೆಗೆ 10.2 ಶತಕೋಟಿ ಜನರಿಗೆ ಇಳಿಯುತ್ತದೆ ಎಂದಿದೆ.

ಕಳೆದ ವರ್ಷ ವಿಶ್ವದ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿ ಚೀನಾವನ್ನು ಹಿಂದಿಕ್ಕಿದ್ದ ಭಾರತವು 2100 ರವರೆಗೂ ಆ ಸ್ಥಾನವನ್ನು ಮುಂದುವರಿಸಲಿದೆ.ಶತಮಾನದುದ್ದಕ್ಕೂ ವಿಶ್ವದ ಅತಿ ದೊಡ್ಡ ಜನಸಂಖ್ಯೆಯಾಗಿ ಉಳಿಯುವ ನಿರೀಕ್ಷೆಯಿರುವ ಭಾರತದ ಜನಸಂಖ್ಯೆಯು 2060 ರ ದಶಕದ ಆರಂಭದಲ್ಲಿ ಸುಮಾರು 1.7 ಶತಕೋಟಿ ಗರಿಷ್ಠ ಮಟ್ಟವನ್ನು ತಲುಪಿದ ನಂತರ ಶೇ. 12 ರಷ್ಟು ಕುಸಿಯಬಹುದು ಎಂದು ವಿಶ್ವಸಂಸ್ಥೆಯ ಆರ್ಥಿಕ ಇಲಾಖೆಯು ಪ್ರಕಟಿಸಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ. ವರದಿಯ ಪ್ರಕಾರ, 2024 ರಲ್ಲಿ ಭಾರತದ ಜನಸಂಖ್ಯೆಯು 1.45 ಶತಕೋಟಿ ಎಂದು ಅಂದಾಜಿಸಲಾಗಿದೆ ಮತ್ತು ಇದು 2054 ರಲ್ಲಿ 1.69 ಶತಕೋಟಿಗೆ ಏರುತ್ತದೆ.

ಪ್ರಸ್ತುತ 2024 ರಲ್ಲಿ 1.41 ಶತಕೋಟಿಯಷ್ಟಿರುವ ಚೀನಾದ ಜನಸಂಖ್ಯೆಯು 2054 ರಲ್ಲಿ 1.21 ಶತಕೋಟಿಗೆ ಕುಸಿಯುತ್ತದೆ ಮತ್ತು 2100 ರ ವೇಳೆಗೆ 633 ಮಿಲಿಯನ್‌ಗೆ ಕುಸಿಯುತ್ತದೆ ಎಂದು ವರದಿ ಹೇಳಿದೆ.

### 1.5 ಶತಕೋಟಿ ಜನಸಂಖ್ಯೆ

**ಭಾರತದ ಜನಸಂಖ್ಯೆಯು 2100 ರಲ್ಲಿ ಶತಮಾನದ ಅಂತ್ಯದ ವೇಳೆಗೆ 1.5 ಶತಕೋಟಿಗೆ ಕುಸಿಯುತ್ತದೆ ಎಂದು ಅಂದಾಜಿಸಲಾಗಿದೆ, ಆದರೆ ದೇಶವು ಇನ್ನೂ ಇರುತ್ತದೆ. ಭೂಮಿಯ ಮೇಲೆ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರವಾಗಿ ಉಳಿಯುತ್ತದೆ. ಇದು 2060 ರ ದಶಕದಲ್ಲಿ ಗಾತ್ರದಲ್ಲಿ ಉತ್ತುಂಗಕ್ಕೇರುತ್ತದೆ ಮತ್ತು ನಂತರ ಅದು ಸ್ವಲ್ಪಮಟ್ಟಿಗೆ ಕುಸಿಯಲು ಪ್ರಾರಂಭಿಸುತ್ತದೆ. ಆದ್ದರಿಂದ ಶತಮಾನದ ಅಂತ್ಯದ ವೇಳೆಗೆ, ಭಾರತವು ಸುಮಾರು 1.5 ಶತಕೋಟಿ ಜನಸಂಖ್ಯೆ ಹೊಂದಿರಲಿದೆ ಎಂದು ಅಂದಾಜಿಸಲಾಗಿದೆ.**

# ದಲಿತ ಬಾಲಕನಿಗೆ ಮೂತ್ರಪಾನ ಮಾಡಿಸಿದ್ದ ಮೂವರ ಬಂಧನ



**ಶ್ರಾವಸ್ತಿ:** ಉತ್ತರ ಪ್ರದೇಶದ ಶ್ರಾವಸ್ತಿ ಜಿಲ್ಲೆಯಲ್ಲಿ ದಲಿತ ಅಪ್ರಾಪ್ತ ಬಾಲಕನಿಗೆ ಮೂತ್ರ ಕುಡಿಸುವಂತೆ ಒತ್ತಾಯಿಸಿದ ಮೂವರು ಯುವಕರನ್ನು ಬಂಧಿಸಲಾದೆ. 15 ವರ್ಷ ವಯಸ್ಸಿನ ಸಂತ್ರಸ್ತ ತಂತ್ರಜ್ಞರಾಗಿ ಕೆಲಸ ಮಾಡುತ್ತಿದ್ದು, ಸಾಮಾಜಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸೌಂಡ್ ಮಿಕ್ಸರ್, ಆಡಿಯೊ ಸಿಸ್ಟಮ್‌ಗಳನ್ನು ಹೊಂದಿಸುತ್ತಾರೆ. ರಾತ್ರಿ ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದ ವೇಳೆ ಮದ್ಯದ ಅಮಲಿನಲ್ಲಿದ್ದ ಕಿಶನ್ ತಿವಾರಿ, ದಿಲೀಪ್ ಮಿಶ್ರಾ, ಸತ್ಯಂ ತಿವಾರಿ ಎಂಬುವರು ಆತನನ್ನು ಅಡ್ಡಗಟ್ಟಿದ್ದಾರೆ.

ಆ ಸಂದರ್ಭದಲ್ಲಿ ದಿಲೀಪ್ ಮಿಶ್ರಾ, ಮದ್ಯದ ಬಾಟಲಿಯಲ್ಲಿ ಮೂತ್ರ ವಿಸರ್ಜನೆ ಮಾಡಿದರು, ಆದರೆ ಸತ್ಯಂ, ಕಿಶನ್ ಹುಡುಗನನ್ನು ಕೆಳಕ್ಕೆ ಬೀಳಿಸಿ ಬಾಟಲಿಯಲ್ಲಿದ್ದ ಮೂತ್ರವನ್ನು ಅವನ ಬಾಯಿಗೆ ಬಲವಂತವಾಗಿ ಹಾಕಿದರು ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳು ತಮ ಮನೆಯಲ್ಲಿ ಕಾರ್ಯಕ್ರಮಕ್ಕಾಗಿ ಸ್ಥಾಪಿಸಿದ ಆಡಿಯೋ ಸಿಸ್ಟಮ್‌ಗೆ ಹೆಚ್ಚುವರಿ ಶುಲ್ಕ ವಿಧಿಸುವ ಹುಡುಗನ ಕುಟುಂಬದ ಮೇಲೆ ಕೋಪಗೊಂಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳು ಅಪ್ರಾಪ್ತರೊಂದಿಗೆ ಅನುಚಿತವಾಗಿ ವರ್ತಿಸಿದರು ಮತ್ತು ಥಳಿಸಿದರು, ಮತ್ತು ಅವರಲ್ಲಿ ಒಬ್ಬರು ಇಡೀ ಘಟನೆಯ ವೀಡಿಯೊವನ್ನು ಚಿತ್ರೀಕರಿಸಿದ್ದಾರೆ ಎಂದು ಗಿ ಲೌಲಾ ಪೊಲೀಸ್ ಠಾಣೆಯ ಠಾಣಾಧಿಕಾರಿ ಮಹಿಮಾ ನಾಥ್ ಉಪಾಧ್ಯಾಯ ಹೇಳಿದರು.

ಹುಡುಗ ಮನೆಗೆ ಬಂದು ತನ್ನ ಅಣ್ಣನಿಗೆ ಸಂಕಟವನ್ನು ಹೇಳಿದ. ಮರುದಿನ ಆತನ ಪೋಷಕರು ಮತ್ತು ಸಹೋದರ ಪೊಲೀಸರಿಗೆ ದೂರು ನೀಡಿದ್ದರು. ಪ್ರತ್ಯಕ್ಷದರ್ಶಿಗಳ ಮಾಹಿತಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೋ ಆಧರಿಸಿ ಪೊಲೀಸರು ಪ್ರಾಥಮಿಕ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

# ಹೈಕೋರ್ಟ್ ಬಾರ್ ಅಸೋಸಿಯೇಷನ್ ಮಾಜಿ ಅಧ್ಯಕ್ಷನ ವಶ



**ಶ್ರೀನಗರ:** ಹಿರಿಯ ವಕೀಲ ಮತ್ತು ಜಮು ಮತ್ತು ಕಾಶೀರ ಹೈಕೋರ್ಟ್ ಬಾರ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷ ನಜೀರ್ ಅಹದ್ ರೋಂಗಾ ಅವರನ್ನು ಸಾರ್ವಜನಿಕ ಸುರಕ್ಷತಾ ಕಾಯ್ದೆಯಡಿ ಬಂಧಿಸಲಾಗಿದೆ. ರೋಂಗಾ ಅವರನ್ನು ನಗರದ ನಿಶಾತ್ ಪ್ರದೇಶದಲ್ಲಿನ ಅವರ ನಿವಾಸದಿಂದ ಬಂಧಿಸಲಾಗಿದ್ದು, ಪಿಎಸ್‌ಎ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾಶೀರ ಹೈಕೋರ್ಟ್ ಬಾರ್ ಅಸೋಸಿಯೇಶನ್‌ನ ಮಾಜಿ ಅಧ್ಯಕ್ಷರಾಗಿದ್ದ ನನ್ನ ತಂದೆ ರೋಂಗಾ ಅವರನ್ನು ತೀವ್ರ ಗೊಂದಲದ ಘಟನೆಗಳಲ್ಲಿ ಬಂಧಿಸಲಾಗಿದೆ ಎಂದು ಅವರ ಪುತ್ರ ಉಮ್ಮೈರ್ ರೋಂಗಾ ಎಕ್ಸ್‌ನ ಲ್ಲಿ ಪೋಸ್ಟ್ ಮಾಡಿದ್ದಾರೆ. ಬೆಳಿಗ್ಗೆ 1.10 ಗಂಟೆಗೆ ಪೋಲೀಸರ ತುಕಡಿಯು ಯಾವುದೇ ಬಂಧನ ವಾರಂಟ್ ಇಲ್ಲದೆ ನಮ ಮನೆಗೆ ಆಗಮಿಸಿ ನನ್ನ ತಂದೆಯನ್ನು ಬಂಧಿಸಿದೆ. ನಾವು ಸಂಕಟದ ಸ್ಥಿತಿಯಲ್ಲಿರುತ್ತೇವೆ ಎಂದು ಉಮ್ಮೈರ್ ರೊಂಗಾ ಹೇಳಿ ದರು. ಜಮು ಮತ್ತು ಕಾಶೀರ ಹೈಕೋರ್ಟ್ ಬಾರ್ ಅಸೋಸಿಯೇಷನ್‌ನ ಮಾಜಿ ಅಧ್ಯಕ್ಷರನ್ನು ಸಮವಸ್ತ್ರಧಾರಿ ಸಿಬ್ಬಂದಿ ಕರೆದುಕೊಂಡು ಹೋಗುತ್ತಿರುವುದನ್ನು ತೋರಿಸುವ ಎರಡು ವಿಡಿಯೋಗಳನ್ನು ಅವರು ಪೋಸ್ಟ್ ಮಾಡಿದ್ದಾರೆ. 2020 ರಲ್ಲಿ ವಕೀಲ ಬಾಬರ್ ಖಾದ್ರಿ ಅವರನ್ನು ಭಯೋತ್ಪಾದಕರು ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಕೀಲರ ಸಂಘದ ಮಾಜಿ ಅಧ್ಯಕ್ಷ ಮಿಯಾನ್ ಅಬ್ದುಲ್ ಖಯೂಮ್ ಅವರನ್ನು ಕಳೆದ ತಿಂಗಳು ಬಂಧಿಸಲಾಗಿತ್ತು. ರೋಂಗಾ ಬಂಧನವನ್ನು ಪಿಡಿಪಿ ಅಧ್ಯಕ್ಷೆ ಮೆಹಬೂಬಾ ಮುಫ್ತಿ ಟೀಕಿಸಿದ್ದಾರೆ

# ಯುಎಸ್‌ಎ ದೇಶದ ರಸ್ತೆಯೊಂದಕ್ಕೆ ಭಾರತೀಯ ಮೂಲದ ವೈದ್ಯರ ಹೆಸರು

## ಭಾರತೀಯ ಮೂಲದ ವೈದ್ಯ ಡಾ. ಜಾರ್ಜ್ ಮ್ಯಾಥ್ಯೂ ಅವರಿಗೆ ಯುಎಇ ಸರ್ಕಾರ ಗೌರವ




ಆರು ದಶಕಗಳ ಸಾರ್ಥಕ ಸೇವೆಗೆ ಗೌರವ

**ಅಬುಧಾಬಿ:** ಸಂಯುಕ್ತ ಅರಬ್ ಸಂಸ್ಥಾನದ ವೈದ್ಯಕೀಯ ವಲಯದಲ್ಲಿ ಸುಮಾರು 6 ದಶಕಗಳ ಕಾಲ ಸೇವೆ ಸಲ್ಲಿಸಿರುವ ಭಾರತೀಯ ಮೂಲದ ವೈದ್ಯ ಡಾ. ಜಾರ್ಜ್ ಮ್ಯಾಥ್ಯೂ ಅವರಿಗೆ ಯುಎಇ ಸರ್ಕಾರ ಗೌರವಿಸಿದೆ. 84 ವರ್ಷ ವಯಸ್ಸಿನ ಡಾ. ಜಾರ್ಜ್ ಮ್ಯಾಥ್ಯೂ ಅವರ ಹೆಸರನ್ನು ಇಲ್ಲಿನ ರಸ್ತೆಯೊಂದಕ್ಕೆ ನಾಮಕರಣ ಮಾಡಿದೆ. ಯುಎಇ ನಾಗರಿಕರಾಗಿರುವ ಜಾರ್ಜ್ ಮ್ಯಾಥ್ಯೂ, ಭಾರತದಿಂದ ಯುಎಇಗೆ ವಲಸೆ ಹೋಗಿದ್ದರು.

1967ರಲ್ಲಿ 26 ವರ್ಷ ವಯಸ್ಸಿನವ ರಾಗಿದ್ದಾಗ ಡಾ. ಜಾರ್ಜ್ ಮ್ಯಾಥ್ಯೂ ಅವರು ಯು ಎಇ ದೇಶಕ್ಕೆ ವಲಸೆ ಹೋಗಿದ್ದರು. ಅಂದಿನಿಂದ ಇಂದಿನವರೆಗೂ ಯುಎಇ ದೇಶದ ವೈದ್ಯಕೀಯ ವ್ಯವಸ್ಥೆ ಬಲ ಪಡಿಸಲು ದುಡಿದಿರುವ ಡಾ. ಜಾರ್ಜ್ ಮ್ಯಾಥ್ಯೂ, ಯುಎಇ ದೇಶದ ಆರೋಗ್ಯ ವ್ಯವಸ್ಥೆಯಲ್ಲಿ ಆಮೂಲಾಗ್ರ ಹಾಗೂ ಕ್ರಾಂತಿಕಾರಕ ಬದಲಾವಣೆ ತರಲು ನೆರವಾಗಿದ್ದಾರೆ. ಯುಎಇ ದೇಶದ ಅಲ್ ಐನ್‌ನಲ್ಲಿ ಇರುವ ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸಿದ ಮೊದಲ ವೈದ್ಯ ಎಂಬ ಹೆಗ್ಗಳಿಕೆಯೂ ಡಾ. ಜಾರ್ಜ್ ಮ್ಯಾಥ್ಯೂ ಅವರಿಗೆ ಸಲ್ಲುತ್ತದೆ.

ಯುಎಇ ದೇಶದ ಅಲ್ ಮಫ್ರಾಕ್ ಪ್ರದೇಶದಲ್ಲಿ ಇರುವ ಶೇಖ್ ಶಖ್‌ಬೌತ್ ಮೆಡಿಕಲ್ ಸಿಟಿ ಬಳಿ ಇರುವ ರಸ್ತೆಗೆ ಇದೀಗ ಡಾ. ಜಾರ್ಜ್ ಮ್ಯಾಥ್ಯೂ ಅವರ ಹೆಸರನ್ನು ಇಡಲಾಗಿದೆ. ಸಂಯುಕ್ತ ಅರಬ್ ಸಂಸ್ಥಾನದ ಅಭಿವೃದ್ಧಿಗೆ ಶ್ರಮಿಸಿದವರ ಹೆಸರುಗಳನ್ನ ರಸ್ತೆಗೆ ನಾಮಕರಣ ಮಾಡುವ ಯೋಜನೆಯನ್ನ ಯುಎಇ ಸರ್ಕಾರದ ಮುನ್ಸಿಪಾಲ್ಟಿ ಹಾಗೂ ಸಾರಿಗೆ ಇಲಾಖೆ ರೂಪಿಸಿದ್ದು, ಈ ಯೋಜನೆ ಅನ್ವಯ ಇದೀಗ ಭಾರತೀಯ ಮೂದ ಡಾ. ಜಾರ್ಜ್ ಮ್ಯಾಥ್ಯೂ ಅವರಿಗೆ ಗೌರವ ಸಲ್ಲಿಸಲಾಗಿದೆ.

ಅಚ್ಚರಿಯ ಸಂಗತಿ ಎಂದರೆ 1967ರಲ್ಲಿ ಡಾ. ಜಾರ್ಜ್ ಮ್ಯಾಥ್ಯೂ ಅವರು ಯುಎಇ ದೇಶಕ್ಕೆ ವಲಸೆ ಹೋದ ಸಂದರ್ಭದಲ್ಲಿ ಆ ದೇಶದಲ್ಲಿ ರಸ್ತೆ, ಆಸ್ಪತ್ರೆ ಸೇರಿದಂತೆ ಯಾವುದೇ ಮೂಲ ಸೌಕರ್ಯಗಳೂ ಸೂಕ್ತವಾಗಿ ಇರಲಿಲ್ಲ. ಇದೀಗ ಅಭಿವೃದ್ಧಿಯ ಉತ್ತುಂಗದಲ್ಲಿರುವ ಯುಎಇ ದೇಶದ ರಸ್ತೆಗೆ ಡಾ. ಜಾರ್ಜ್ ಮ್ಯಾಥ್ಯೂ ಅವರ ಹೆಸರಿಡಲಾಗಿದೆ.

ತಮ್ಮ ಹೆಸರನ್ನು ರಸ್ತೆಗೆ ಇಟ್ಟ ಸುಸಂದರ್ಭದಲ್ಲಿ ಮಾತನಾಡಿದ ಡಾ. ಜಾರ್ಜ್ ಮ್ಯಾಥ್ಯೂ, 'ನಾನು ಈ ದೇಶಕ್ಕೆ ಬಂದ ಹೊಸತರಲ್ಲಿ ಇನ್ನೂ ಅಭಿವೃದ್ಧಿ ಕಾರ್ಯಗಳು ಆಗಷ್ಟೇ ಆರಂಭ ಆಗಿದ್ದವು. ದಿವಂಗತ ಶೇಖ್ ಝಾಯಾದ್ ಅವರು ಈ ದೇಶದ ರಾಷ್ಟ್ರಪಿತರು. ಅವರ ಸ್ಫೂರ್ತಿ ಪಡೆದು ನಾನು ಜನರಿಗೆ ನೆರವಾಗಲು ಸಂಕಲ್ಪ ಮಾಡಿದೆ.

ನನ್ನ ಸೇವೆಯನ್ನ, ಶ್ರಮವನ್ನ ಸರ್ಕಾರ ಗುರುತಿಸಿದ್ದು ಸಾರ್ಥಕತೆ ತಂದಿದೆ' ಎಂದು ಹೇಳಿದ್ದಾರೆ. ಹಾಗೆ ನೋಡಿದರೆ ಡಾ. ಜಾರ್ಜ್ ಮ್ಯಾ ಥ್ಯೂ ಅವರು ಯುಎಇಗಿಂತಲೂ ಅಮೆರಿಕ ದೇಶಕ್ಕೆ ಹೋಗುವ ಇಚ್ಛೆ ಹೊಂದಿದ್ದರಂತೆ. ಆದರೆ ಗೆಳೆಯರ ಮನವಿಯಂತೆ ಇಲ್ಲಿಯೇ ಉಳಿದೆ ಎಂದು ಜಾರ್ಜ್ ಹೇಳುತ್ತಾರೆ. 2004ರಲ್ಲಿ ಜಾರ್ಜ್ ಹಾಗೂ ಅವರ ಕುಟುಂಬ ವರ್ಗಕ್ಕೆ ಯುಎಇ ಪೌರತ್ವ ಕೂಡಾ ಸಿಕ್ಕಿತ್ತು. ಯುಎಇ ದೊರೆ ಶೇಖ್ ಝಾಯಾದ್ ಅವರನ್ನು ಭೇಟಿ ಮಾಡಿದ್ದ ನೆನಪುಗಳನ್ನ ಡಾ. ಜಾರ್ಜ್ ಮ್ಯಾಥ್ಯೂ ಈಗಲೂ ಮೆಲುಕು ಹಾಕುತ್ತಾರೆ. ಜಾರ್ಜ್ ಅವರು ಮೂಲತಃ ಕೇರಳ ರಾಜ್ಯದವರು. ಅವರ ಕುಟುಂಬಸ್ಥರು ಇಂದಿಗೂ ಕೇರಳ ರಾಜ್ಯದಲ್ಲಿದ್ದಾರೆ.

### ನಾವಿರುವ ಊರೇ ನಮ್ಮೂರು, ಇಲ್ಲಿರುವ ಎಲ್ಲರೂ ನಮ್ಮೋರು

**ನಾವಿರುವ ಊರೇ ನಮ್ಮೂರು, ಇಲ್ಲಿರುವ ಎಲ್ಲರೂ ನಮ್ಮೋರು ಎಂಬ ಭಾವನೆಯೊಂದಿಗೆ ಕಳೆದ 60 ವರ್ಷಗಳಿಂದ ವೈದ್ಯರಾಗಿ ದುಡಿದಿರುವ ಭಾರತೀಯ ಮೂಲದ 84 ವರ್ಷ ವಯಸ್ಸಿನ ವೈದ್ಯರಿಗೆ ಯುಎಇ ಸರ್ಕಾರ ಗೌರವ ನೀಡಿದೆ. 10 ವರ್ಷಗಳ ಹಿಂದೆ ಡಾ. ಜಾರ್ಜ್ ಹಾಗೂ ಅವರ ಕುಟುಂಬಕ್ಕೆ ಯುಎಇ ಪೌರತ್ವ ನೀಡಿದ್ದ ಅಲ್ಲಿನ ಸರ್ಕಾರ, ಇದೀಗ ಜಾರ್ಜ್ ಅವರ ಹೆಸರನ್ನು ಅಬುಧಾಬಿಯ ರಸ್ತೆಯೊಂದಕ್ಕೆ ನಾಮಕರಣ ಮಾಡಿದೆ.**

## ಮಿನಿ ನ್ಯೂಸ್

### ಡ್ರಗ್ಸ್ ಪ್ರಕರಣದಲ್ಲಿ ಸಂಸದ ಅಮೃತ್ ಪಾಲ್‌ಸಿಂಗ್ ಸಹೋದರನ ಬಂಧನ

**ಚಂಡೀಗಢ:** ಮೂಲಭೂತವಾದಿ ಸಿಖ್ ಧರ್ಮ ಪ್ರಚಾರಕ, ಖದೂರ್ ಸಾಹಿಬ್ ಸಂಸದ ಅಮತಪಾಲ್ ಸಿಂಗ್ ಅವರ ಸಹೋದರ ಹರ್‌ಪ್ರೀತ್ ಸಿಂಗ್ ಅವರನ್ನು ಡ್ರಗ್ ಪ್ರಕರಣದಲ್ಲಿ ಜಲಂಧರ್ ಪೊಲೀಸರು ಬಂಧಿಸಿದ್ದಾರೆ. ನಿನ್ನೆ ಸಂಜೆ ಹರ್‌ಪ್ರೀತ್ ಸಿಂಗ್ ಅವರನ್ನು ಜಲಂಧರ್‌ನಲ್ಲಿ ಬಂಧಿಸಲಾಯಿತು ಎಂದು ಗ್ರಾಮಾಂತರ ಪೊಲೀಸರು ತಿಳಿಸಿದ್ದಾರೆ.

ಬಂಧನದ ವೇಳೆ ಆತನ ಬಳಿ ಡ್ರಗ್ಸ್ ದೊರೆತಿದ್ದು ಈ ಬಗ್ಗೆ ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಅಮ ತಪಾಲ್ ಸಿಂಗ್ ಅವರು ಪ್ರಸ್ತುತ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಅಪರಾಧಗಳಿಗಾಗಿ ಅಸ್ಸಾಂನ ದಿಬ್ರುಗಢ್ ಜಿಲ್ಲೆಯ ಜೈಲಿನಲ್ಲಿದ್ದಾರೆ. ಇತ್ತೀಚೆಗಷ್ಟೇ ಲೋಕಸಭೆ ಸದಸ್ಯರಾಗಿ ಪ್ರಮಾಣ ವಚನ ಸ್ವೀಕರಿಸಲು ನಾಲ್ಕು ದಿನಗಳ ಕಸ್ಟಡಿ ಪೆರೋಲ್ ಮೇಲೆ ದೆಹಲಿಗೆ ತೆರಳಿದ್ದರು.


2024 ರ ಲೋಕಸಭೆ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿದ ಅಮತಪಾಲ್ ಸಿಂಗ್ ಅವರು ಖಾದೂರ್ ಸಾಹಿಬ್ ಕ್ಷೇತ್ರದಿಂದ ಕಾಂಗ್ರೆಸ್ ಅಭ್ಯರ್ಥಿ ಕುಲ್ಬೀರ್ ಸಿಂಗ್ ಝಿರಾ ಅವರನ್ನು ಸೋಲಿಸಿದ್ದರು. ವಾರಿಸ್ ಪಂಜಾಬ್ ದೇ ಸಂಘಟನೆಯ ಮುಖ್ಯಸ್ಥರಾಗಿರುವ ಮತ್ತು ಖಲಿಸ್ತಾನಿ ಉಗ್ರಗಾಮಿ ಜರ್ನೈಲ್ ಸಿಂಗ್ ಭಿಂದ್ರನ್‌ವಾಲೆಯ ನಂತರ ಸ್ವತಃ ಶೈಲಿಯನ್ನು ಹೊಂದಿದ್ದ ಅವರು ಎನ್‌ಎಸ್‌ಎ ಅಡಿಯಲ್ಲಿ ಅವರ ಒಂಬತ್ತು ಸಹಚರರೊಂದಿಗೆ ಜೈಲುಪಾಲಾಗಿದ್ದರು.

ಕಳೆದ ವರ್ಷ ಫೆಬ್ರ ವರಿ 23 ರಂದು ಅಮತಪಾಲ್ ಸಿಂಗ್, ಅವರ ಬೆಂಬಲಿಗರು ಅಜ್ನಾ ಲಾ ಪೊಲೀಸ್ ಠಾಣೆಗೆ ಬ್ಯಾರಿಕೇಡ್‌ಗಳನ್ನು ಮುರಿದು, ಕತ್ತಿಗಳು, ಬಂದೂಕುಗಳನ್ನು ಝಳಪಿಸುತ್ತಾ, ಪೊಲೀಸ್ ಸಿಬ್ಬಂದಿಯೊಂದಿಗೆ ಘರ್ಷಣೆಗೆ ಒಳಗಾದ ನಂತರ ಮೊಗಾದ ರೋಡ್ ಗ್ರಾಮದಲ್ಲಿ ಬಂಧಿಸಲಾಯಿತು.

### ಡ್ರಗ್ಸ್ ಮಾರುತ್ತಿದ್ದ ದೆಹಲಿ ಪೊಲೀಸ್ ಕಾನ್‌ಸ್ಟೇಬಲ್ ಸೆರೆ

**ನವದೆಹಲಿ:** ರಾಷ್ಟ್ರ ರಾಜಧಾನಿ, ಅದರ ನೆರೆಹೊರೆಯ ನಗರಗಳಲ್ಲಿ ಮಾದಕ ದ್ರವ್ಯಗಳನ್ನು ಸರಬರಾಜು ಮಾಡುವ ಕಾರ್ಟೆಲ್‌ನ ಭಾಗವಾಗಿದ್ದ ಆರೋಪದ ಮೇಲೆ ಸಂಚಾರ ಘಟಕದಲ್ಲಿ ನಿಯೋಜಿಸಲಾದ ದೆಹಲಿ ಪೊಲೀಸ್ ಪೇದೆ ಮತ್ತು ಆತನ ಸಹಚರನನ್ನು ಬಂಧಿಸಲಾದೆ. ದೆಹಲಿ ಪೊಲೀಸ್ ವಿಶೇಷ ಕೋಶದ ತಂಡವು ಜಾಫ್ರಾಬಾದ್ ಮೆಟ್ರೋ ನಿಲ್ದಾಣದ ಬಳಿ ಅವರನ್ನು ಬಂಧಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಗಳು ಐಷಾರಾಮಿ ಕಾರಿನಲ್ಲಿ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸುಮಾರು 1 ಕೋಟಿ ರೂಪಾಯಿ ಮೌಲ್ಯದ ಒಂದು ಕಿಲೋಗ್ರಾಂ ಎಂಡಿಎಂಎ ಸರಬರಾಜು ಮಾಡುತ್ತಿದ್ದಾಗ ಸಿಕ್ಕಿಬಿದ್ದಿದ್ದಾರೆ ಮತ್ತು ಅವರನ್ನು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

### ಜಾಮೀನು ಸಿಕ್ಕರೂ ಕೇಜ್ರಿವಾಲ್ ಗಿಲ್ಲ ಬಿಡುಗಡೆ ಭಾಗ್ಯ



**ನವದೆಹಲಿ:** ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯ ಮಂತ್ರಿ ಅರವಿಂದ್ ಕೇಜ್ರಿವಾಲ್ ಅವರು ಸುಪ್ರೀಂ ಕೋರ್ಟ್ ಮಧ್ಯಂತರ ಜಾಮೀನು ಮಂಜೂರು ಮಾಡಿದೆ. ಆದರೆ, ಅ ಬಕಾರಿ ನೀತಿ ಪ್ರಕರಣವನ್ನು ಸಿಬಿಐ ಪ್ರತ್ಯೇಕವಾಗಿ ತನಿಖೆ ನಡೆಸು ತ್ತಿರುವುದರಿಂದ ಜಾಮೀನು ದೊರೆತರೂ ಕೇಜ್ರಿವಾಲ್ ಅವರು ಜೈಲಿನಲ್ಲೇ ಇರುವಂತಾಗಿದೆ. ಜಾರಿ ನಿರ್ದೇಶನಾಲಯದ ಅಧಿಕಾರಿಗಳು ತಮ್ಮನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ವಿಸ್ತ್ರತ ಪೀಠಕ್ಕೆ ವರ್ಗಾಯಿಸುವಂತೆಯೂ ನ್ಯಾಯಾಲಯ ಸೂಚನೆ ನೀಡಿದೆ. ಬಂಧನದ ಕಾರಣ ದೆಹಲಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯುವಂತೆ ಕೇಜ್ರಿವಾಲ್‌ಗೆ ನಿರ್ದೇಶಿಸಲು ಸಾಧ್ಯವಿಲ್ಲ ಎಂದು ನ್ಯಾಯಾಲಯವು ಹೇಳಿದ್ದು, ಆ ಕುರಿತು ಅರವಿಂದ್ ಕೇಜ್ರಿವಾಲ್ ಅವರೇ ನಿರ್ಧಾರ ಕೈಗೊಳ್ಳಬೇಕು ಎಂದು ನ್ಯಾಯಲಯ ಹೇಳಿದೆ.

ಈಗ ರದ್ದಾದ ಮದ್ಯ ಮಾರಾಟ ನೀತಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಕೇಜ್ರಿವಾಲ್ ಅವರನ್ನು ಹಣಕಾಸು ಅಪರಾಧ ನಿಗ್ರಹ ಸಂಸ್ಥೆ ಮಾರ್ಚ್‌ನಲ್ಲಿ ಬಂಧಿಸಿತ್ತು. ವಿಚಾರಣಾ ನ್ಯಾಯಾಲಯವು ಜೂನ್ 20 ರಂದು ಆಮ್ ಆದಿ ಪಕ್ಷದ (ಎಎಪಿ) ಮುಖ್ಯಸ್ಥರಿಗೆ ಜಾಮೀನು ನೀಡಿತು ಆದರೆ ದೆಹಲಿ ಹೈಕೋರ್ಟ್ ನಂತರ ಆ ಆದೇಶವನ್ನು ತಡೆಹಿಡಿದಿತ್ತು.

ದೆಹಲಿ ಹೈಕೋರ್ಟ್ ನಿರ್ಧಾರ ಪ್ರಶ್ನಿಸಿ ಅರವಿಂದ್ ಕೇಜ್ರಿವಾಲ್ ಅವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

### ಜೆಎನ್‌ಯು ವಿವಿಯಲ್ಲಿ ಹಿಂದೂ, ಬೌದ್ಧ, ಜೈನ ಅಧ್ಯಯನ ಕೇಂದ್ರ

**ನವದೆಹಲಿ:** ಜವಾಹರಲಾಲ್ ನೆಹರು ವಿಶ್ವವಿದ್ಯಾಲಯವು ಹಿಂದೂ, ಬೌದ್ಧ ಮತ್ತು ಜೈನ ಅಧ್ಯಯನ ಕೇಂದ್ರಗಳನ್ನು ತೆರೆಯಲಿದೆ ಎಂದು ಅಧಿಕತ ಅಧಿಸೂಚನೆ ತಿಳಿಸಿದೆ. ಸ್ಕೂಲ್ ಆಫ್ ಸಂಸ್ಕೃತ ಮತ್ತು ಇಂಡಿಕ್ ಸ್ಟಡೀಸ್ ಅಡಿಯಲ್ಲಿ ಮೂರು ಹೊಸ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಅದು ಹೇಳಿದೆ.ಹೊಸ ಕೇಂದ್ರಗಳನ್ನು ಸ್ಥಾಪಿಸುವ ನಿರ್ಧಾರವನ್ನು ಮೇ 29 ರಂದು ನಡೆದ ಸಭೆಯಲ್ಲಿ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ (ಜೆಎನ್‌ಯು) ಕಾರ್ಯಕಾರಿ ಮಂಡಳಿಯು ಅನುಮೋದಿಸಿದೆ. ವಿಶ್ವವಿದ್ಯಾನಿಲಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (2020) ಮತ್ತು ಭಾರತೀಯ ಜ್ಞಾನ ವ್ಯವಸ್ಥೆಯನ್ನು ಪರಿಶೋಧಿಸಲು ಮತ್ತು ಶಿಫಾರಸು ಮಾಡಲು ಜೆಎನ್‌ಯುನಿಂದ ಸಮಿತಿಯನ್ನು ರಚಿಸಲಾಗಿದೆ.

ಮೆ 25ರಂದು ನಡೆದ ತನ್ನ ಸಭೆಯಲ್ಲಿ ಕಾರ್ಯಕಾರಿ ಮಂಡಳಿಯುಭಾರತೀಯ ಜ್ಞಾನ ವ್ಯವಸ್ಥೆ ಮತ್ತು ವಿಶ್ವವಿದ್ಯಾನಿಲಯದಲ್ಲಿ ಅದರ ಮುಂದಿನ ಅನುಷ್ಠಾನವನ್ನು ಅನ್ವೇಷಿಸಲು ಮತ್ತು ಶಿಫಾರಸು ಮಾಡಲು ರಚಿಸಲಾದ ಸಮಿತಿಯ ಶಿಫಾರಸನ್ನು ಅನುಮೋದಿಸಿದೆ ಮತ್ತು ಸಂಸ್ಕೃತ ಶಾಲೆಯಲ್ಲಿ ಈ ಕೆಳಗಿನ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ದೆಹಲಿ ವಿಶ್ವವಿದ್ಯಾಲಯ (ಡಿಯು) ಕಳೆದ ವರ್ಷ ಹಿಂದೂ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದೆ ಅದು ಪ್ರಸ್ತುತ ಸ್ನಾತಕೋತ್ತರ ಪದವಿಯನ್ನು ನೀಡುತ್ತದೆ. ಕೇಂದ್ರವು ಪದವಿಪೂರ್ವ ಕೋರ್ಸ್‌ಗಳನ್ನು ಪರಿಚಯಿಸಲು ಯೋಜಿಸಿದೆ.

ದೆಹಲಿ ವಿವಿ ಈಗಾಗಲೇ ಬೌದ್ಧ ಅಧ್ಯಯನ ವಿಭಾಗವನ್ನು ಹೊಂದಿದ್ದು, ಮಾರ್ಚ್‌ನಲ್ಲಿ 35 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಬೌದ್ಧ ಧರ್ಮದಲ್ಲಿ ಉನ್ನತ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಕೇಂದ್ರ ಸರ್ಕಾರದ ಅನುಮೋದನೆಯನ್ನು ಪಡೆದುಕೊಂಡಿದೆ.

ಕನ್ನಡದ ಖ್ಯಾತ ನಟಿ ಕಮ್ ನಿರೂಪಕಿ ಅಪರ್ಣಾ ಅಂತ್ಯಕ್ರಿಯೆ ಬನಶಂಕರಿಯ ವಿದ್ಯುತ್ ಚಿತಾಗಾರದಲ್ಲಿ ಸ್ಮಾರ್ತ ಬ್ರಾಹ್ಮಣ ಸಂಪ್ರದಾಯದಂತೆ ನೆರವೇರಿದೆ. 2 ವರ್ಷಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅಪರ್ಣಾ ಜು.11ರಂದು ಬನಶಂಕರಿಯ ಸ್ವಗೃಹದಲ್ಲಿ ಕೊನೆಯುಸಿರೆಳೆದಿದ್ದಾರೆ. ಚಿತ್ರರಂಗಕ್ಕೆ ಕಳೆದ 3 ದಶಕಗಳಿಂದ ಸೇವೆ ಸಲ್ಲಿಸಿರುವ ನಟಿಗೆ ಗಾಳಿಯಲ್ಲಿ 3 ಸುತ್ತು ಗುಂಡು ಹಾರಿಸುವ ಮೂಲಕ ಪೊಲೀಸ್ ಗೌರವದೊಂದಿಗೆ ಅಂತ್ಯಕ್ರಿಯೆ ನೆರವೇರಿದೆ. ಈ ವೇಳೆ, ದುಃಖದಲ್ಲಿರುವ ಅಪರ್ಣಾ ಪತಿ ನಾಗರಾಜ್‌ಗೆ ಸೃಜನ್ ಧೈರ್ಯ ತುಂಬಿದ್ದಾರೆ. ಸೃಜನ್ ಲೋಕೇಶ್ ಸೇರಿದಂತೆ ಅನೇಕರು ಅಪರ್ಣಾ ಅಂತ್ಯಕ್ರಿಯೆಯಲ್ಲಿ ಭಾಗಿಯಾಗಿದ್ದಾರೆ.

ಬೆಂಗಳೂರು ದೂರದರ್ಶನದಲ್ಲಿ ಸೀನಿಯರ್ ಗ್ರೇಡ್ ನಿರೂಪಕಿಯಾಗಿದ್ದ ಅಪರ್ಣಾ, ಆಕಾಶವಾಣಿ ನಿರೂಪಕಿಯಾಗಿ ಕೆಲಸ ನಿರ್ವಹಿಸಿದ್ದರು. ಅಲ್ಲದೇ ಮಜಾ ಟಾಕೀಸ್ ಕಾರ್ಯಕ್ರಮದಲ್ಲೂ ಅಭಿನಯಿಸಿದ್ದರು. ಕನ್ನಡದ ಯಶಸ್ವಿ ನಿರೂಪಕಿಯಾಗಿ 3 ದಶಕಗಳನ್ನು ಪೂರೈಸಿದ್ದಾರೆ. ಕಿರುತೆರೆಯಲ್ಲಿ ಮೂಡಲಮನೆ, ಮುಕ್ತ ಮುಂತಾದ ಧಾರಾವಾಹಿಗಳಲ್ಲಿ ಅಭಿನಯಿಸಿದ್ದ ಅಪರ್ಣಾ, 2013 ರಲ್ಲಿ ಬಿಗ್‌ಬಾಸ್ ಕನ್ನಡದ ಮೊದಲ ಸೀಸನ್‌ನಲ್ಲಿ ಭಾಗವಹಿಸಿದ್ದರು. 2015ರಲ್ಲಿ ಸೃಜನ್ ಲೋಕೇಶ್ ನೇತೃತ್ವದಲ್ಲಿ ಆರಂಭವಾದ ಮಜಾ ಟಾಕೀಸ್ ಕಾರ್ಯಕ್ರಮದಲ್ಲಿ ವರಲಕ್ಷ್ಮಿ ಪಾತ್ರ ಮಾಡಿ ಕನ್ನಡ ಕಲಾಪ್ರಿಯರ ಮನಗೆದ್ದಿದ್ದರು. 2014 ರಲ್ಲಿ ಬೆಂಗಳೂರಿನ ನಮ್ಮ ಮೆಟ್ರೋದಲ್ಲಿ ಘೋಷಣೆಯಾಗುವ ಪ್ರಯಾಣಿಕರು ಹತ್ತುವ ಮತ್ತು ಇಳಿಯುವ ಸೂಚನೆಗೆ ಧ್ವನಿ ಗೂಡಿಸಿದ್ದರು.

# ಅಪರಂಜಿ ಕಂಠ ಅಪರ್ಣಾ ಪಂಚಭೂತಗಳಲ್ಲಿ ಲೀನ




## ನಮ್ಮ ಮೆಟ್ರೋಗೆ ದನಿಯಾಗಿದ್ದ ಅಪರ್ಣಾ

ಯಶಸ್ವಿ ನಿರೂಪಕಿಯಾಗಿ 3 ದಶಕಗಳ ವರೆಗೆ ಕನ್ನಡ ಸೇವೆ ಸಲ್ಲಿಸಿದ ಅಪರ್ಣಾ, 2014 ರಲ್ಲಿ ಬೆಂಗಳೂರಿನ ನಮ್ಮ ಮೆಟ್ರೋದಲ್ಲಿ ಘೋಷಣೆಯಾಗುವ 'ಪ್ರಯಾಣಿಕರು ಹತ್ತುವ, ಮತ್ತು ಇಳಿಯುವ ಸೂಚನೆಗೆ ಧ್ವನಿ ಗೂಡಿಸಿದ್ದರು.

## ಕಂಚಿನ ಕಂಠದ ಚೆಲುವೆ



## ಅಪರ್ಣಾಗೆ ಕರುನಾಡ ಅಶ್ರುತರ್ಪಣ



## ಬಾಡಿದ ಮಸಣದ ಹೂವು


1984ರಲ್ಲಿ ತೆರೆಕಂಡ ಪುಟ್ಟಣ್ಣ ಕಣಗಾಲ್ ಅವರ ಸಣದ ಹೂವು ಚಿತ್ರದಿಂದ ಬೆಳಕಿಗೆ ಬಂದರು. ನಂತರ ಇನ್‌ಸ್ಪೆಕ್ಟರ್ ವಿಕ್ರಮ್ ಸೇರಿ ಹಲವು ಚಿತ್ರಗಳಲ್ಲಿ ನಟನೆ ಮಾಡಿದರು. 90ರ ದಶಕದಲ್ಲಿ ಚಂದನ ವಾಹಿನಿಯಲ್ಲಿ ಮೂಡಿಬಂದ ಹಲವು ಕಾರ್ಯಕ್ರಮಗಳ ನಿರೂಪಣೆ ಮಾಡಿದ ನಂತರ ಭಾರತ ಸರ್ಕಾರದ ವಿವಿಧ ಭಾರತಿಯಲ್ಲಿ ರೇಡಿಯೋ ಜಾಕಿಯಾಗಿ ಕೂಡ ಕಾರ್ಯ ನಿರ್ವಹಿಸಿದ್ದರು.

## ಹೂವು, ಹಾರ ತರದಂತೆ ಮನವಿ ಮಾಡಿದ ಅಪರ್ಣಾ ಪತಿ ನಾಗರಾಜ್ ವಸ್ತಾರೆ



ಪತ್ನಿಯ ಅಂತಿಮ ದರ್ಶನಕ್ಕೆ ಬರಲಿರುವ ಸಾರ್ವಜನಿಕರಿಗೆ, ಆಪ್ತರಿಗೆ ಹೂವು-ಹಾರ ತರಬೇಡಿ ಎಂದು ಪತಿ ನಾಗರಾಜ್ ವಸ್ತಾರೆ ಮನವಿ ಮಾಡಿದ್ದಾರೆ. ಈ ಮೂಲಕ ಪರಿಸರ ಕಾಳಜಿ ತೋರಿಸಿದ್ದಾರೆ. ಅಪರ್ಣಾ ಅವರ ವಿಡಿಯೋ ಮತ್ತು ಫೋಟೋವನ್ನು ಫೇಸ್‌ಬುಕ್‌ನಲ್ಲಿ ಹಂಚಿಕೊಂಡಿರುವ ಪತಿ ನಾಗರಾಜ್ ವಸ್ತಾರೆ, ನಮಸ್ಕಾರ. ನನ್ನ ವೈಯಕ್ತಿಕ ಬದುಕಿನ ಈ ದುರ್ದೈವದ ಹೊತ್ತಿನಲ್ಲಿ ಅಪರ್ಣೆಯನ್ನು ಸ್ಮರಿಸಿರುವ ಎಲ್ಲಾರಿಗೂ ಋಣಿ. ಅವಳನ್ನು ಕೊನೆಯ ಸಲ ನೋಡಬಯಸುವವರು ಬೆಳಿಗ್ಗೆ ಏಳರಿಂದ ಹನ್ನೆರಡು ಗಂಟೆಯವರೆಗೆ ಬನಶಂಕರಿ ಎರಡನೇ ಹಂತದ ಸುಚಿತ್ರಾ ಫಿಲ್ಮ್ ಸೊಸೈಟಿಯ ಬಳಿಯಿರುವ ಅವಳಿದ್ದ ಮನೆಗೆ ಬರಬಹುದು. ದಯಮಾಡಿ ಬರಿಗೈಯಲ್ಲಿ ಬಂದರೆ ಹೆಚ್ಚು ಚೆನ್ನ. ಎರಡು ಮೂರು ತಾಸಿರುವ ಹೂವು-ಹಾರ ಬಾಡಿದಲ್ಲಿ ಇಷ್ಟು ಕಾಲ ಅವಳು ಕಾಪಿಟ್ಟ ನನ್ನ ಮನೆ-ಮನಸ್ಸುಗಳ ಸುತ್ತಲಿನ ಕಸ ಹೆಚ್ಚೀತು. ಊರಿನ ಅಂದಗೆಟ್ಟೀತು. ಪ್ಲಾಸ್ಟಿಕ್ ಪಾಲಿಥೀನುಗಳಂತೂ ಸುತಾರಾಂ ಬೇಡ. ಈ ನಿಟ್ಟಿನಲ್ಲಿ ಕಳಕಳಿಯ ಕೋರಿಕೆ ಎಂದು ಬರೆದುಕೊಂಡಿದ್ದಾರೆ.

## ಅಪರ್ಣಾ ಇನ್ನಿಲ್ಲ ಅನ್ನೋ ನೋವು ಯಾವಾಗಲೂ ಕಾಡುತ್ತದೆ



ಕನ್ನಡದ ನಿರೂಪಕಿ ಅಪರ್ಣಾ ನಿಧನದ ಬಗ್ಗೆ ನಟ ಸೃಜನ್ ಲೋಕೇಶ್ ಸಂತಾಪ ಸೂಚಿಸಿದ್ದಾರೆ. ನಟಿಯ ಅಂತಿಮ ದರ್ಶನದ ಬಳಿಕ ಮಾಧ್ಯಮಕ್ಕೆ ಪ್ರತಿಕ್ರಿಯಿಸಿ, ಅಪರ್ಣಾ ಇನ್ನಿಲ್ಲ ಅನ್ನೋ ನೋವು ಯಾವಾಗಲೂ ಕಾಡುತ್ತಲೇ ಇರುತ್ತದೆ ಎಂದು ಸೃಜನ್ ಮಾತನಾಡಿದ್ದಾರೆ. ಅಪರ್ಣಾ ನಿಧನ ನಿಜಕ್ಕೂ ಬೇಸರ ಆಗಿದೆ. ಪುಟ್ಟಣ್ಣ ಕಣಗಲ್ ನಿರ್ದೇಶನದಲ್ಲಿ ಅಪರ್ಣಾ ನಟಿಸಿದ್ದಾರೆ. ನಾವು ಯಾವಾಗಲೂ ಅವರಿಗೆ ರೇಗಿಸುತ್ತಿದ್ವಿ. ಊರು ಹುಟ್ಟೋಕ್ಕೂ ಮುಂಚೆ ಹುಟ್ಟಿದವರು ನೀವು ಅಂತ. ಅಂದಿನ ಕಾಲದಿಂದಲೂ ಆಕ್ಟಿಂಗ್ ಮಾಡ್ತಿದ್ದಾರೆ. ಎಷ್ಟೊಂದು ವರ್ಷಗಳ ಸಾಧನೆ ಅವರದ್ದು. ನಮ್ಮ ಚಿತ್ರರಂಗದಲ್ಲಿ ಲೆಜೆಂಡರಿ ಕಲಾವಿದೆ ಅಪರ್ಣಾ ಎಂದು ಸೃಜನ್ ಲೋಕೇಶ್ ಭಾವುಕರಾಗಿದ್ದಾರೆ. ಮೆಟ್ರೋದಲ್ಲೂ, ಫೋನ್‌ನಲ್ಲೂ ಎಲ್ಲಾ ಕಡೆ ಅಪರ್ಣಾದೇ ವಾಯ್ಸ್ ಕೇಳಿಸುತ್ತೆ. ಅವರು ಯಾವಾಗಲೂ ನಮ್ಮ ಜೊತೆಯೇ ಇರುತ್ತಾರೆ. ಅವರು ಎಂದಿಗೂ ಲೆಜೆಂಡಿರಿ ಅಭಿನೇತ್ರಿ, ನಿರೂಪಕಿ ಎಂದಿದ್ದಾರೆ. ನಮಗೆಲ್ಲಾ ಮಾರ್ಗದರ್ಶನ ಕೊಟ್ಟವರು. ನಾವು ಅವರನ್ನು ಮಿಸ್ ಮಾಡಿಕೊಳ್ಳುತ್ತೇನೆ. ಕಳೆದ ವಾರ ಅಷ್ಟೇ ಅವರ ಜೊತೆ ಮಾತನಾಡಿದ್ದೇ. ನಾನು ಮಜಾ ಟಾಕೀಸ್ ನೋಡಿದಾಗಲೆಲ್ಲಾ ನಾನು ಖುಷಿಯಾಗಿ ಇರುತ್ತೇನೆ ಎಂದು ಅಪರ್ಣಾ ನನ್ನ ಬಳಿ ಹೇಳಿಕೊಂಡಿದ್ದರು. ಅವರು ಇನ್ನಿಲ್ಲ ಅನ್ನೋ ನೋವು ಯಾವಾಗಲೂ ನಮ್ಮನ್ನು ಕಾಡುತ್ತಲೇ ಇರುತ್ತದೆ ಎಂದು ಸೃಜನ್ ಲೋಕೇಶ್ ಮಾತನಾಡಿದ್ದಾರೆ.

## 8 ಗಂಟೆಗಳ ನಿರೂಪಣೆ ಮಾಡಿ ದಾಖಲೆ


1998ರಲ್ಲಿ ನಡೆದ ದೀಪಾವಳಿ ಕಾರ್ಯಕ್ರಮವೊಂದನ್ನು 8 ಗಂಟೆಗಳ ನಿರೂಪಣೆ ಮಾಡಿ ದಾಖಲೆ ಬರೆದಿದ್ದರು. ಕಿರುತೆರೆಯಲ್ಲಿ ಮೂಡಲಮನೆ, ಮುಕ್ತ ಮುಂತಾದ ಧಾರಾವಾಹಿಗಳಲ್ಲಿ ನಟನೆ ಮಾಡಿದ್ದರು. 2013ರಲ್ಲಿ ಬಿಗ್ ಬಾಸ್ ಕನ್ನಡದ ಮೊದಲ ಸೀಸನ್‌ನ ಸ್ಪರ್ಧಿಯಾಗಿದ್ದರು. 2015 ರಲ್ಲಿ ಸೃಜನ್ ಲೋಕೇಶ್ ನೇತೃತ್ವದಲ್ಲಿ ಆರಂಭವಾದ 'ಮಜಾ ಟಾಕೀಸ್' ಕಾರ್ಯಕ್ರಮದಲ್ಲಿ ವರಲಕ್ಷ್ಮಿ ಪಾತ್ರ ಮಾಡಿದ್ದರು. 2014ರಲ್ಲಿ ಬೆಂಗಳೂರಿನ ನಮ್ಮ ಮೆಟ್ರೋದಲ್ಲಿ ಘೋಷಣೆಯಾಗುವ 'ಪ್ರಯಾಣಿಕರು ಹತ್ತುವ ಮತ್ತು ಇಳಿಯುವ ಸೂಚನೆ'ಗೆ ಧ್ವನಿ ನೀಡಿದ್ದು ಕೂಡ ಇವರೇ.





ನಟಿ, ಖ್ಯಾತ ನಿರೂಪಕಿ ಅಪರ್ಣಾ ಅವರ ನಿಧನದ ಸುದ್ದಿ ತಿಳಿದು ನೋವಾಯಿತು. ಸರ್ಕಾರಿ ಸಮಾರಂಭಗಳು ಸೇರಿದಂತೆ ಕನ್ನಡದ ಪ್ರಮುಖ ವಾಹಿನಿಗಳ ಕಾರ್ಯಕ್ರಮಗಳಲ್ಲಿ ಕನ್ನಡ ಭಾಷೆಯಲ್ಲಿ ಅತ್ಯಂತ ಸೊಗಸಾಗಿ ನಿರೂಪಣೆ ಮಾಡುತ್ತಾ ನಾಡಿನ ಮನೆಮಾತಾಗಿದ್ದ ಬಹುಮುಖ ಪ್ರತಿಭೆಯೊಂದು ಬಹುಬೇಗ ನಮ್ಮನ್ನು ಅಗಲಿರುವುದು ದುಃಖದ ಸಂಗತಿ. ಮೃತ ಅಪರ್ಣಾಳ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ಸಿಗಲೆಂದು ಪ್ರಾರ್ಥಿಸುತ್ತೇನೆ'

-ಸಿದ್ದರಾಮಯ್ಯ, ಮುಖ್ಯಮಂತ್ರಿ



ಕನ್ನಡದ ಖ್ಯಾತ ನಿರೂಪಕಿ ಅಪರ್ಣಾ ಅವರ ನಿಧನದ ಸುದ್ದಿ ಕೇಳಿ ಮನಸಿಗೆ ಅತ್ಯಂತ ನೋವಾಯಿತು. ಸರಳ ಕನ್ನಡದಲ್ಲಿ ಸುಂದರವಾಗಿ ಕಾರ್ಯಕ್ರಮಗಳನ್ನು ನಿರೂಪಣೆ ಮಾಡುವ ಮೂಲಕ ಎಲ್ಲಾರ ಮನೆ ಮಾತಾಗಿದ್ದರು. ಅವರ ಅಗಲಿಕೆಯಿಂದ ಕನ್ನಡ ನಾಡು ಒಬ್ಬ ಸಜ್ಜನಿಕೆಯ ನಿರೂಪಕಿಯನ್ನು ಕಳೆದುಕೊಂಡಂತಾಗಿದೆ. ದೇವರು ಅವರ ಆತ್ಮಕ್ಕೆ ಶಾಂತಿ ನೀಡಲಿ, ಅವರ ಅಗಲಿಕೆಯ ದುಖವನ್ನು ಭರಿಸುವ ಶಕ್ತಿಯನ್ನು ಅವರ ಅಭಿಮಾನಿಗಳು ಹಾಗೂ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ.

-ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ



ತಮ್ಮ ಅದ್ಭುತ ಮಾತುಗಾರಿಕೆಯಿಂದ ಹೆಸರು ಮಾಡಿದ್ದ ಖ್ಯಾತ ನಿರೂಪಕಿ, ನಟಿ ಅಪರ್ಣಾ ಅವರ ಅಕಾಲಿಕ ನಿಧನ ನಿಜಕ್ಕೂ ಬೇಸರ ತರಿಸಿದೆ. ಅಪರ್ಣಾ ಅವರಾಡುತ್ತಿದ್ದ ಶುದ್ಧ ಕನ್ನಡ ಭಾಷೆಯನ್ನು ಕೇಳುವುದೇ ಅನನ್ಯ ಅನುಭವ. ಅವರ ನಿಧನ ಯಾವತ್ತಿಗೂ ತುಂಬಲಾರದ ನಷ್ಟ. ಅಪರ್ಣಾ ಅವರ ಆತ್ಮಕ್ಕೆ ಪರಮಾತ್ಮನು ಶಾಂತಿ ಕರುಣಿಸಲಿ, ಅವರ ಕುಟುಂಬಕ್ಕೆ ಈ ಅಗಲಿಕೆಯ ನೋವನ್ನು ಭರಿಸುವ ಶಕ್ತಿ ನೀಡಲಿ ಎಂದು ಪ್ರಾರ್ಥಿಸೋಣ.

-ಸಂತೋಷ್ ಲಾಡ್, ಸಚಿವ



ಕನ್ನಡದ ಪ್ರಮುಖ ವಾಹಿನಿಗಳ ಕಾರ್ಯಕ್ರಮಗಳಲ್ಲಿ ಕನ್ನಡದಲ್ಲಿ ಸೊಗಸಾಗಿ ನಿರೂಪಣೆ ಮಾಡಿ ಮನೆಮಾತಾಗಿದ್ದ ಬಹುಮುಖ ಪ್ರತಿಭೆ ಅಪರ್ಣಾ ಅವರ ಅಗಲಿಕೆ ಕಿರುತೆರೆ ಹಾಗೂ ಚಲನ ಚಿತ್ರರಂಗಕ್ಕೆ ಅಪಾರ ನಷ್ಟ. ಅಪರ್ಣಾ ಅವರ ಆತ್ಮಕ್ಕೆ ಶಾಂತಿ ಸಿಗಲಿ, ಅವರ ಕುಟುಂಬಸ್ಥರಿಗೆ ದುಃಖ ಭರಿಸುವ ಶಕ್ತಿ ಸಿಗಲೆಂದು ಭಗವಂತ ನಲ್ಲಿ ಪ್ರಾರ್ಥಿಸುತ್ತೇನೆ

-ಜಮೀರ್ ಅಹಮದ್ ಖಾನ್, ಸಚಿವ



ಸ್ಪಷ್ಟ ಕನ್ನಡದ ಮೂಲಕ ನಿರೂಪಣೆ ಮಾಡಿ ಕನ್ನಡಿಗರ ಮನ ಗೆದ್ದ, ಖ್ಯಾತ ನಿರೂಪಕಿ, ನಟಿ ಶ್ರೀಮತಿ ಅಪರ್ಣ ಅವರ ಸಾವಿನಿಂದ ಮನಸ್ಸಿಗೆ ಅಪಾರ ನೋವುಂಟಾಗಿದೆ. ಅವರ ನಿಧನವು ಕಲಾ ಲೋಕಕ್ಕೆ ತುಂಬಲಾರದ ನಷ್ಟ. ನಿರೂಪಕಿಯಾಗಿ, ನಟಿಯಾಗಿ ದಶಕಗಳಿಂದ ದುಡಿದ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಅವರ ಕುಟುಂಬ ಹಾಗೂ ಸ್ನೇಹಿತರಿಗೆ ನನ್ನ ಸಾಂತ್ವನಗಳು.

-ಡಿಕೆ ಶಿವಕುಮಾರ್, ಉಪ ಮುಖ್ಯಮಂತ್ರಿ

## ಅಪರ್ಣಾ ಎಂದಾಕ್ಷಣ ನೆನಪಾಗೋದು ಕನ್ನಡ



ನನಗೆ ಅಪರ್ಣಾ ನಿರೂಪಣೆ ಮಾಡುವಾಗ ಆಶ್ಚರ್ಯ ಆಗುತ್ತಿತ್ತು. ಅಷ್ಟು ಸ್ಪಷ್ಟವಾಗಿ ಕನ್ನಡ ಮಾತನಾಡುತ್ತಿದ್ದರು. ನಿರೂಪಣೆ ಬಗ್ಗೆ ಅವರದಲ್ಲಿದ್ದ ಆತ್ಮವಿಶ್ವಾಸ ಅದ್ಭುತ ಅನಿಸುತ್ತಿತ್ತು. ಅಪರ್ಣಾರನ್ನು ನೋಡಿದ್ರೆ ಗೌರವ ಬರುತ್ತದೆ. ಎಂದಿಗೂ ಅವರು ಕನ್ನಡದ ಆಸ್ತಿ ಎಂದು ನಟ ರಮೇಶ್ ಅರವಿಂದ್ ಮಾತನಾಡಿದ್ದಾರೆ. ನಮ್ಮ ಮನೆಗೂ ಅವರ ಮನೆಗೂ ಒಂದು ಬೀದಿ ಅಷ್ಟೇ ಅಂತರವಿದೆ. ಸದಾ ಟಿವಿಯಲ್ಲಿ ನೋಡ್ತಿದ್ದೆ. ನಿರೂಪಣೆ ಮಾಡುವ ವೇಳೆ, ಸ್ಕ್ರಿಪ್ಟ್ ನಲ್ಲಿ ಏನೇ ಬದಲಾವಣೆಯಾದರು ಕೂಲ್ ಆಗಿ ರೆಸ್ಪಾನ್ಸ್ ಮಾಡುತ್ತಿದ್ದರು. ನಮಗೆ ಅಪರ್ಣಾ ಅಂದಾಕ್ಷಣ ನೆನಪಾಗೋದು ಅವರ ಕನ್ನಡ ಎಂದು ನಟಿಯ ಬಗ್ಗೆ ರಮೇಶ್ ಅರವಿಂದ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವರಿಗಿರುವ ಆರೋಗ್ಯ ಸಮಸ್ಯೆ ಬಗ್ಗೆ ಮೊದಲೇ ಗೊತ್ತಿತ್ತು. ಕ್ಯಾನ್ಸರ್ ಕೊನೆಯ ಸ್ಟೇಜ್ ಆಗಿತ್ತು ಅಂದರು ಅವರ ಮನೆಯವರು. ಆದರೆ ಅವರು ಎಲ್ಲೂ ಹೇಳಿಕೊಂಡಿರಲಿಲ್ಲ. ಅವರ ಆತ್ಮಕ್ಕೆ ಶಾಂತಿ ಸಿಗಲಿ. ನಾವು ನೋಡಿದಂತಹ ನಿರೂಪಕರಲ್ಲಿ ಅತೀ ಶ್ರೇಷ್ಠ ನಿರೂಪಕಿಯಾಗಿದ್ದರು ಎಂದು ರಮೇಶ್ ಅರವಿಂದ್ ಮಾತನಾಡಿದ್ದಾರೆ.

## ಅಪರ್ಣಾ ಜೊತೆಗಿನ ಒಡನಾಟ ನೆನೆದು ಪದ್ಮಜಾ ಕಣ್ಣೀರು



ಅಪರ್ಣಾ ಅಂತಿಮ ದರ್ಶನ ಪಡೆದಿರುವ ಪದ್ಮಜಾ ರಾವ್, ಅವರ ಜೊತೆಗಿನ ಆತ್ಮೀಯ ನೆನಪುಗಳನ್ನು ಹಂಚಿಕೊಂಡಿದ್ದಾರೆ. ನಟಿಯ ನಿಧನಕ್ಕೆ ಹಿರಿಯ ನಟಿ ಪದ್ಮಜಾ ರಾವ್ ಬಿಕ್ಕಿ ಬಿಕ್ಕಿ ಅತ್ತಿದ್ದಾರೆ. ಅಪರ್ಣಾ ಜೊತೆ ಇದ್ದಾಗ ನಾವು ತುಂಬಾ ನಕ್ಕಿದ್ದೇವೆ. ಕೆಲವು ಸಂಬಂಧಗಳು ವೃತ್ತಿಯಲ್ಲಿ ಸಹಕಲಾವಿದರಾಗಿ ಉಳಿದುಕೊಳ್ಳುತ್ತೇವೆ. ಆದರೆ ಕೆಲವರು ಅದನ್ನು ದಾಟಿ ಮುಂದೆ ಹೋಗುತ್ತಾರೆ. 'ಮೂಡಲ ಮನೆ' ಮತ್ತು 'ಪ್ರೀತಿ ಇಲ್ಲದ ಮೇಲೆ' ಸೀರಿಯಲ್‌ನಲ್ಲಿ ಅಪರ್ಣಾ ಜೊತೆ ಕೆಲಸ ಮಾಡಿದ್ದೇನೆ. 20 ವರ್ಷಗಳ ಗೆಳೆತನ ನಮ್ಮದು. ಕೆಲಸ ಬಿಟ್ಟು ಪ್ರತ್ಯೇಕವಾಗಿ ಸಿಕ್ಕಿದ್ದೇವೆ. ಶಾಪಿಂಗ್ ಮಾಡಿದ್ದೇವೆ, ಜೊತೆಯಾಗಿ ಕಾಲ ಕಳೆದಿದ್ದೇವೆ ಎಂದು ಅಪರ್ಣಾ ನೆನೆದು ಪದ್ಮಜಾ ರಾವ್ ಭಾವುಕರಾಗಿದ್ದಾರೆ. ಅಪರ್ಣಾ ನನ್ನ ತಂಗಿ ಹಾಗೆಯೇ ಆದರೆ ಅವಳ ಕೊನೆಯ ದಿನಗಳ ಬಗ್ಗೆ ಯಾರಿಗೂ ತಿಳಿಸಿರಲಿಲ್ಲ.



## ಮರೆಯಾದ ಕನ್ನಡದ ಮಾತಿನಮಲ್ಲಿ

## ಕಾಫಿನಾಡು ಚಿಕ್ಕಮಗಳೂರಿನ ಅಚ್ಚಕನ್ನಡ ಸ್ವಚ್ಛ ಕಂಠದ ನಿರೂಪಕಿ

## ಅಪರ್ಣಾ ಧ್ವನಿ ಅಮರ

## ಕಮಾಲ್ ಮಾಡಿದ್ದ ಅಪರ್ಣಾ


## ಜೀವನವೇ ಒಂದು ನಿತ್ಯೋತ್ಸವ' ಎನ್ನುತ್ತಿದ್ದ ನಿರೂಪಕಿ ಅಪರ್ಣಾ

## ಅಪರ್ಣಾಗೆ ಇಷ್ಟು ಬೇಗ ಸಾವು ಪಟ್ ಅಂತ ಬರುತ್ತೆ ಎಂದು ಗೊತ್ತಿರಲಿಲ್ಲ



ಸದ್ಯ ಅಪರ್ಣಾ ನಿಧನಕ್ಕೆ ಸಹನಟ ಮಂಡ್ಯ ರಮೇಶ್ ಕಂಬನಿ ಮಿಡಿದಿದ್ದಾರೆ. ಕನ್ನಡ ಅಂದರೆ ಅಪರ್ಣ ಅಪರ್ಣಾ ಅಂದರೆ ಕನ್ನಡ ಅಂತ ಮಾತಿದೆ. ಅವರ ಕನ್ನಡ ಪ್ರೀತಿ ಮಾಡಿದ ದೊಡ್ಡ ಜನ ಸಮೂಹವಿದೆ ಎಂಬುದು ಸೋಷಿಯಲ್ ಮೀಡಿಯಾದಲ್ಲಿ ಗೊತ್ತಾಗುತ್ತದೆ. 5 ವರ್ಷ ಮಜಾ ಟಾಕೀಸ್ ಮೂಲಕ ಇವರ ಜೊತೆ ಒಡನಾಟ ನಮ್ಮದು. ಎಲ್ಲಾರನ್ನೂ ಅತೀ ಪ್ರೀತಿಯಿಂದ ಮಾತನಾಡಿಸುತ್ತಿದ್ದರು ಅಪರ್ಣಾ. ಇಷ್ಟು ಬೇಗ ಸಾವು ಪಟ್ ಅಂತ ಬರುತ್ತೆ ಅಂತ ಗೊತ್ತಿರಲಿಲ್ಲ ಎಂದು ಮಂಡ್ಯ ರಮೇಶ್ ಭಾವುಕರಾಗಿದ್ದಾರೆ. ಶ್ರೇಷ್ಠವಾದ ಶುದ್ಧ ಕನ್ನಡದ ಚೆಂದದ, ಮನುಷ್ಯತ್ವ ಗುಣಗಳನ್ನ ಮರೆಯದ ನಟಿಯಾಗಿದ್ದರು. ಮಾತೃತ್ವದ ಹೆಣ್ಣು ಮಗು ಅಪರ್ಣಾ ಎಂದಿದ್ದಾರೆ. ಆರೋಗ್ಯ ಸರಿಯಿಲ್ಲ ಅನ್ನೋದಷ್ಟೇ ಗೊತ್ತಿತ್ತು. ಆದರೆ ಇಷ್ಟು ಗಂಭೀರ ಪರಿಸ್ಥಿತಿ ಇದೆ ಎಂದು ಗೊತ್ತಿರಲಿಲ್ಲ. 80 ಸಾವಿರಕ್ಕೂ ಹೆಚ್ಚು ಕಾರ್ಯಕ್ರಮ ನಿರೂಪಣೆ ಮಾಡಿದ್ದ ಹೆಗ್ಗಳಿಕೆ ಅವರದ್ದು ಎಂದಿದ್ದಾರೆ.

## ಅಪರ್ಣಾ ಅಕ್ಕ ಮುಖದಲ್ಲಿ ಎಂದಿಗೂ ನಗು ಮಾಸುತ್ತಿರಲಿಲ್ಲ



ಮಜಾ ಟಾಕೀಸ್ ಶೋನ ಸಹನಟಿ ರೂಪಿಕಾ ಕೂಡ ಅಪರ್ಣಾ ಅಂತಿಮ ದರ್ಶನ ಪಡೆದಿದ್ದು, ಅವರ ನಿಧನಕ್ಕೆ ಭಾವುಕರಾಗಿದ್ದಾರೆ. ಅಪರ್ಣಾ ಅಕ್ಕ ಜೊತೆ ಸುಮಾರು 170 ರಿಂದ 200 ಎಪಿಸೋಡ್ ಮಜಾ ಟಾಕೀಸ್‌ನಲ್ಲಿ ನಟಿಸಿದ್ದೀನಿ. ಅಪರ್ಣಾ ಅಂದರೆ ನನಗೆ ಅಕ್ಕ ಇದ್ದ ಹಾಗೆ ಇದ್ದರು. ಮಜಾ ಟಾಕೀಸ್ ವರ ಒನ್ ಅಂಡ್ ಓನ್ಲಿ ವರಲಕ್ಷ್ಮಿ ಆಗಿದ್ದರು. ಅವರು ಬಿಟ್ಟರೇ ಆ ಪಾತ್ರನ ಬೇರೆ ಯಾರು ಮಾಡೋಕೆ ಆಗುತ್ತಿರಲಿಲ್ಲ ಎಂದು ನಟಿ ರೂಪಿಕಾ ಮಾತನಾಡಿದ್ದಾರೆ. ಅವರನ್ನು ಮಿಸ್ ಮಾಡಿಕೊಳ್ತೀನಿ ಅಂತಾ ಹೇಳೋಕೆ ಆಗೋಲ್ಲ. ಅವರ ನಟನೆ, ವಾಯ್ಸ್ ನಮ್ಮ ಜೊತೆ ಟ್ರಾವೆಲ್ ಮಾಡುತ್ತಾ ಇರುತ್ತೆ. ಕಲಾವಿದರು ಹೋದ ಮೇಲೂ ಜೀವಂತವಾಗಿ ಇರುತ್ತಾರೆ. ಅದು ನಮಗೆ ವರದಾನ ಎಂದು ನಟಿಯ ಕುರಿತು ರೂಪಿಕಾ ಮಾತನಾಡಿದ್ದಾರೆ. ಅವರ ನಿಧನದ ಸುದ್ದಿ ಕೇಳಿದಾಗ ಶಾಕ್ ಆಯ್ತು. 8 ತಿಂಗಳ ಹಿಂದೆ ಶೋವೊಂದರಲ್ಲಿ ಅವರನ್ನು ಭೇಟಿ ಮಾಡಿದ್ದೆ ಆಗ ನಗುತ್ತಲೇ ಖುಷಿಯಿಂದ ಮಾತನಾಡಿದರು. ಚೆನ್ನಾಗಿ ಡ್ಯಾನ್ಸ್ ಮಾಡಿದೆ ಎಂದು ನನಗೆ ಹೇಳಿದ್ದರು. ಅವರ ಮುಖದಲ್ಲಿ ಎಂದಿಗೂ ನಗು ಮಾಸುತ್ತಿರಲಿಲ್ಲ ಎಂದು ನಟಿ ಸ್ಮರಿಸಿದ್ದಾರೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966